SRI H. V. KOUJALGI.—No, Sir, this is the second time. At least before the next examinations come, I request the Government to hold these examinations only by this Board and not by any other Board.

Then, Sir, so far as building grant is concerned, this subject was raised in 1956 but due to integration, we did not get any funds. Even in 1957 these districts did not get any funds because the whole time was spent in procedural matters and papers went from office to office. So, we have wasted two years. We cannot progress in this direction. I am glad at least some amount has been provided for these four districts. But, Sir, whatever be the amount that is provided, it should reach the concerned authority before the end of June so that they could take up the work as early as possible. You must leave the matter of procedure to that authority itself because the Secretariat does not know the procedural matter in Bombay and much of the time is wasted. As a result, for the last two years many of the buildings have not been repaired because even the amount that is provided for the repairs is sent late. By the time the Engineer comes and prepares the estimate the cost would go high and he would say that it is not possible to do the work within the amount provided; the papers will have to go back and by the time everything is finalised the cost would have gone up two or three times. The building would have been damaged by that time. So, whatever amount that is provided should be allowed to be spent at the discretion of the local officers so that they may do the work immediately.

The next point is, so far as these four districts are concerned, we have District School Boards. The whole of the primary education is entirely in the hands of this Board. I heard the speech of the Governor and the speech of the Finance Minister and nowhere I could see the policy of the Government so far as this School Board is concerned. The Local Boards Act has been circulated and even that is silent on this subject. It would have been better if the Government had made its policy clear so that they can evince keen interest in the affairs.

The other point that I wish to bring to the notice of the Government is, whenever an administrative officer is either promoted or transfered or

when he goes on leave, immediately another substitute should be posted to that place. At least in Belgaum, Dharwar and Bijapur this is not being done at present. Posts will be vacant for 2 or 3 months. Some officer in that particular office will be asked to take charge of that post also, with the result the administration is hampered and there is no progress. So, I request Government to appoint substitutes immediately in such cases.

The next point which I would urge is about the social education. So far as these four districts are concerned, there is a Board which simply supervises and inspects the work, but the real work is entrusted to the Assistant Deputy Educational Inspectors who are also in charge of the other primary education. In my humble opinion, they are already over-worked and they cannot attend to this work also. Moreover, they will have to look to this work during night. We cannot expect an officer who is already over-worked to look to this at night. Much of the money is wasted and many of the centres are bogus. There is a lot of public criticism about this and there is truth in it. So far as the scheme is concerned, it is a good one. I suggest that there must be a special officer to supervise and guide these teachers. I do not say that additional expenditure must be incurred on this. But some of the extra staff or the educational inspectors may be allotted specially for this work; otherwise, the money which we spend on this would be a waste.

3 P.M.

Lastly, after the integration, we expected that there would be an uniform policy so far as education is concerned. Nearly eighteen months have gone by and in all these five integrated areas, the old system is still followed. So it is high time and I request the Government that before the next Budget is presented a uniform policy would be there and we need not have any such criticism next time.

Thank you, Sir.

Sri L. S. VENKAJI RAO (Basavangudi).—It is now 3 o'clock, Sir.

Mr. SPEAKER.—No recess. Sri Y. Veerappa will speak.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ವಿದ್ಯಾ ಇಲಾಖೆಗೆ ಸಂಬಂಧಪಟ್ಟ ನ್ಯೂನತೆಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ತಿಳಿಸಬೇಕೆಂದು ನಾನು ನಿಂತಿದ್ದೇನೆ. ವಿದ್ಯಾಶಾಖೆಯಲ್ಲಿನ ಪ್ರಾಥಮಿಕ ವಿದ್ಯಾಭ್ಯಾಸದ ಪಾಠಶಾಲೆಗಳು ಇವೊತ್ತಿನ ದಿವಸ ದೇಶದ ಬಹುಮುಖ್ಯವಾದ ಅಡಿಗಲ್ಲಿನೋಪಾದಿಯಲ್ಲಿವೆ. ಈಗ ಇವುಗಳ ಸ್ಥಿತಿಗತಿಗಳು ಹೇಗಿವೆ, ಇವುಗಳ ಬಗ್ಗೆ ಯಾವರೀತಿಯಾದಂಥ ಒಂದು ವ್ಯವಸ್ಥೆ ನಡೆಯುತ್ತಿದೆ, ಅಲ್ಲಿ ವಿದ್ಯಾಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ತರಬೇತು ಪಡೆಯುತ್ತಿದ್ದಾರೆಂಬುದನ್ನು ನೋಡಿದರೆ, ಅಷ್ಟು ಹೆಮ್ಮೆಯಿಂದ ಹೇಳತಕ್ಕ ಮಾತಲ್ಲ. ನಾನು ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ ಪ್ರತಿವರ್ಷವೂ ಸರ್ಕಾರದವರು ತಮ್ಮ ಬೊಕ್ಕಸದಿಂದ ವಿಶೇಷವಾದ ಹಣವನ್ನು ಬಹು ಮುಖ್ಯ ಖಾತೆಯಾದ ಮತ್ತು ಗುರುತರವಾದ ಜವಾಬ್ದಾರಿಯುಳ್ಳ ವಿದ್ಯಾ ಇಲಾಖೆಗೆ ಖರ್ಚು ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ಎಷ್ಟರಮಟ್ಟಿಗೆ ಮುತುವರ್ಜಿವಹಿಸಿ ವಿದ್ಯಾಭ್ಯಾಸ ಇಲಾಖೆಯಲ್ಲಿರತಕ್ಕ ನ್ಯೂನತೆಗಳನ್ನು ನಿರ್ಮೂಲಗೊಳಿಸುವುದಕ್ಕೆ ಉತ್ಸಾಹಭರಿತರಾಗಿದ್ದಾರೆ ಎನ್ನುವುದನ್ನು ಹೇಳುವುದಕ್ಕೆ ಯಾವ ಒಂದು ಆಧಾರವೂ ಇಲ್ಲ. 1942ನೆಯ ಇಸವಿಯಲ್ಲಿ ಗಾಣದಳ್ಳಿ ಗ್ರಾಮದವರು ತಮ್ಮ ಗ್ರಾಮದಲ್ಲಿ ಸರ್ಕಾರೀ ಪ್ರೈಮರಿ ಸ್ಕೂಲುಗಳ ಕಟ್ಟಡಗಳನ್ನು ಕಟ್ಟುವ ಬಗ್ಗೆ ಸರ್ಕಾರವನ್ನು ಕೇಳಿದಾಗ ಸರ್ಕಾರದವರು ಗ್ರಾಮದವರನ್ನು ನೀವು ಹಣವನ್ನು ಡಿಪಾಜಿಟ್ ಮಾಡಿದರೆ ಸ್ಕೂಲು ಕಟ್ಟಡವನ್ನು ಕಟ್ಟುತ್ತೇವೆಂದು ಭರವಸೆ ಕೊಟ್ಟರು. ನನಗೆ ತಿಳಿದಿರುವ ಅಂಕಿ ಅಂಶಗಳ ಪ್ರಕಾರ ಹಳೆಯ ಮೈಸೂರಿನ ಪ್ರದೇಶಗಳಲ್ಲಿ ಸುಮಾರು ಐದಾರು ಲಕ್ಷರೂಪಾಯಿಗಳನ್ನು ಹಳ್ಳಿಯವರಿಂದ ವಸೂಲು ಮಾಡಿದರು. ಇಲ್ಲಿಯ ತನಕ ಆಯಾಯ ತಾಲ್ಲೂಕಿನ ಟ್ರೆಜರಿಗಳಲ್ಲಿ ಆಯಾ ತಾಲ್ಲೂಕಿನ ದುಡ್ಡನ್ನು ಡಿಪಾಜಿಟ್ ಮಾಡಿದ್ದರೂ 1942ನೆಯ ಇಸವಿಯಿಂದ ಬೊಕ್ಕಸದಲ್ಲಿಟ್ಟಿದ್ದ ಹಣವನ್ನು ಯಾವ ಉದ್ದೇಶದಿಂದ ಗ್ರಾಮಸ್ಥರು ಕೊಟ್ಟಿದ್ದರೋ ಆ ಉದ್ದೇಶಕ್ಕಾಗಿ ಉಪಯೋಗಿಸದೆ, ಅವರಿಗೆ ಬಡ್ಡಿ ವಗೈರೆ ರಿಯಾಯಿತಿ ಕೊಡದೆ, ಬಹುಮಟ್ಟಿಗೆ ಇವತ್ತಿನ ದಿವಸ ತೊಂದರೆ ಮಾಡಿದ್ದಾರೆಂದು ಹೇಳಬಹುದು. ಆದರೆ ಈಗಿನ ಸರ್ಕಾರ ನಾವಲ್ಲ ಅದಕ್ಕೆ ಜವಾಬ್ದಾರರು ಎಂದು ಹೇಳಬಹುದು. ಮತ್ತು ಅದು ಬೇಜವಾಬ್ದಾರಿ ಸರ್ಕಾರ ಇದ್ದಾಗ ಮಾಡಿದ್ದು ಎಂದು ಹೇಳಬಹುದು. ಆದರೆ 1947ನೆಯ ಇಸವಿಯಿಂದ ಈ ಸರ್ಕಾರದ ಆಡಳಿತ ಸೂತ್ರವನ್ನು ಹಿಡಿದಂಥ ಆಡಳಿತ ಪಕ್ಷ ಬಹು ಮುಖ್ಯ ಖಾತೆಯಾದ ವಿದ್ಯಾಭ್ಯಾಸದ ಇಲಾಖೆಯಲ್ಲಿರುವ ನ್ಯೂನತೆಗಳಿಗೆ ತಿದ್ದುಪಡಿ ಮಾಡಬಹುದಾಗಿತ್ತು.

ಶ್ರೀ ವಿ. ವೆಂಕಟಪ್ಪ.—ಆಯವ್ಯಯದ ಸಾಮಾನ್ಯ ಚರ್ಚೆಯಮೇಲೆ ಉತ್ತರ ಕೊಡುವಾಗ ಈ ವಿದ್ಯಾಭ್ಯಾಸದ ವಿಚಾರದಲ್ಲಿ ಮಾತನಾಡುವಾಗ ಯಾರು ಯಾರು ಸ್ಕೂಲು ಕಟ್ಟಡಗಳಿಗಾಗಿ ಹಣವನ್ನು ಕೊಟ್ಟಿದ್ದಾರೆ ಎಂಬುದಕ್ಕೆ ಒಂದು ಪಟ್ಟಿಯನ್ನು ಆಗಲೇ ತಯಾರು ಮಾಡಿದ್ದೇವೆಂದು ಹೇಳಿದ್ದೇನೆ, ಮತ್ತು ಪ್ರಶ್ನೋತ್ತರ ಕಾಲದಲ್ಲಿಯೂ ಇಂತಹ ಕೆಲವು ಪ್ರಶ್ನೆಗಳಿಗೆ ಮೊದಲೇ ಉತ್ತರ ಹೇಳಿದೆ.

ಶ್ರೀ ಪೈ. ವೀರಪ್ಪ.—ಆ ಪಟ್ಟಿ ತಯಾರು ಮಾಡುವುದಕ್ಕೆ ನಾನೇ ಕಾರಣನೆಂದು ನಾನು ಸ್ವಲ್ಪ ಉತ್ಸಾಹದಿಂದ ಹೇಳಬೇಕಾಗಿದೆ. ನಾನು ಈ ಬಗ್ಗೆ ಒಂದು ಪ್ರಶ್ನೆಯನ್ನೂ ಸಹ ಕಳುಹಿಸಿದ್ದೆ. ಹಳೆಯ ಮೈಸೂರಿನಲ್ಲಿ ಯಾವ ಯಾವ ಸ್ಥಳಗಳಲ್ಲಿ ಪೈತೃಮರಿ ಸ್ಕೂಲು ಕಟ್ಟಡಗಳನ್ನು ಕಟ್ಟಬೇಕೆಂದು ಯಾವ ಯಾವ ಗ್ರಾಮಗಳಿಂದ ಎಷ್ಟೆಷ್ಟು ಹಣವನ್ನು ಸರ್ಕಾರದವರು ತಮ್ಮ ಖಜಾನೆಯಲ್ಲಿ ಕೂಡಿಸಿಕೊಂಡಿದ್ದಾರೆ ಎಂಬುದಾಗಿ ಪ್ರಶ್ನೆ ಕಳುಹಿಸಿದ್ದೆ. ಆಗ ಸರ್ಕಾರದವರು ನಿಮ್ಮ ಜಿಲ್ಲೆಗೆ ಸಂಬಂಧಪಟ್ಟ ವಿಷಯವನ್ನು ಮಾತ್ರ ಕೇಳಿ ಎಂದು ಹೇಳಿದರು. ಮುಖ್ಯವಾಗಿ ಇಡಿಯ ಮೈಸೂರಿನ ವೈತೃಶಿಷ್ಯ ನಮಗೆ ಗೊತ್ತಾಗಲಿ ಎಂಬ ಉದ್ದೇಶದಿಂದ ಹಳೆಯ ಮೈಸೂರಿನ ಅಂಕಿ ಅಂಶಗಳು ಬೇಕೆಂಬುದಾಗಿ ಪ್ರಶ್ನೆ ಮಾಡಿದ್ದೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಇನ್ನೂ ಈ ಸಭೆಯಲ್ಲಿ ಅದರ ಚರ್ಚೆಯಾಗಿಯೂ ಇಲ್ಲ. ಮಾನ್ಯ ಮಂತ್ರಿಗಳು ಈಗ ತಾನೇ ಯಾರು ಯಾರು ಸ್ಕೂಲು ಕಟ್ಟಡಗಳಿಗಾಗಿ ಹಣವನ್ನು ಕೊಟ್ಟಿದ್ದಾರೋ ಅವರ ಒಂದು ಪಟ್ಟಿಯನ್ನು ತಯಾರು ಮಾಡಿ ಅದರ ಮೇಲೆ ಬೇಕಾದಷ್ಟು ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದರು. ಅದೂ ಅಲ್ಲದೆ ನನಗೆ ಮತ್ತೊಂದು ವರ್ತಮಾನ ತಿಳಿದು ಬಂದಿರುವ ಪ್ರಕಾರ, ಯಾವ ಯಾವ ಹಳ್ಳಿಯವರು ಸ್ಕೂಲು ಕಟ್ಟಡಗಳ ಬಗ್ಗೆ ಡಿಪಾಜಿಟ್ ಮಾಡಿದ್ದಾರೋ ಅಂತಹವರಿಗೆ ಮ್ಯಾಚ್‌ಗ್ರಾಂಟು ಕೊಡುವುದಾಗಿಯೂ, ಅದಕ್ಕೆ ನಮೂನಾಗಿ ಹಣವನ್ನು ಹಳ್ಳಿಯವರು ಕೊಡುವುದಕ್ಕೆ ಒತ್ತಾಯ ಮಾಡದಂತೆಯೂ, ಜಾಗ್ರತೆಯಾಗಿ ಕಟ್ಟಡಗಳನ್ನು ನಿರ್ಮಿಸಬೇಕೆಂಬುದಾಗಿಯೂ ಸರ್ಕಾರದವರು ಹೋದ ತಿಂಗಳು 14ನೆಯ ತಾರೀಖಿನಲ್ಲಿ ಆರ್ಡರ್ ಮಾಡಿದ್ದಾರೆ. ಅದನ್ನು ಕೇಳಿ ನನಗೆ ಬಹಳ ಸಂತೋಷವುಂಟಾಯಿತು. ನಾನು ಅನೇಕ ಹಳ್ಳಿಗಳಲ್ಲಿ ಪ್ರವಾಸ ಮಾಡಿದ ಕಾಲದಲ್ಲಿ ನೋಡಿದ್ದೇನೆ. ಅನೇಕ ಸ್ಕೂಲುಗಳು ದೇವಸ್ಥಾನಗಳಲ್ಲಿಯೇ ನಡೆಯುತ್ತಿವೆ. ನನ್ನ ಸ್ನೇಹಿತರನೇಕರು ಎಷ್ಟೋಸಾರಿ ತಮ್ಮ ಹುಡುಗರು ಮಳೆಯಲ್ಲಿ ನೆನೆದು ಬಿಸಿಲನಲ್ಲಿ ಒಣಗಿ ಯಾವ ಒಂದು ಆಶ್ರಯವಿಲ್ಲದೆ ಇರುವ ದೇವಸ್ಥಾನದಲ್ಲಿ ನಡೆಯುವ ಸ್ಕೂಲುಗಳಿಗೆ ಹೋಗಿ ಯಾವರೀತಿ ವಿದ್ಯಾಭ್ಯಾಸ ಮಾಡಬೇಕು ಎಂದು ಹೇಳುತ್ತಿರುವ ಪ್ರಸಂಗಗಳು ಬೇಕಾದಷ್ಟು ಬಂದಿವೆ. ಈಗ ಆ ಬಗ್ಗೆ ಸರ್ಕಾರದ ಆಜ್ಞೆಯಾಗಿದೆ ಎಂದು ನನಗೆ ತಿಳಿದು ಬಂದಿರುವುದರಿಂದ ಆಯಾ ಜಿಲ್ಲಾಧಿಕಾರಿಗಳು ಯಾವ ಯಾವ ಹಳ್ಳಿಯವರು ಕಟ್ಟಡಗಳ ಬಗ್ಗೆ ಡಿಪಾಜಿಟ್ ಮಾಡಿದ್ದಾರೋ ಆಯಾ ಗ್ರಾಮಗಳಲ್ಲಿ ಈ ಕಟ್ಟಡಗಳ ಕೆಲಸವನ್ನು ಜಾಗ್ರತೆಯಾಗಿ ಪೂರೈಸಬೇಕೆಂದು ಒತ್ತಾಯ ಪಡಿಸುತ್ತೇನೆ. ಈಗಿರತಕ್ಕ ಹಳೆಯ ಸ್ಕೂಲಿನ ಉಪಾಧ್ಯಾಯರುಗಳ ಒಂದು ಮಟ್ಟ ಹೇಗಿದೆ ಎಂದು ಹೇಳಿದರೆ ನನ್ನ ಮಾನ್ಯ ಪಿತೃರಾದ ಶ್ರೀಮಾನ್ ಮಲ್ಲಾರಾಧ್ಯರು ಹೇಳಿದ್ದು ಸತ್ಯಾಂಶವಾಗಿದೆ. ಅವರು ದೇಶದಲ್ಲಿ ಶೇಕಡ 50 ಭಾಗದಷ್ಟು ಸ್ಕೂಲುಗಳಲ್ಲಿ ತರಪೇತು ಹೊಂದದಿರುವ ಉಪಾಧ್ಯಾಯರು ಇದ್ದಾರೆಂದು ಹೇಳಿದರು. ಅದಕ್ಕೋಸ್ಕರವಾಗಿ ನಮ್ಮ ಸರ್ಕಾರದವರು ಜಾಗ್ರತೆ ಉಪಾಧ್ಯಾಯರುಗಳನ್ನು ತರಪೇತು ಮಾಡುವ ಕೇಂದ್ರಗಳನ್ನು ತೆರೆದು ಪರಿಪಕ್ವವಾದ ತರಪೇತನ್ನು ಅವರಿಗೆ ಕೊಟ್ಟರೆ, ನಿಜವಾಗಿ ಭಾವಿ ಜನಾಂಗ ಸರಿಯಾದ ರೀತಿಯಲ್ಲಿ ವಿದ್ಯಾವಂತರಾಗುವುದಕ್ಕೆ ಅನುಕೂಲವಾಗುತ್ತದೆ. ಒಂದು ಸಂದರ್ಭದಲ್ಲಿ ವಿದ್ಯಾ ಇಲಾಖೆಯ ಡೈರೆಕ್ಟರ್ ಸಾಹೇಬರವರು ಹಾಸನ ಜಿಲ್ಲೆಗೆ ಭೇಟಿ ಇತ್ತಾಗ, ಹೊಳೇನರಸೀಪುರದ ಶ್ರೀರಾಮದೇವರ ಗುಡಿಯಕಡೆ ಒಂದು ಉಪಾಧ್ಯಾಯರ ಟ್ರೈನಿಂಗ್ ಸೆಂಟರನ್ನು ತೆರೆಯುವುದಾಗಿ ಒಂದು ವದಂತಿ ಬಂತು. ಆಗ ನಾನು ಅಸೆಂಬ್ಲಿ ಕಾರ್ಯದಲ್ಲಿದ್ದೆ. ಉಪಾಧ್ಯಾಯರ ತರಪೇತು ಮಾಡುವ ಕೇಂದ್ರವನ್ನು ತೆರೆಯುವುದಕ್ಕೆ ಒಳ್ಳೆಯ ಅಯಕ್ಕಾದ ಸ್ಥಳವಾಗಿದೆ. ಅಲ್ಲಿ ಹೇಮಾವತಿ ನದಿ ಇದೆ. ಒಳ್ಳೆಯ ಪ್ರಕೃತಿ ಸೌಂದರ್ಯವಿದೆ. ಒಳ್ಳೆಯ ವಾತಾವರಣ. ಅಂತಹ ಸ್ಥಳದಲ್ಲಿ ಉಪಾಧ್ಯಾಯರ ತರಪೇತು ಕೇಂದ್ರವನ್ನು ತೆರೆದರೆ ಬಹಳಮಟ್ಟಿಗೆ ಫಲಕಾರಿಯಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಅತಿ ಶೀಘ್ರವಾಗಿ ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ನನ್ನ ತಾಲ್ಲೂಕು ಹೊಳೇನರಸೀಪುರದ ಅನುಭವ ಹೇಳುವುದಾದರೆ, ಅಲ್ಲಿ ಒಂದು ಗರ್ಲ್ಸ್ ಹೈಸ್ಕೂಲ್ ಇದೆ. ಅಲ್ಲಿ ಬಹುತೇಕಮಂದಿ ಮುಸಲ್ಮಾನ್ ಹೆಣ್ಣು ಮಕ್ಕಳು ವಿದ್ಯಾರ್ಥಿನಿಯರು. ಇಂಗ್ಲಿಷ್ ಸೆಕ್ಷನ್ ಅಲ್ಲಿ ತೆರೆಯದಿರುವುದರಿಂದ ಅವರಿಗೆ ಆ ಸ್ಕೂಲಿಗೆ ಹೋಗುವುದಕ್ಕೆ ಬಹಳ ತೊಂದರೆಯಾಗಿದೆ. ಆದಕ್ಕೆ ತಕ್ಕ ವ್ಯವಸ್ಥೆಯನ್ನು ಜಾಗ್ರತೆ ಮಾಡಬೇಕು. ನಾನು ತಿಳಿದಿರುವ ಪ್ರಕಾರ ಅವರು ಸರ್ಕಾರಿ ಆರ್ಡರನ್ನು ಸರಿಯಾಗಿ ಇಂಟರ್‌ಪ್ರೆಟ್ ಮಾಡದೆ ಜಾರಿಗೆ ತಂದಿದ್ದಾರೆ. ಒಂದು ಸಾರಿ ಮಾನ್ಯ ವಿದ್ಯಾ ಉಪಮಂತ್ರಿಗಳು ಈ ಸ್ಕೂಲಿಗೆ ದಯಮಾಡಿಸಿದ್ದರು. ಅವರಿಗೂ ಸಹ ಇಲ್ಲಿ ಇಂಗ್ಲಿಷ್ ಸೆಕ್ಷನ್ನನ್ನು ಕಡ್ಡಾಯವಾಗಿ ತೆಗೆಯಬೇಕು ಎಂಬುದಾಗಿ ನಿವೇದನೆ ಮಾಡಿಕೊಂಡಿದ್ದೆವು. ನಾನು ಸುಮಾರು ಇಪ್ಪತ್ತೈದು ವಿದ್ಯಾರ್ಥಿನಿಯರಾದರೂ ಬರುತ್ತಾರೆಂದು ಭರವಸೆ ಕೊಡುತ್ತೇನೆ. ಏನು ಕಾರಣವೋ, ಇದುವರೆಗೆ ಯಾವ ಕ್ರಮವನ್ನೂ ಆ ಬಗ್ಗೆ ಸರ್ಕಾರದವರು ತೆಗೆದುಕೊಂಡಿಲ್ಲ. ಮತ್ತೊಮ್ಮೆ ಸರ್ಕಾರದ ಆಜ್ಞೆಯನ್ನು ಇಂಟರ್‌ಪ್ರೆಟ್ ಮಾಡಿ ನೋಡಿದರೆ ನಿಜವಾಗಿಯೂ ಅವರು ಮಾಡಿರುವ ರೀತಿ ಅಷ್ಟು ತಾರತಮ್ಯವಾಗಿಲ್ಲ, ಸರಕಾರದ ಹೈಸ್ಕೂಲಿನಲ್ಲಿ ಆ ರೀತಿ ಆಗಿದ್ದರೂ ಆಗಿರಬಹುದು.

ಮುನಿಸಿಪಲ್ ಮತ್ತು ಗ್ರಾಂಟ್-ಇನ್-ಏಡ್ ಸ್ಕೂಲುಗಳಲ್ಲಿರತಕ್ಕಂಥ ಉಪಾಧ್ಯಾಯರುಗಳ ಸಂಬಳದಲ್ಲಿ ಇರತಕ್ಕ ತಾರತಮ್ಯ ಬಹಳ ಜಾಸ್ತಿ. ರಾಜ್ಯಾಂಗ ನೀತಿಯಿಂದ ಮತ್ತು ರಾಜ್ಯದ ಆದಳಿತ ದೃಷ್ಟಿಯಿಂದ ನೋಡಿದರೆ ಯಾವ ತರಹ ಬಂದೋಬಸ್ತೂ ಇಲ್ಲದ ರೀತಿ ಇದೆ. ಸರ್ಕಾರದ ಮಟ್ಟದಲ್ಲಿ ಅವರಿಗೆ ಸಂಬಳ ಸಾರಿಗೆ, ಅಲೋಯನ್ಸ್ ಕೊಡುತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—ಸರ್ಕಾರದ ಆಜ್ಞೆಯನ್ನು ಅವರೂ ಸಹ ಜಾರಿಗೆಕೊಡುವಂತೆ ಒಪ್ಪಿಕೊಂಡಿದ್ದಾರೆ.

ಶ್ರೀ ಪೈ. ವೀರಪ್ಪ.—ತಾವು ಹೇಳಿದಿರಿ. ಆದರೆ ಬಹಳ ಮಟ್ಟಿಗೆ ಅವರ ಹಣಕಾಸಿನ ಸ್ಥಿತಿಗತಿ ಚಿಂತಾಜನಕವಾಗಿದೆ.

ಶ್ರೀ ವಿ. ವೆಂಕಟಪ್ಪ.—ಇಂತಹ ಒಂದೆರಡು ಹೈಸ್ಕೂಲು ವಿನಾ ಎಲ್ಲಾ ಇತರ ಹೈಸ್ಕೂಲನವರೂ ಒಪ್ಪಿಕೊಂಡಿದ್ದಾರೆ.

ಶ್ರೀ ಪೈ. ವೀರಪ್ಪ.—ಈಚಿನ ಅನುಭವದ ಮೇಲೆ ಅನೇಕ ಸ್ಥಳೀಯ ಸಂಸ್ಥೆಗಳಲ್ಲಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ.

ಶ್ರೀ ವಿ. ವೆಂಕಟಪ್ಪ.—ಅದಕ್ಕೆ ನಾವು ಏನು ಮಾಡಬೇಕು?

(ಶ್ರೀ ಜಿ. ದುಗ್ಗಪ್ಪ)

ಹೇಳತಕ್ಕಂಥ ಉಪಾಧ್ಯಾಯರ ವಿದ್ಯೆ ಬುದ್ಧಿಗಳ ಮಟ್ಟ ಬಹಳ ಚೆನ್ನಾಗಿರಬೇಕು. ಈ ವಿಚಾರದಲ್ಲಿ ನನಗೂ ಸ್ವಲ್ಪ ಅನುಭವವಿದೆ. ಈ ವಿದ್ಯಾಭ್ಯಾಸ ನಡೆಸತಕ್ಕ ವಿಚಾರದಲ್ಲಿ ಸ್ವಲ್ಪ ಉನ್ನತ ವಿದ್ಯಾ ಮಟ್ಟದ ಜನ ಬರಬೇಕಾದದ್ದು ಯೋಗ್ಯವೆಂಬ ಭಾವನೆ ನನಗಿದೆ. ಈ ದಿವಸ ಈ ವಿಚಾರದಲ್ಲಿ P.S.C. ಅವರು ಕೆಲವು ಹೆನರುಗಳನ್ನು ಎಲಿಸ್ಟ್ ಮಾಡುತ್ತಿದ್ದಾರೆ S.S.L.C. ಪಾಸಾಗಿರುವವರಾದರೇ ಸಾಲದು, ಅವರಿಗೆ ಟ್ರೈನಿಂಗ್ ಸಹ ಆಗಿರಲೇ ಬೇಕು ಅಂಥವರನ್ನು ಮಾತ್ರ ಅಧ್ಯಾಪಕರನ್ನಾಗಿ ಎಲಿಸ್ಟ್ ಮಾಡಬೇಕೇ ಶಿವಾಯಿ ಬರಿ S.S.L.C. ಪಾಸಾದವರನ್ನು ತೆಗೆದು ಕೊಳ್ಳಬಾರದೆಂಬ ನೀತಿಯನ್ನು ಸರ್ಕಾರದವರು ಕಡ್ಡಾಯವಾಗಿ ಅನುಸರಿಸಬೇಕು. ಆ ರೀತಿ ಇವರ ಬಗ್ಗೆ ಕಾರ್ಯಗತ ಮಾಡಲು ಸೂಕ್ತ ಏರ್ಪಾಡು ಗಳನ್ನು ಕೈಗೊಳ್ಳಬೇಕೆಂದು ಸೂಚಿಸುತ್ತೇನೆ. ಇನ್ನು ಈ ಅಧ್ಯಾಪಕರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ, ಇಲ್ಲವೇ ಎಂಬುದನ್ನು ಸರಿಯಾಗಿ ಕಾಲಕಾಲಕ್ಕೆ ಇನ್ಸ್‌ಪೆಕ್ಷನ್ ಮಾಡಿ ನೋಡಿಕೊಳ್ಳುತ್ತಿರಬೇಕು. ನನಗೆ ಸ್ವತಃ ಮೇಸ್ಟರ ಕೆಲಸ ಮಾಡಿರತಕ್ಕ ಅನುಭವವೂ ಇದೆ. ಹಳ್ಳಿ ಸ್ಕೂಲುಗಳು ಯಾವ ರೀತಿ ಕೆಲಸ ಮಾಡುತ್ತಿರುತ್ತವೆಂಬ ಅನುಭವವೂ ನನಗಿದೆ. ಏನೇ ಇರಲಿ ಈ ಬಗ್ಗೆ ಅಧ್ಯಾಪಕರು ಸರಿಯಾಗಿ ಕೆಲಸ ಮಾಡುತ್ತಾರೆಯೇ ಇಲ್ಲವೇ ಎಂಬುದನ್ನು ಆಗಿಂದಾಗ್ಗೆ ಇನ್ಸ್‌ಪೆಕ್ಟರುಗಳು ಹೋಗಿ ನೋಡಿಕೊಳ್ಳುತ್ತಿರಬೇಕು. ಇದು ಅವರ ಕರ್ತವ್ಯ. ಆದರೆ ಈ ದಿವಸ ಈ ಇನ್ಸ್‌ಪೆಕ್ಟರುಗಳು ಸರಿಯಾಗಿ ನಿಗಾ ಇಟ್ಟು ತಮ್ಮ ಕೆಲಸ ನಡೆಸುತ್ತಿಲ್ಲ ಎಂಬ ಅಂಶವನ್ನು ನಾನೀಗ ಸರ್ಕಾರ ದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ದಿವಸ ಜಿಲ್ಲಾ ವಿದ್ಯಾಧಿಕಾರಿಗಳು ಆ ಇನ್ಸ್‌ಪೆಕ್ಟರುಗಳಿಗೆಲ್ಲ ವಾರ್ನಿಂಗ್ ಕೊಟ್ಟಿದ್ದಾರೆ. ಆದರೂ ಪ್ರಯೋಜನವಿಲ್ಲ. ಆದರೆ ಈ ಇನ್‌ಸ್ಪೆಕ್ಷನ್ ಕೆಲಸದಲ್ಲಿ ಯಾರು ಚುರುಕಾಗಿ ಬಹಳ ಚಟುವಟಿಕೆಯಿಂದ ತೀವ್ರವಾಗಿ ಕೆಲಸ ಮಾಡು ತ್ತಾರೋ ಅಂಥವರನ್ನೇ ಈ ಕೆಲಸಕ್ಕೆ ನೇಮಕ ಮಾಡಿಕೊಳ್ಳಬೇಕು. ಆಗಲೇ ಈ ಅಧ್ಯಾಪಕರು ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿರುತ್ತದೆ. ಇದಿಷ್ಟೂ ಆ ಉಪಾಧ್ಯಾಯರ ಮತ್ತು ಇನ್ಸ್‌ಪೆಕ್ಟರುಗಳ ವಿಚಾರವಾಯಿತು.

ಇನ್ನು ಸ್ಕೂಲುಗಳ ವಿಚಾರ. ಸ್ಕೂಲುಗಳೇನೋ ಅನೇಕ ಕಡೆ ಇರುತ್ತವೆ. ಆದರೆ ಅವುಗಳು ಯಾವ ಸ್ಥಿತಿಯಲ್ಲಿರುತ್ತವೆಂಬುದರ ಬಗ್ಗೆ ನಾನೀಗ ನಮ್ಮ ಚಿತ್ರದುರ್ಗ ಜಿಲ್ಲೆಯ ಅನುಭವವನ್ನು ಮಾತ್ರ ಹೇಳ ಲಿಚ್ಛಿಸುತ್ತೇನೆ. ಈ ಶಾಲೆಗಳಿಗೆ ಬೇಕಾದ ಉಪ ಕರಣಗಳೊಂದೂ ಇರುವುದಿಲ್ಲ. ಹುಡುಗರಿಗೆ ಬರೆದು ತೋರಿಸಲು ಒಂದು ಕಪ್ಪು ಹಲಗೆ—ಒಂದು ಚಾಕ್ ಪೀಸ್ ಸಹಿತ ಇರುವುದಿಲ್ಲ. ಭೂಪಠಗಳಿರುವುದಿಲ್ಲ. ಹೀಗೆರ್ಲಾ ಶೋಚನೀಯ ಪರಿಸ್ಥಿತಿಗಳಿವೆ. ಶಾಲೆ ಗಳಿಗೆ ಈ ಉಪಕರಣಗಳಿರಬೇಕಾದದ್ದು ಅತಿ ಮುಖ್ಯ ವಾದದ್ದು. ಈ ದಿವಸ ಸರ್ಕಾರದವರು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕಸಬೆಗಳಲ್ಲಿ ರತಕ್ಕ ಶಾಲೆಗಳ ವಿಚಾರದಲ್ಲಿ ಎಷ್ಟು ನಿಗಾ ಕೊಡುತ್ತಿ ದ್ದಾರೋ ಅಷ್ಟೇ ನಿಗವನ್ನು ಅವರು ಆ ಹಳ್ಳಿ ಸ್ಕೂಲುಗಳಿಗೂ ಕೊಡಬೇಕಾದುದು ನ್ಯಾಯ ಮತ್ತು ಅಗತ್ಯ. ಈ ವಿದ್ಯಾಭ್ಯಾಸ ದೇಶಾದ್ಯಂತವೂ ಒಂದೇ ರೀತಿಯಲ್ಲಿ ಬೆಳೆಯುವಂತೆ ಸರ್ಕಾರ ಒಂದು ಯೂನಿ ಫಾರಂ ನೀತಿ ನೇಮಗಳನ್ನು ಅನುಸರಿಸಬೇಕು ಮತ್ತು ಅಂಥ ಏರ್ಪಾಡುಗಳನ್ನು ಜಾರಿಗೆ ತರಬೇಕು. ಈ ದಿವಸ ಸಾಮಾನ್ಯವಾಗಿ ಸರ್ಕಾರದವರು ಯಾವುದಾದ ರೊಂದು ಹಳ್ಳಿಗೆ ಒಂದು ಶಾಲೆಯನ್ನು ಮಂಜೂರು ಮಾಡಬೇಕಾಗಿದ್ದರೆ ಆಗ್ರಾಮದ ಜನರು ಶಾಲೆಯನ್ನು ನಡೆಸತಕ್ಕ ಬಗ್ಗೆ ಒಂದು ಕಟ್ಟಡವನ್ನೂ ಮತ್ತು ಅಧ್ಯಾ ಪಕರ ವಾಸಕ್ಕೊಂದು ಮನೆಯನ್ನು ಓದಲು ಶಾಲೆಗೆ ಇಂತಿಷ್ಟು ಜನ ಬಾಲಕರನ್ನು ಒದಗಿಸಿ ಕೊಟ್ಟರೆ ಆಗ ಅಂಥ ಕಡೆಗೆ ಒಂದು ಶಾಲೆಯನ್ನು ಮಂಜೂರು ಮಾಡುತ್ತೇವೆಂದು ಇಷ್ಟು ಕಂಡೀಷನ್‌ಗಳ ಮೇಲೆ ಮಂಜೂರು ಮಾಡುತ್ತಾರೆ. ಆದರೆ ಇಂಥ ಕಂಡೀಷನ್ ಗಳು ಯಾವುದನ್ನೂ ಕೇಳದೆ ನಗರಗಳಿಗೆ ಸ್ಕೂಲು ಗಳನ್ನು ಒದಗಿಸಲಾಗುತ್ತಿದೆ. ನಗರಗಳಲ್ಲಿ ಈ ದಿವಸ ಈ ಶಾಲೆಗಳಿಗೋಸ್ಕರವಾಗಿ ಅನೇಕ ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದಾರೆ, ಹಳ್ಳಿಯ ವಿಚಾರಕ್ಕೆ ಬಂದರೆ ಮೇಷ್ಟ್ರರಿಗೆ ಮನೆ ಕೊಡಬೇಕೆಂದು ಕೇಳು ತ್ತಾರೆ.

ಶ್ರೀ ವಿ. ವೆಂಕಟಪ್ಪ.—ಹಳ್ಳಿಗಳಲ್ಲಿ ಬಾಡಿಗೆ ಕೊಡು ತ್ತೇವೆಂದರೂ ಮನೆಗಳೇ ಸಿಕ್ಕುವುದಿಲ್ಲವಲ್ಲ! ಈ ದಿವಸ ಯಾವುದಾದರೂ ಗ್ರಾಮಕ್ಕೆ ಒಂದು ಸ್ಕೂಲನ್ನು ಮಂಜೂರು ಮಾಡಬೇಕಾಗಿದ್ದರೆ ಮೊದಲು ಆ ಶಾಲೆಗೆ ಏನೇನು ಸಾಮಾನುಗಳನ್ನೊದಗಿಸಬೇಕೋ ಅವು ಗಳನ್ನು ಒದಗಿಸಿಕೊಂಡನಂತರವೇ ಆ ಶಾಲೆಯನ್ನು ಮಂಜೂರುಮಾಡುವುದು.

ಶ್ರೀ ಜಿ. ದುಗ್ಗಪ್ಪ.—ಈ ದಿವಸ ಪಟ್ಟಣದಲ್ಲಿರತಕ್ಕ ವರಿಗೆ ಯಾಪ ಒಂದು ಪ್ರಶ್ನೆಯನ್ನೂ ಕೇಳುತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—ಈಗ ಇಲ್ಲಿಯೂ ಸಹ ಹಾಗೆಯೇ ಕೇಳುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ತಾವು ಅಂಥಾ ಒಂದು ಯೂನಿಫಾರಂ ನೀತಿಯನ್ನು ಎಲ್ಲ ಕಡೆಗಳಲ್ಲೂ ಜಾರಿಗೆ ತನ್ನಿ. ಬೇಡವೆನ್ನುವುದಿಲ್ಲ.

ಇನ್ನು ಸರ್ಕಾರದವರು ನಿಮ್ಮ ತರಗತಿಗಳ ವಿದ್ಯಾ ಭಿವೃದ್ಧಿಯ ಬಗ್ಗೆ ಏನು ನೀತಿಯನ್ನು ಅನುಸರಿಸುತ್ತಿ ದ್ದಾರೆಂಬ ಬಗ್ಗೆ ಎರಡುಮಾತುಗಳನ್ನು ಹೇಳಬೇಕಾ ಗಿದೆ. ಈ ವಿಚಾರದಲ್ಲಿ ಸರ್ಕಾರದವರ ನೀತಿ ಹೇಗಿರ ಬೇಕೆಂಬ ಬಗ್ಗೆ 1955ನೆಯ ಇಸ್ವಿಯಲ್ಲಿ ಈ ಷೆಡ್ಯೂರ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂರ್ಡ್ ಟ್ರೈಬ್ಸ್‌ಗಳ ವಿಚಾರದಲ್ಲಿ ರಾಷ್ಟ್ರಾಧ್ಯಕ್ಷರಿಗೆ ಒಪ್ಪಿಸಿದ ವರದಿಯಲ್ಲಿ ಹೀಗೆ ಹೇಳಿ ದ್ದಾರೆ. ಆ ವರದಿಯಲ್ಲಿ ಏನು ಹೇಳಿದ್ದಾರೆಂಬ ಅಂಶ ವನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

(*Extract from the Report of the Commission for Scheduled Castes & Scheduled Tribes.*)

"The Constitution of India lays down that 'the States shall promote with special care the educational and economic interests of the weaker sections of the people, and, in particular, of the Scheduled Castes and the Scheduled Tribes, and shall protect them from social injustice and all forms of exploitation.' All the safeguards provided in the Constitution for the members of backward classes will remain nugatory unless steps

ಶ್ರೀ ವೈ. ವೀರಪ್ಪ.—ಸರ್ಕಾರೀ ಸ್ಕೂಲುಗಳ ಉಪಾಧ್ಯಾಯರಿಗೆ ಕೊಡುವ ಸೌಲಭ್ಯಗಳನ್ನು ಇವರಿಗೂ ಕೊಡಲು ತಕ್ಕ ವ್ಯವಸ್ಥೆ ಮಾಡಿ.

ಶ್ರೀ ವಿ. ವೆಂಕಟಪ್ಪ.—ಅದೇ ಮಟ್ಟದಲ್ಲಿ ಕೊಟ್ಟಿದ್ದೇವೆ. ಅವರೂ ಸಹ ಒಪ್ಪಿಕೊಂಡಿದ್ದಾರೆ. ಯಾರುಯಾರು ಆ ಆರ್ಡರನ್ನು ಇನ್ನೂ ಕಡ್ಡಾಯವಾಗಿ ಜಾರಿ ಮಾಡದೇ ಇದ್ದಾರೋ ಅವರೂ ಜಾಗ್ರತೆಯಾಗಿ ಆ ಸರ್ಕಾರೀ ಆರ್ಡರಂತೆ ಜಾರಿಗೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ವೈ. ವೀರಪ್ಪ.—ಒಪ್ಪಿಕೊಂಡಿದ್ದರೂ ಕೂಡ ಸರಿಯಾದ ರೀತಿಯಲ್ಲಿ ದೊರಕುತ್ತಾ ಇಲ್ಲ. ಒಂದೇ ಒಂದು ಉದಾಹರಣೆ, ಅರಕಲಗೂಡು ಹೈಸ್ಕೂಲಿನ ಉದಾಹರಣೆ ತೆಗೆದುಕೊಂಡರೆ ಅದನ್ನು ನಾನು ಕಣ್ಣಾರೆ ನೋಡಿದ್ದೇನೆ. ನಿಮ್ಮ ತತ್ವ ಒಪ್ಪಿಕೊಂಡಿದ್ದರೂ ಕೂಡ ಹಣ ಒದಗಿಸುವ ಶಕ್ತಿ ಅವರಲ್ಲಿ ಇಲ್ಲ. ಆ ದೃಷ್ಟಿಯಿಂದ ಯಾವುದೋ ಒಂದು ರೀತಿಯಲ್ಲಿ ಸಹಾಯ ಮಾಡಿ ಈ ಉಪಾಧ್ಯಾಯರುಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಯಾವತ್ತಿನ ದಿವಸ ಈ ಆರ್ಥಿಕ ಪರಿಸ್ಥಿತಿಯಲ್ಲಿ ವ್ಯತ್ಯಾಸ ಬಂತೋ ಅವೊತ್ತಿನಿಂದ ಸರ್ಕಾರಿ ಮತ್ತು ಸಾರ್ವಜನಿಕ ಸ್ಕೂಲುಗಳ ಸ್ಥಿತಿ ಬದರಾಗಿ ಉಪಾಧ್ಯಾಯರುಗಳ ಮನೆಗಳೇ ಸ್ಕೂಲುಗಳಾಗಿವೆ. ಅನೇಕಜನ ಬಡ ವಿದ್ಯಾರ್ಥಿಗಳು ಪ್ರೈವೇಟ್ ಟ್ಯೂಷ್ಷನ್ ಹೊಂದಲಿಕ್ಕೆ ಸಾಧ್ಯವಿಲ್ಲದೆ ವಿದ್ಯಾಭ್ಯಾಸದ ಮಟ್ಟ ಕುಗ್ಗುತ್ತಾ ಇವೆ. ಇದು ಬಹುಶಃ ಸರ್ಕಾರದವರ ಗಮನಕ್ಕೆ ಬಂದಿರಬಹುದು. ಇದನ್ನು ಪರ್ಯಾಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಸ್ಕಾಲರ್‌ಷಿಪ್ ವಗೈರೆ ಕೊಡುವ ವಿಚಾರದಲ್ಲಿ ಅನೇಕ ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಸ್ಕಾಲರ್‌ಷಿಪ್ ಕಮಿಟಿಗಳನ್ನು ಮಾಡಿರುತ್ತೀರಿ. ಅಲ್ಲಿಯ ಸ್ಥಳೀಯ ಅಧಿಕಾರಿಗಳು ಯಾವ ಯಾವ ವ್ಯಕ್ತಿಗಳು ಸ್ಕಾಲರ್‌ಷಿಪ್ ಕಮಿಟಿಯಲ್ಲಿ ಇದ್ದಾರೋ ಅವರು ನ್ಯಾಯ ದೃಷ್ಟಿಯಿಂದ ರೆಪ್ರೆಸೆಂಟ್ ಮಾಡುತ್ತಾರೆ ಎಂದು ಹೇಳಿ ಚುನಾವಣೆ ಮಾಡಿದ್ದರೂ ಕೂಡ ಅವರು ಕಳುಹಿಸಿದ ವಿದ್ಯಾರ್ಥಿಗಳ ಲಿಸ್ಟನ್ನು ತಲೆಕೆಳಗು ಮಾಡಿ ಬೇರೆ ಯಾವುದೋ ಒಂದು ದೃಷ್ಟಿಯಿಂದ ಆ ವ್ಯಕ್ತಿಗಳ ಹೆಸರನ್ನು ತೆಗೆದುಹಾಕಿ ಅದನ್ನು ಬದಲಾಯಿಸುತ್ತಾರೆ. ನನ್ನ ಜಿಲ್ಲೆಯಲ್ಲಿ ಹಂಚಿಕೆಯಾದ ವಿಚಾರ ನೋಡಿದರೆ ತಾಲ್ಲೂಕು ತಾಲ್ಲೂಕು, ಹೋಬಳಿ ಹೋಬಳಿಗೂ ಒಂದು ಗೊಂದಲ ಆಗಿ ನರಿಯಾದ ರೀತಿಯಲ್ಲಿ ಸ್ಕಾಲರ್‌ಷಿಪ್ ಏನಿಯೋಗವಾಗಿಲ್ಲ. ಸ್ಥಳೀಯ ಅಧಿಕಾರಿಗಳಿಗೆ ಚೆನ್ನಾಗಿ ಅನುಭವ ಇರುತ್ತದೆ ಅಂತಹವರು ಯಾರು ನಿಷ್ಕಲ್ಮಷವಾಗಿ ಯಾರ ದಾಕ್ಷಿಣ್ಯಕ್ಕೂ ಒಳಗಾಗದೇ ಪ್ರತಿಯೊಬ್ಬರನ್ನೂ ರೆಪ್ರೆಸೆಂಟ್ ಮಾಡುತ್ತಾರೋ ಅಂತಹವರು ಚುನಾಯಿಸಿದ ಒಂದು ಪಟ್ಟಿಯನ್ನು ತಲೆಕೆಳಗು ಮಾಡಿದರೆ ನಿಜವಾಗಿಯೂ ನ್ಯಾಯ ದೊರಕುವುದಿಲ್ಲ. ಆ ದೃಷ್ಟಿಯಿಂದ ನಿರ್ದಿಷ್ಟವಾದ ಕ್ರಮ ಅನುಸರಿಸಿ ಸ್ಕಾಲರ್‌ಷಿಪ್ ಕಮಿಟಿಯವರು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಹಳ್ಳಿಯ ಸ್ಕೂಲುಗಳಲ್ಲಿ ಕುಳಿತುಕೊಳ್ಳುವುದಕ್ಕೆ ವಿದ್ಯಾರ್ಥಿಗಳಿಗೆ ಒಂದು ಹಲಗೆ ಸಹ ಇರುವುದಿಲ್ಲ. ಹಿಂದಿನ ನಮ್ಮ ಅನುಭವ ಜ್ಞಾಪಕಕ್ಕೆ ತಂದುಕೊಂಡರೆ ಆಗ ಎಂತಹ ರಮಣೀಯ ವಾತಾವರಣ ಇರುತ್ತಿತ್ತು, ಎಷ್ಟುಮಟ್ಟಿಗೆ ವಿದ್ಯಾಭ್ಯಾಸ ನಡೆಸುತ್ತಿದ್ದರು ಎಂಬುದು ಗೊತ್ತಾಗುತ್ತದೆ. ಇವತ್ತಿನ ದಿವಸ ವಿದ್ಯಾರ್ಥಿಗಳಿಗೆ ಆ ವಾತಾವರಣ ಇಲ್ಲದೆ ಇರುವುದರಿಂದ ನರಿಯಾದ ಮಟ್ಟದಲ್ಲಿ ತರಪೇತು ಹೊಂದುವುದಕ್ಕೆ, ನರಿಯಾದ ಪ್ರಜೆ ಆಗುವುದಕ್ಕೆ ಅವಕಾಶವಾಗುತ್ತಿಲ್ಲ. ಆದ್ದರಿಂದ ಒಳ್ಳೆಯ ವಾತಾವರಣ ಕಲ್ಪಿಸಿಕೊಡಬೇಕು.

ಅನೇಕರು ತಮಗಿರತಕ್ಕ ಭೂಮಿಯನ್ನು ಶಾಲೆಗಳಿಗಾಗಿ ದಾನ ಮಾಡಿದ್ದಾರೆ. ಅದರಲ್ಲಿ ಬೆಳೆದ ಫಸಲನ್ನು ಅಲ್ಲಿಯ ಉಪಾಧ್ಯಾಯರುಗಳು ಮತ್ತು ಆ ಸ್ಕೂಲಿನ ಖರ್ಚಿಗಾಗಿ ಉಪಯೋಗಿಸಬೇಕೆಂದು ಯಾವ ಒಂದು ನದುದ್ದೇಶದಿಂದ, ಧರ್ಮದ ಉದ್ದೇಶದಿಂದ ದಾನ ಮಾಡಿದರೋ ಆ ಉದ್ದೇಶ ನರವೇರದೆ ಕೊಟ್ಟಂಥ ಭೂಮಿ ಪಾಳು ಬಿದ್ದಿದೆ ಮತ್ತು ಸರ್ಕಾರಕ್ಕೆ ಬರಬೇಕಾದ ಕಂದಾಯ ಬರದೆ ಆದಾಯ ಕಡಮೆ ಆಗಿದೆ. ಆ ದೃಷ್ಟಿಯಿಂದ ಈ ವಿಷಯದಲ್ಲಿ ಒಂದು ಸರಿಯಾದ ವ್ಯವಸ್ಥೆ ಮಾಡುವುದು ಸೂಕ್ತ ಎಂದು ಹೇಳುತ್ತೇನೆ.

ಪೇಪರ್‌ನಲ್ಲಿ ಓದಿದೆ. ಹೈಸ್ಕೂಲುಗಳಲ್ಲಿ ಫೀಜು ಹೆಚ್ಚು ಮಾಡಬೇಕೆಂಬ ಅಭಿಪ್ರಾಯ ಇದೆ. ಆ ರೀತಿ ಹೆಚ್ಚು ಮಾಡಿದರೆ ಎಷ್ಟು ಆದಾಯ ಬರುತ್ತದೆ ಎಂಬ ಅಂಶ ನಮ್ಮ ಮುಂದೆ ಇವತ್ತಿನ ದಿವಸ ಇಲ್ಲ. ರಾಜ್ಯಾಂಗದಲ್ಲಿ ವಿಧಾಯಕವಾಗಿರುವಂತೆ ಉಚಿತ ವಿದ್ಯಾಭ್ಯಾಸವನ್ನು ಒಂದು ಮಟ್ಟದವರೆಗೂ ಕೊಟ್ಟು ಅನಂತರ ಅವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಈಗಿನ ಒಂದು ಮಟ್ಟ ಏನಿದೆ ಅದಕ್ಕಿಂತ ಸುಧಾರಿಸುವವರೆಗೂ ಶುಲ್ಕ ಹೆಚ್ಚುಮಾಡುವ ಗೋಜಿಗೆ ಹೋಗಕೂಡದು ಎಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಂಡು ಈ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

*ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ನಭೆಯ ಮುಂದಿರತಕ್ಕ ವಿದ್ಯಾಭ್ಯಾಸದ ಡಿಮ್ಯಾಂಡ್ ಮೇಲೆ ಎರಡು ಮಾತನ್ನಾಡಲು ತಮ್ಮ ಅಪ್ಪಣೆ ಬೇಡುತ್ತೇನೆ. ಪ್ರಸಕ್ತ ಸಾಲಿನಲ್ಲಿ ಸರ್ಕಾರದವರು ನಮ್ಮ ದೇಶದಲ್ಲಿ ವಿದ್ಯಾಭಿವೃದ್ಧಿಗಾಗಿ 11 ಕೋಟಿ 76 ಲಕ್ಷದ 70 ಸಾವಿರ ರೂಪಾಯಿಗಳನ್ನು ವಿದ್ಯಾ ಇಲಾಖೆಗೆ ಒದಗಿಸಬೇಕೆಂಬುದಾಗಿ ಕೇಳಿದ್ದಾರೆ. ಇಷ್ಟು ಹಣದಲ್ಲಿ ಬಹುಭಾಗವನ್ನು ನಾವು ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಈಗಾಗಲೇ ನಮ್ಮಲ್ಲಿ ನುಮಾರು 20,186 ಪ್ರೈಮರಿ ಸ್ಕೂಲುಗಳಿವೆ. ನಮ್ಮ ದೇಶದಲ್ಲಿ ಅಧ್ಯಾಪಕರ ಸಂಖ್ಯೆ ಪ್ರಥಮ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ 27,955 ಜನ ಉಪಾಧ್ಯಾಯರು ಕೆಲಸ ಮಾಡುತ್ತಿದ್ದರೆಂಬುದಾಗಿ ಗೊತ್ತಾಗಿದೆ. ನಮ್ಮ ದೇಶದಲ್ಲಿ ವಿದ್ಯಾಪ್ರಗತಿಯ ಅಳತೆಗೋಲು ಯಾವುದೆಂದರೆ ನಮ್ಮ ಪ್ರಾಥಮಿಕ ವಿದ್ಯಾಭ್ಯಾಸವೇ ಆಗಿದೆ. ಇದು ನಿಜವಾಗಿಯೂ ಯಶಸ್ವಿಯಾಗಬೇಕಾಗಿದ್ದರೆ, ಇದು ಯಾರನ್ನು ಹೆಚ್ಚಿಗೆ ಅವಲಂಬಿಸಿಕೊಂಡಿದೆ ಎಂದರೆ ಇದನ್ನು ಕಾರ್ಯಗತ ಮಾಡತಕ್ಕ ಉಪಾಧ್ಯಾಯರಮೇಲೆ ಬಿದ್ದಿದೆ. ಆದರೆ ಈ ದಿವಸ ನಮ್ಮಲ್ಲಿ ಒಬ್ಬ ಮನುಷ್ಯನಿಗೆ ಬೇರೆ ಯಾವ ಬಾಬಿನಲ್ಲೂ ಒಂದು ಕೆಲಸ ಸಿಕ್ಕಲಿಲ್ಲವೆಂದು ಹೇಳತಕ್ಕ ಮನುಷ್ಯ ಯಾರಿದ್ದಾನೋ ಅಂಥವನಿಗೆ ಈ ಪ್ರೈಮರಿ ಸ್ಕೂಲಿನಲ್ಲಿ ಒಂದು ಉಪಾಧ್ಯಾಯರ ಕೆಲಸ ಕೊಟ್ಟರೆ ಮಾಡುತ್ತಾನೆಂಬ ಭಾವನೆ ಬಂದು ಹೋಗಿದೆ. ಆದರೆ ಇದು ನರಿಯಾದದ್ದಲ್ಲ. ನಮ್ಮ ದೇಶದಲ್ಲಿ ಈ ಪ್ರಾಥಮಿಕ ವಿದ್ಯಾಭ್ಯಾಸ ಪ್ರಗತಿ ಹೊಂದಬೇಕಾಗಿದ್ದರೆ ಸರ್ಕಾರದವರು ಕಡ್ಡಾಯವಾಗಿ S.S.L.C. ಪಾಸ್ ಮಾಡಿದಂಥ ಮತ್ತು ತರಬೇತಾದಂಥ ಉಪಾಧ್ಯಾಯರನ್ನು ಈ ಶಾಲೆಗಳಿಗೆ ನೇಮಿಸಬೇಕೆಂದು ಹೇಳುತ್ತೇನೆ. ಇಂಥ ಒಂದು ನೀತಿಯನ್ನು ಸರ್ಕಾರ ಕಡ್ಡಾಯವಾಗಿ ಅನುಸರಿಸತಕ್ಕದ್ದು ಅಗತ್ಯ. ಚಿಕ್ಕ ಮಕ್ಕಳಿಗೆ ಏದೆ

are taken to encourage the spread of education among these people."

ಅದರ ಮುಖ್ಯಾಂಶವಿಷ್ಟೆ. ಈ ಬಗ್ಗೆ ನಮ್ಮ ಕಾರ್ಪಸ್ಟಿ ಟ್ಯೂಷನ್ನಿನಲ್ಲೇ ಈ ವಿಚಾರಗಳನ್ನೆಲ್ಲ ಕೊಟ್ಟಿದ್ದಾರೆ. ಆದರೆ ಕಾರ್ಪಸ್ಟಿಟ್ಯೂಷನ್ನಿನಲ್ಲಿ ಹೇಳಿರುವಂತೆ ಈ ಜನರಿಗೆ ಆ ವಿದ್ಯಾಸೌಲಭ್ಯಗಳನ್ನು ಮಾತ್ರ ಇದುವರೆಗೂ ಒದಗಿಸಿಲ್ಲ. ಹಳೇ ಮೈಸೂರಿನವರಿಗೆಲ್ಲ ಈ ವಿಚಾರಗಳು ಚೆನ್ನಾಗಿ ಅನುಭವದಲ್ಲವೆ. ರೂಲ್ಸಿನಲ್ಲಿ ಎಲ್ಲಾ ಇದೆ. ಆದರೆ ಅವುಗಳನ್ನು ಅಡ್ಮಿನಿಷ್ಟರ್‌ಮಾಡುತ್ತಾ ಇಲ್ಲ. 1925ರಲ್ಲಿ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರವರು ಅವರ ಹೆಸರಿನಲ್ಲಿ ಒಂದು ಹರಿಜನ ಹಾಸ್ಟಲನ್ನು ಆಗ ತೆರೆದಂಥ ವಿಚಾರ ಎಲ್ಲರಿಗೂ ಗೊತ್ತಿದೆ. ಆ ದಿವಸ ಆ ಹಾಸ್ಟಲನಲ್ಲಿ 150 ಜನ ಹುಡುಗರಿದ್ದರು. 1936ರರಲ್ಲಿ ಆ ಹಾಸ್ಟಲನಲ್ಲಿ ಇದ್ದುಕೊಂಡು ಮೂರುವರ್ಷಕಾಲ ಅಭ್ಯಾಸಮಾಡತಕ್ಕಂಥ ಒಂದು ಸುಯೋಗ ನನಗೆ ದೊರೆಕಿತ್ತು. 1935ರಲ್ಲಿ ಆ ಹಾಸ್ಟಲನ್ನು ಮೂರು ವಿಭಾಗ ಮಾಡಿ ಕೋಲಾರ ಹಾಸನ ಬೆಂಗಳೂರುಗಳಲ್ಲಿ ಮೂರು ಹಾಸ್ಟಲುಗಳನ್ನು ಮಾಡಿದರು. 1925ರಲ್ಲಿ ಈ ಹಾಸ್ಟಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೇನಿತ್ತೋ ಅದನ್ನು ಇಲ್ಲಿಯವರೆಗೂ ಹೆಚ್ಚಿಸಿಲ್ಲ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕೋಲಾರದಲ್ಲಿ 3½ಲಕ್ಷರೂ.ಗಳನ್ನು ಖರ್ಚುಮಾಡಿ ಒಂದು ದೊಡ್ಡ ಹಾಸ್ಟಲನ್ನು ಕಟ್ಟಿಸಿದರು. ಈ ಜನಾಂಗದ ಹುಡುಗರಿಗೆಲ್ಲ ಅನುಕೂಲವಾಗುವಂತೆ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುತ್ತೇವೆಂದು ಹೇಳಿದ್ದರು. ಆದರೆ ಈ ದಿವಸ ಅಲ್ಲಿರತಕ್ಕ ಹುಡುಗರ ಸಂಖ್ಯೆ 35, ಹಾಸನದಲ್ಲೂ 35. ನರಸಿಂಹರಾಜ ಹಾಸ್ಟಲು ಹುಟ್ಟಿದಾಗ ಅಲ್ಲೇನು 75 ಜನ ಹುಡುಗರ ಸಂಖ್ಯೆಯತ್ತೋ ಈದಿವಸವೂ ಅಷ್ಟೇ ಇದೆ. ಇಲ್ಲಿಗೆ 30 ವರ್ಷಗಳ ಹಿಂದೆ ಕಟ್ಟಿದಂಥ ಆ ಹಾಸ್ಟಲನಲ್ಲಿ ಓದಿದ ಹುಡುಗರು ಈ ದಿವಸ I.A.S. ಆಗಿದ್ದಾರೆ, ಲೆಜಿಸ್ಲೇಟರುಗಳಾಗಿದ್ದಾರೆ. ಆದರೆ ಈದಿವಸ ಆ ಜನರಿಗೆ ಈ ಒಂದು ಹಾಸ್ಟಲ್‌ಸಾಲದು. ಆದ್ದರಿಂದ ಪ್ರತಿಯೊಂದು ಜಿಲ್ಲಾ ಕಸಬೆಯಲ್ಲೂ ಈ ಜನಾಂಗಗಳವರಿಗೆ ಒಂದೊಂದು ಹಾಸ್ಟಲನ್ನು ತೆರೆಯುವಂಥಾ ನೀತಿಯನ್ನು ಸರ್ಕಾರ ಹಾಕಿಕೊಳ್ಳಬೇಕೆಂದು ನಾನು ಅವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. 1921ನೆಯ ಇಸ್ವಿಯಲ್ಲಿ ಆಗಿದ್ದ ಮೈಸೂರು ಸರ್ಕಾರ ಈ ಹರಿಜನರ ಹೆಣ್ಣುಮಕ್ಕಳಿಗೊಂದು ಹಾಸ್ಟಲನ್ನು ತೆರೆದಿದ್ದರು. ಅದನ್ನು ಬೆಂಗಳೂರಿನಲ್ಲಿ ಪ್ರಾರಂಭಮಾಡಿದರು. ಅನಂತರ ಅದು ಮೈಸೂರಿಗೆ ವರ್ಗವಾಯಿತು. ಈ ಹಾಸ್ಟಲು ಪ್ರಾರಂಭವಾದ ದಿವಸ ಹೇಗಿತ್ತೋ ಈದಿವಸವೂ ಹಾಗೆಯೇ ಇದೆ, 1921ರಲ್ಲಿ ಪ್ರಾರಂಭವಾಯಿತು. ಇಲ್ಲಿಯವರೆಗೂ ಅದನ್ನು ಬಡಾವಣೆಮಾಡಿಲ್ಲ. ಆದುದರಿಂದ ಈಗಲಾದರೂ ಸರ್ಕಾರದವರು ಮೈಸೂರು, ಬೆಂಗಳೂರು ಮತ್ತು ಬೆಳಗಾಂ ಈ ಮೂರು ಡಿವಿಜರ್ಗಳಲ್ಲಿ ಮೂರು ಫ್ರೀ ಬೋರ್ಡಿಂಗ್ ಹೋಂಗಳನ್ನು ಈ ಹೆಣ್ಣುಮಕ್ಕಳಿಗೋಸ್ಕರವಾಗಿ ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆಮಾಡಿದರೆ ಈ ಜನರ ವಿದ್ಯಾಪ್ರಗತಿಯ ಸಾಧನೆಗೆ ಅನುಕೂಲವಾಗುತ್ತದೆಂದು ಸರ್ಕಾರದವರಲ್ಲಿ ಬೇಡಿಕೊಳ್ಳುತ್ತೇನೆ. ಇನ್ನು ನಮ್ಮ ಸಂಸ್ಥಾನ ವಿಸ್ತಾರವಾದಮೇಲೆ ಯಾವ ಯಾವ ಭಾಗದಲ್ಲಿ ಈ ಜನರು ಬಹಳ ಬ್ಯಾಕ್‌ವರ್ಡ್ ಕಂಡೀಷನ್‌ನಲ್ಲಿದ್ದಾರೋ ಅಂಥ ಅನೇಕ ಪಂಗಡಗಳ ಪಟ್ಟಿಯನ್ನು ತಯಾರಿಸುತ್ತಿದ್ದಾರೆಂದು ಕೇಳಿದ್ದೆನು. ಆ ಒಂದು ಕಾಮನ್ ಲಿಸ್ಟಿನಲ್ಲಿ ಈ ಎಲ್ಲಾ ಪಂಗಡಗಳವರೂ ಸೇರಿಕೊಂಡು ಷೆಡ್ಯೂಲ್ಡ್ ಟ್ರೈಬ್ಸ್ ಅಂಡ್ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂಬ ಎರಡು ಹೆಸರಿನಲ್ಲಿ ಸೇರಿಬಿಡುತ್ತಾರೆ. ಆದರೆ ಅವರಿಗೆ ಯಾರಿಗೂ ಸರಿಯಾದ ಸೌಲತ್ತುಮಾತ್ರ ದೊರೆಯುತ್ತಿಲ್ಲ. ಅಂಥ ಜನರು ಯಾರುಯಾರು ಈ ಪಟ್ಟಿಗೆ ಸೇರುತ್ತಾರೆಂಬುದರ ಬಗ್ಗೆ ನಮಗೊಂದು ಲಿಸ್ಟನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮದ್ರಾಸ್, ಬೊಂಬಾಯಿ, ಕೊಡಗು ಈ ಪ್ರಾಂತ್ಯಗಳಲ್ಲಿ ಆ ರೀತಿ ಅದು ಜಾರಿಯಲ್ಲಿದೆ. ಆದರೆ ಅಂಥ ಪಟ್ಟಿಯಲ್ಲಿ ಬಹಳ ಹಿಂದುಳಿದಿರತಕ್ಕಂಥ ಅನೇಕ ಪಂಗಡಗಳವರು ಸೇರಿನಲ್ಪಟ್ಟಿದ್ದಾರೆಂದು ಕೇಳುತ್ತೇನೆ. ಅವರಿಗೆ ಈವರೆಗೂ ಯಾವ ಸೌಕರ್ಯಗಳೂ ದೊರೆತಿಲ್ಲ. ಅವರಿಗೆ ಹೆಚ್ಚಿನ ಅನುಕೂಲ ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಆ ಮೇಲೆ ಈ ಸ್ಕಾಲರ್‌ಷಿಪ್ಪಿನ ವಿಷಯವಾಗಿ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರಬೇಕಾಗಿದೆ. ಅವರು ಓದಗಿಸಿರುವ ಅಂಕಿ ಅಂಶಗಳ ಪ್ರಕಾರ ನಮ್ಮ ಸಂಸ್ಥಾನದಲ್ಲಿ 489 ಹೈಸ್ಕೂಲುಗಳು ಇವೆ. ಇದರಲ್ಲಿ ಹಿಂದುಳಿದವರಿಗಾಗಿ ಓದಗಿಸಿರತಕ್ಕ ಸ್ಕಾಲರುಷಿಪ್ಪುಗಳು, ಅದೂ ಡಿಪ್ರೆಸ್ಡ್ ಕ್ಲಾಸು ಸ್ಕಾಲರುಷಿಪ್ಪುಗಳಿಗಾಗಿ 487 ಎಂದು ಕೊಟ್ಟಿದೆ. ಎಂದರೆ 489 ಹೈಸ್ಕೂಲುಗಳಿಗಾಗಿ ಮಾತ್ರ ಎಂದರೆ ದಾಮಾಷಾ ಪ್ರಕಾರ ಒಂದು ಹೈಸ್ಕೂಲಿಗೆ ಒಂದು ಸ್ಕಾಲರ್‌ಷಿಪ್ಪನ್ನು ಕೊಟ್ಟಂತಾಯಿತು. ಮಾನ್ಯಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಈ ಸ್ಕಾಲರ್‌ಷಿಪ್ಪನ್ನು ಈಗ ಶೇಕಡ 68ರಷ್ಟು ಹೆಚ್ಚಾಗಿ ಮಾಡಲಾಗಿದೆ ಎಂದು ಹೇಳಿದ್ದರು. ಆದರೆ ಸರಕಾರದವರೇ ಓದಗಿಸಿರುವ ಪಟ್ಟಿಯ ಪ್ರಕಾರ ಆ ರೀತಿಯಾಗಿಲ್ಲ.

ಶ್ರೀ ವಿ. ವೆಂಕಟಪ್ಪ.—ಈಗ ತಮ್ಮಲ್ಲಿರುವ ಪಟ್ಟಿ ಸರಿಯಾಗಿಲ್ಲ. ಅದು ಹಿಂದೆ ಕೊಟ್ಟಿರುವಂತಹುದು. ಅದೇ ಪಟ್ಟಿಯಲ್ಲಿ ಮೂರುಲಕ್ಷ ರೂಪಾಯಿಗಳನ್ನು ಬೇರೆ ಓದಗಿಸಲಾಗಿದೆ ಎಂದಿದೆ; ಆದರೆ ಅದನ್ನು ಇನ್ನೂ ಪೂರ್ತಿಯಾಗಿ ಕೊಟ್ಟಿಲ್ಲ.

ಶ್ರೀ ಜಿ. ದುಗ್ಗಪ್ಪ.—ಈ ಪಟ್ಟಿಯಲ್ಲಿ ತೋರಿಸಿರುವಂತೆ ಜಾಸ್ತಿಯಾಗಿಲ್ಲ. ಈಗೇನೋ ಸ್ವಲ್ಪ ಜಾಸ್ತಿ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಬಹಳ ಸಂತೋಷ.

ಮತ್ತೊಂದು ವಿಚಾರವನ್ನು ತಮ್ಮ ಮುಂದೆ ಅರಿಕೆ ಮಾಡಬೇಕಾಗಿದೆ. ಈಗ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದುಳಿದವರಿಗಾಗಿ ಮನೆಗಳನ್ನು ಕಟ್ಟಲು ಬೇಕಾದ ಹಾಗೆ ಹಣವನ್ನು ಖರ್ಚುಮಾಡುತ್ತಿದ್ದಾರೆ. ಹೀಗೆ ಮನೆಗಳನ್ನು ಕಟ್ಟುವುದಕ್ಕೆ 22 ಲಕ್ಷ ರೂಪಾಯಿಗಳನ್ನು ಈ ವರ್ಷದ ಬಜೆಟ್ಟಿನಲ್ಲಿಯೂ ತೋರಿಸಿದ್ದಾರೆ. ಹೀಗೆ 22 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ವರ್ಷದ ಕೊನೆಯಲ್ಲಿ ಒಂದು ಐನೂರು ಮನೆಗಳನ್ನೋ ಅಥವಾ ಸಾವಿರ ಮನೆಗಳನ್ನೋ ಕಟ್ಟುತ್ತಾರೆ. ಹಾಗೆ ಕಟ್ಟಿದಂತಹ ಮನೆಗಳನ್ನು ಕೆಲವು ವರ್ಷಗಳಾದ ಮೇಲೆ ಹೋಗಿ ನೋಡಿದರೆ ನಾವು ನೋಡುವುದು ಬರೀ ಪೋಟುಗೋಡೆ ಮತ್ತು ಒಡಕ ಹೆಂಚುಗಳು. ಹೀಗೆ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಮನೆಗಳನ್ನು ಕಟ್ಟುವುದಕ್ಕೆ ಬದಲಾಗಿ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಿ ವಿದ್ಯಾರ್ಥಿಗಳನ್ನು ತರಬೇತುಮಾಡಿ ಜೀವಂತ ಮನೆಗಳನ್ನು ನಾವು ಕಟ್ಟೋಣ. ಹೀಗೆ ತಾವು ಮನೆಗಳಿಗೋಸ್ಕರ ಖರ್ಚುಮಾಡುವುದನ್ನು ನಮ್ಮ ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಿ ಮೈಸೂರಿನಲ್ಲಿರುವ ಪ್ರತಿಯೊಬ್ಬ ಹಿಂದುಳಿದ ವಿದ್ಯಾರ್ಥಿನಿಯರುಗಳಿಗೂ ಸ್ಕಾಲರುಷಿಪ್ಪುಗಳನ್ನು ಕೊಟ್ಟು ಅವರನ್ನೆಲ್ಲ ವಿದ್ಯಾವಂತರನ್ನಾಗಿ

(ಶ್ರೀ ಜಿ. ದಿಂಗ್ಗಪ್ಪ)

ಮಾಡಬೇಕು. ಹೀಗೆ ಎಲ್ಲ ಸೆಕೆಂಡರಿ ಸ್ಕೂಲುಗಳಲ್ಲಿಯೂ ಮತ್ತು ಕಾಲೇಜುಗಳಲ್ಲಿಯೂ ಪ್ರತಿಯೊಬ್ಬ ಹುಡುಗರಿಗೂ ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟು ವಿದ್ಯಾವಂತರಾಗಲು ತಕ್ಕ ಅನುಕೂಲವನ್ನು ಮಾಡಿಕೊಡಬೇಕು. ಹೀಗೆ ತಾವಾದರೂ ಒಂದು ಹೊಸದಾದ ನೀತಿಯನ್ನು ಈ ಸಂದರ್ಭದಲ್ಲಿ ನಿರೂಪಿಸಬೇಕೆಂದು ನಾನು ಕೋರುತ್ತೇನೆ. ತಾವು ಕೂಡ ಹರಿಜನರ ಅಭಿವೃದ್ಧಿ ಮಾಡಬೇಕೆಂದು ಮೊದಲಿನಿಂದಲೂ ಆಸೆಯಿಂದಿದ್ದೀರಿ. ಅಲ್ಲದೆ ಮಹಾತ್ಮ ಗಾಂಧೀಜಿಯವರೊಡನೆ ಇದ್ದು ಕೆಲಸ ಮಾಡಿದಂತಹವರು ಮತ್ತು ಹಿಂದುಳಿದ ಜನ ಸ್ಥಿತಿಗಳನ್ನೆಲ್ಲ ಚೆನ್ನಾಗಿ ತಿಳಿದಿರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟು ಅವರಿಗೆ ಅನುಕೂಲವಾಗುವಂತಹ ಒಂದು ನೀತಿಯನ್ನು ತಾವೇ ಹಾಕಬೇಕು. ಪ್ರತಿ ಹಳ್ಳಿಯಲ್ಲಿಯೂ ಅಥವಾ ಹೋಬಳಿಯಲ್ಲಿಯೂ ಕಟ್ಟಡಗಳಿಗಾಗಿ ಮತ್ತಿತರ ಶಾಲೆಗಳಿಗಾಗಿ ದಾನವನ್ನು ತಗೆದುಕೊಂಡು ಹೋದರೆ ವಿದ್ಯಾಭ್ಯಾಸವು ಮುಂದುವರಿಯುವುದಿಲ್ಲ. ಒಂದು ದೇಶ ಪ್ರಗತಿಯಿಂದ ಮುಂದುವರಿಯಬೇಕಾದರೆ ಅದು ಆ ದೇಶದಲ್ಲಿರುವ ವಿದ್ಯಾವಂತ ಪ್ರಜೆಗಳನ್ನು ಅವಲಂಬಿಸಿರುತ್ತದೆ. ನಮ್ಮಲ್ಲಿ ಏನೋ ಈಗ ಐನೂರು ಮನೆಗಳನ್ನು ಕಟ್ಟಬಹುದು, ಅಥವಾ ಸಾವಿರ ಮನೆಗಳನ್ನು ಕಟ್ಟಬಹುದು. ಆದರೆ ಅದೇ ಮನೆಗಳನ್ನು ಹತ್ತು ವರ್ಷಗಳಾದ ಮೇಲೆ ಹೋಗಿ ನೋಡಿದರೆ ಅವನ್ನು ನೋಡುವುದಕ್ಕೆ ಆಗದ ಸ್ಥಿತಿಯಲ್ಲಿರುತ್ತವೆ. ಇದು ಪ್ರಗತಿಯ ಕುರುಹೇ ಅಲ್ಲ ಎಂದು ಹೇಳಬಹುದು. ಹೀಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಪಂಚವಾರ್ಷಿಕ ಯೋಜನೆಯನ್ನು ಮುಂದುವರಿಸುವುದಾದರೆ ಏನನ್ನೂ ಸಾಧಿಸುವುದಕ್ಕೆ ಆಗುವುದಿಲ್ಲ. ಆದರೆ ಅಷ್ಟೇ ಲಕ್ಷಾಂತರ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಿ, ಸೆಕೆಂಡರಿ ಎಜುಕೇಷನ್ನಿಗಾಗಿ ಖರ್ಚುಮಾಡಿ, ವಿದ್ಯಾರ್ಥಿಗಳೆಲ್ಲ ವಿದ್ಯಾವಂತರಾಗುವ ಹಾಗೆ ಮಾಡಿ, ಅವರುಗಳು ವಿದ್ಯೆ ಕಲಿಯಲು ಎನ್ನುವ ಭಾವನೆಯಿಂದ ಒಂದು ಪಾಲಿಸಿಯನ್ನು ಇವತ್ತಿನ ದಿನ ತಾವು ಹಾಕಿದರೆ ಅದು ಇನ್ನು ಹತ್ತುವರ್ಷವಾದರೆ ಜೀವಂತರಾಗಿರುವ ವಿದ್ಯಾವಂತರನ್ನು ನಾವು ಕಾಣಬಹುದು.

ಕೊನೆಯದಾಗಿ ಈ ಎಡೆಡ್ಡು ಹಾಸ್ಟಲ್ಲುಗಳ ವಿಚಾರವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಈಗ ಸರಕಾರದವರೇ ಎಡೆಡ್ಡು ಹಾಸ್ಟೆಲುಗಳನ್ನು ಸ್ವತಃ ನಿರ್ಮಾಣಮಾಡಿ ನೇರವಾಗಿ ಸರಕಾರದ ಸಹಾಯವನ್ನು ಪಡೆದು ನಡೆಯುತ್ತಿರುವಂತಹ ಕೆಲವು ಹಿಂದುಳಿದ ಹಾಸ್ಟೆಲ್ಲುಗಳಿವೆ. ಈ ಬಗ್ಗೆ ಒಂದು ಮ್ಯಾನೇಜಿಂಗು ಕಮಿಟಿಯನ್ನು ಮಾಡಿಕೊಳ್ಳಬೇಕು. ಈ ಹಾಸ್ಟಲುಗಳನ್ನು ಹಿಂದುಳಿದವರೇ ಸ್ವತಃ ವಹಿಸಿಕೊಂಡು ನಡೆಸತಕ್ಕ ಜವಾಬ್ದಾರಿಯನ್ನು ಹೊರಬೇಕು. ಹೀಗೆ ಇಂತಹ ಜವಾಬ್ದಾರಿಗಳನ್ನು ಹೊತ್ತು ಮತ್ತು ಇಂತಹ ಹಾಸ್ಟಲುಗಳನ್ನು ಪ್ರಾರಂಭಮಾಡಿ ನಡೆಸಿರುವ ಜವಾಬ್ದಾರಿಯೂ ನನ್ನ ಅನುಭವದಲ್ಲಿ ಬಂದಿದೆ. ಈ ಹಾಸ್ಟಲುಗಳನ್ನು ನಡೆಸಿಕೊಂಡು ಹೋಗಲು ಒಂದು ತತ್ವವಿದೆ. ಈ ವಿಚಾರದ ಬಗ್ಗೆ ಎಷ್ಟೋಸಾರಿ ನಾನು ಅರಿಕೆ ಮಾಡಿದ್ದೇನೆ. ಈ ಕಾರ್ಯಗಳನ್ನೆಲ್ಲ ಮಾಡಲು ಒಂದು ಕಾರಣ ತತ್ವಶಃ ಇದೆ. ಈ ಹಾಸ್ಟಲುಗಳ ಮ್ಯಾನೇಜು ಮೆಂಟಿನವರು ಸುಲಲಿತವಾಗಿ ಕೆಲಸ ಮಾಡಲು ತಕ್ಕ ರೀತಿ ನೀತಿಗಳು, ನಿಯಮಗಳು ಇಲ್ಲದೇ ಇಲ್ಲ, ಇವೆ. ಎಷ್ಟೋ ಸರ್ಕ್ಯುಲರುಗಳಿವೆ, ಗ್ರ್ಯಾಂಟು ಇನ್ ಏಡು ಕೋಡಿದೆ, ಕ್ಯೆನಾನ್‌ಷಿಯಲ್ ಕೋಡಿದೆ, ಕಾನೂನುಗಳಿವೆ. ಇವುಗಳನ್ನೆಲ್ಲ ತಿಳಿದು ನಡೆಸಬೇಕು. ಅನುಭವವಿಲ್ಲದವರೂ ಕೂಡ ಇದನ್ನು ಚೆನ್ನಾಗಿ ನಡೆಸಿಕೊಂಡು ಹೋಗಲು ಮತ್ತು ಸುಲಲಿತವಾಗಿ ಹಾಸ್ಟಲುಗಳನ್ನು ನಡೆಸಿಕೊಂಡು ಹೋಗಲು ತಕ್ಕಂತಹ ಒಂದು ನೀತಿಯನ್ನು ಸರಕಾರದವರು ಹಾಕಬೇಕು. ಹಾಗೆ ಮಾಡಿದರೆ ಹಿಂದುಳಿದವರ ಅಭಿವೃದ್ಧಿಯಾಗಲು ಅನುಕೂಲವಾಗುತ್ತದೆ ಎಂದು ಹೇಳಿ, ನನ್ನ ಈ ಒಂದೆರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[Sri MADHAV RAO (Hulsur) began to speak in Hindi.]

Sri G. SIVAPPA.—I rise to a point of order Sir. I think the Chair is not able to understand the language. The Reporters are not recording the speech and the Minister and the Deputy Ministers are not able to follow. What urpose would by served by this speech Sir ?

Mr. DEPUTY SPEAKER.—I cannot help. The Hon'ble Member will go on. It is being recorded.

Sri G. SIVAPPA.—Sir, I can see that the speech is not recorded. The Reporters are not writing.

Mr. DEPUTY SPEAKER.—If official Reporters are not able to record, the speech will be generally tape-recorded.

[Sri MADHAV RAO continued his speech in Hindi.]

*Smt. VIJAYA RAGHAVENDER RAO (Chitapur).—Mr. Speaker, Sir, I rise to support the Demand that is before the House today.

Government is spending nearly 11 to 12 crores of rupees to increase literacy in the State and attention is being paid to theoretical and academic aspects of education. Education should develop our minds and increase our knowledge at an early age. Our primary schools should be converted into basic schools and these schools should be supplied with proper equipment. In addition to this, film shows will have to be held. These film shows will also help the students to increase their knowledge in all spheres of education. More than this, the school building should be in a better condition. Otherwise, the children will never step into the school. Here, I would like to invite the attention of the Government to the Chitapur school in Gulbarga District. It is a hundred years old. It needs immediate

ಪ್ರಾಪ್ತಿ ಕ್ರಮಾಂಕ Accession No. 4785
ದಿನಾಂಕ Date

Government money. ಉಪಾಧ್ಯಾಯರುಗಳು ಸ್ಕೂಲುಗಳನ್ನು ಸರಿಯಾಗಿ ನಡೆಸುವುದಿಲ್ಲ. ಹಿಂದಿ ಪ್ರಚಾರದಲ್ಲಿ ಏನೇನೋ ಕೆಲಸ ನಡೆದಿದೆ. ಅದನ್ನು ಈ ಸಭೆಯಲ್ಲಿ ಹೇಳುವುದು ಚೆಂದಾಗಿ ಕಾಣುವುದಿಲ್ಲ. ಈ ಸ್ಪೆಷಲ್ ಇನ್‌ಸ್ಟಿಟ್ಯೂಷನ್‌ಗಳಿಗೆ ಕೊಡುವ ಹಣವನ್ನು ನಿಲ್ಲಿಸಿ ಬಿಡಿ. ಸರ್ಕಾರದ ಕಡೆಯಿಂದ ಕೆಲವು ಮಂದಿ ಆಫೀಸರುಗಳನ್ನು ಹಿಂದಿಯಲ್ಲಿ ತರಪೇತುಮಾಡಿ, ಟೀಚರ್ಸ್ ಆಗಿ ನೇಮಕಮಾಡಿ. ಈ ವಿಷಯದಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಕೆಲಸ ಮಾಡಬೇಕು.

ನಾಲ್ಕನೆಯದಾಗಿ, ಉಪಾಧ್ಯಾಯರ ಸ್ಥಿತಿ ಆಲೋಚನೆ ಮಾಡಿದರೆ, ಅವರಿಗೆ ಬರತಕ್ಕಂಥ ಸಂಬಳ ಬಹಳ ಕಡಿಮೆ. ಅವರ ಪ್ರತಿಯೊಂದು ಟ್ರಾನ್ಸ್‌ಫರ್ ಆರ್ಡರನ್ನು ಕಲೆಕ್ಟರು ಮಾಡಬೇಕು. ಬಳ್ಳಾರಿ ಜಿಲ್ಲೆಯಲ್ಲಿ ಮೇಷ್ಟ್ರುಗಳ mass transfers ವಿಪರೀತವಾಗಿವೆ. ಒಂದೇವರ್ತಿಗೆ 100—200 ಮಂದಿ ಟ್ರಾನ್ಸ್‌ಫರ್ ಆಗಿ, ಬಡ ಉಪಾಧ್ಯಾಯರುಗಳು ಅನೇಕ ಕಷ್ಟಗಳಿಗೆ ಗುರಿಯಾಗಿದ್ದಾರೆ. ಅವರಿಗೆ ಬರತಕ್ಕಂಥ ಸಂಬಳ ಸಾಲದು. ಅವರ ಟ್ರಾನ್ಸ್‌ಫರ್ ಸಾಧ್ಯವಾದಮಟ್ಟಿಗೆ, ಸ್ಥಳೀಯ ಏರಿಯಾದಲ್ಲಿಯೇ ಆಗಬೇಕು ಎಂದು ಸರ್ಕಾರದವರನ್ನು ಬೇಡುತ್ತೇನೆ.

ಡಿಪ್ರೆಸ್ಡ್ ಕ್ಲಾಸ್ ಸ್ಟೂಡೆಂಟ್ಸ್ ವಿಷಯದಲ್ಲಿ ಎರಡು ಮಾತುಗಳನ್ನು ಆಡಬೇಕೆಂದು ಇದ್ದೇನೆ. ಈ ಸಭೆಗೆ ಕೊಡತಕ್ಕ ದುಡ್ಡನ್ನೆಲ್ಲಾ ಸಂಪೂರ್ಣವಾಗಿ ನಿಲ್ಲಿಸಿ ಡಿಪ್ರೆಸ್ಡ್ ಕ್ಲಾಸ್ ಎಜುಕೇಶನ್ನಿಗೆ ಸ್ಯಾಂಕ್ಷನ್ ಮಾಡಿದರೆ ಬಹಳ ಚೆಲೋ ಆಗುತ್ತದೆ. ಪಾಠಶಾಲೆಗಳೇನೋ ಇವೆ. ಆದರೆ ಡಿಪ್ರೆಸ್ಡ್ ಕ್ಲಾಸ್ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯ ನಡೆಯುತ್ತಾ ಇದೆ. ಸರ್ಕಾರದಿಂದ ಸಂಬಳ ತೆಗೆದುಕೊಳ್ಳತಕ್ಕವರು ಅನ್‌ಟಚಬಿಲಿಟಿ ಅಬ್‌ನರ್ವ್ ಮಾಡುವುದು ಬಹಳ ಶೋಚನೀಯ. ಈ ಪಾಠಶಾಲೆಗಳಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್ಸ್ ಸ್ಟೂಡೆಂಟ್ಸ್ ಒಂದು ಕಡೆ, ಮತ್ತು ಟೀಚರ್ಸ್ ಒಂದು ಕಡೆ ಕುಳಿತುಕೊಳ್ಳುತ್ತಾರೆ. ಶೆಡ್ಯೂಲ್ಡ್ ಕ್ಯಾಸ್ಟ್ಸ್ ಸ್ಲೇಟ್, ಬುಕ್‌ಗಳನ್ನು ಕೂಡ ಮುಟ್ಟದಂಥ ಟೀಚರ್‌ಗಳು ನಮ್ಮ ಜಿಲ್ಲೆಯಲ್ಲಿದ್ದಾರೆ. ಸರ್ಕಾರದವರು ಅನ್‌ಟಚಬಿಲಿಟಿ ನಿರ್ಮೂಲ ಮಾಡುವ ದೃಷ್ಟಿಯಿಂದ ಕೋಟಿ ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಆದರೆ ಸರ್ಕಾರಿ ಉದ್ಯೋಗಸ್ಥರು, ಟೀಚರುಗಳು ಈರೀತಿ ಅನ್‌ಟಚಬಿಲಿಟಿ ಅಬ್‌ಸರ್ವ್ ಮಾಡಿ, ಶೆಡ್ಯೂಲ್ಡ್ ಕ್ಯಾಸ್ಟ್ಸ್ ವಿದ್ಯಾರ್ಥಿಗಳನ್ನು ದೂರ ಇಟ್ಟು, ವಿದ್ಯೆ ಕಲಿಸುವುದಕ್ಕೆ ಪ್ರಯತ್ನಿಸಿದರೆ, ಎಷ್ಟರ ಮಟ್ಟಿಗೆ ಅವರ ವಿದ್ಯಾ ಅಭಿವೃದ್ಧಿಗೆ ಸಹಾಯ ಮಾಡಿದ ಹಾಗಾಗುತ್ತದೋ ನನಗೆ ಗೊತ್ತಿಲ್ಲ. Untouchability ಹೋಗುವುದಕ್ಕೆ ಬಹಳ ದಿನ ಬೇಕಾಗುತ್ತದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೆ, ಶೆಡ್ಯೂಲ್ಡ್ ಕ್ಯಾಸ್ಟ್ಸ್ ಜನಗಳ ವಿದ್ಯೆ ಒಂದು ಲೆವರ್‌ವರೆಗೆ ಬರುವವರೆಗೂ, ಶೆಡ್ಯೂಲ್ಡ್ ಕ್ಯಾಸ್ಟ್ಸ್ ವಿದ್ಯಾರ್ಥಿಗಳಿಗೆ ಶೆಡ್ಯೂಲ್ಡ್ ಕ್ಯಾಸ್ಟ್ಸ್ ಟೀಚರ್ಸ್‌ಗಳನ್ನೇ ಅಪಾಯಿಂಟ್ ಮಾಡಿ, ಡಿಪ್ರೆಸ್ಡ್ ಕ್ಲಾಸಸ್‌ಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಕರ್ಯ ಕಲ್ಪಸಿ ಕೊಡಬೇಕೆಂದು ನಾನು ಬೇಡುತ್ತೇನೆ. ಈ ವಿಷಯದಲ್ಲಿ Rural Development Scheme ಚರ್ಚೆಗೆ ಬಂದಾಗ ಮಾತನಾಡಬಹುದು. ವೇಳೆ ಇಲ್ಲದ ಕಾರಣ, ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ವಿ. ದೇಸಾಯಿ (ಗಂಗಾವತಿ).—ಮಾನ್ಯ ಅಧ್ಯಕ್ಷರೆ, ಈಗ ವಿದ್ಯಾಖಾತೆಯ 10,78,46,200 ರೂಪಾಯಿಗಳ ಬೇಡಿಕೆಯನ್ನು ಸಮರ್ಥಿಸುತ್ತ, ಅದರ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದು ಮಾಡಿದ್ದೇನೆ.

ಮೊದಲನೆಯದಾಗಿ ಮಾನ್ಯ ಮಂತ್ರಿಗಳು 10-11 ಕೋಟಿ ರೂಪಾಯಿಯಷ್ಟು ಹಣವನ್ನು ಈ ಬಡ್ಜೆಟ್ಟಿನಲ್ಲಿ ವಿದ್ಯಾಖಾತೆಗೆ ಒದಗಿಸಿದ್ದು ಒಂದು ದೊಡ್ಡತನ. ಅದಕ್ಕೋಸ್ಕರ ಅವರಿಗೆ ಧನ್ಯವಾದವನ್ನು ಅರ್ಪಿಸುತ್ತೇನೆ. ಇಷ್ಟು ದುಡ್ಡನ್ನು ವಿದ್ಯಾಖಾತೆಗೆ ಒದಗಿಸಿರುವುದರಿಂದ, ಸುಖೀರಾಜ್ಯ ಸ್ಥಾಪನೆ ಮಾಡಬೇಕೆಂಬ ಗುರಿ ಇಟ್ಟುಕೊಂಡಿದ್ದೇವೆನ್ನುವುದಕ್ಕೆ ಸಂಶಯವಿಲ್ಲ. ಆದರೆ ಈ ಖಾತೆಗೆ ಇದಕ್ಕೂ ಹೆಚ್ಚಿನ ಹಣ ಒದಗಿಸುವುದು ಯೋಗ್ಯ.

ವಿದ್ಯಾವಿಷಯದಲ್ಲಯೇ ಅಲ್ಲದೆ, ನಮ್ಮ ಹೈದರಾಬಾದ್ ಭಾಗದ ಸ್ಕೂಲುಗಳು ಪ್ರತಿಯೊಂದು ವಿಷಯದಲ್ಲಿಯೂ ಬ್ಯಾಕ್‌ವರ್ಡ್ ಆಗಿವೆ ಎಂದು ಹೇಳತಕ್ಕಂಥದ್ದು ಯೋಗ್ಯವಾಗುವುದಿಲ್ಲ. ಆದರೂ ಕೂಡ ಹೇಳದೆ ಗತ್ಯಂತರವಿಲ್ಲ. ಹೈದರಾಬಾದ್ ಕರ್ಣಾಟಕದಲ್ಲಿ ಈಗಿರತಕ್ಕಂಥ ಶಾಲೆಗಳು ಎಷ್ಟಿವೆ, ಅವುಗಳಲ್ಲಿ ಯಾವ ರೀತಿ ಕೆಲಸ ನಡೆಯುತ್ತದೆ, ಎನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿರಲಕ್ಕೇ ಬೇಕು. ಅಲ್ಲ ಪ್ರೈಮರಿ ಸ್ಕೂಲುಗಳು ಸಾಕಷ್ಟಿಲ್ಲ, ಹೆಚ್ಚು ಪ್ರೈಮರಿ ಸ್ಕೂಲುಗಳನ್ನು ಒದಗಿಸಬೇಕೆಂದು ಹೋದಸಲ ಹೇಳಿದ್ದೆ. ಈ ಸಾಲಿನಲ್ಲಿ ಈ ಡಿಸ್ಟ್ರಿಕ್ಟಿಗೆ 35 ಹೊಸ ಪ್ರೈಮರಿ ಸ್ಕೂಲ ಗಳನ್ನು ಕೊಟ್ಟಿದ್ದಾರೆಂದು ನನಗೆ ಗೊತ್ತಿದೆ. ಅಷ್ಟು ಸಾಲದು. ಏಕೆಂದರೆ ಈ ವಿಷಯದಲ್ಲಿ ಹಳೆಯ ಮೈಸೂರನ್ನೂ, ಬೊಂಬಾಯಿ ಕರ್ಣಾಟಕವನ್ನೂ ಜೊತೆಗೆ ತುಲನ ಮಾಡಿ ನೋಡಿದರೆ, ಬೊಂಬಾಯಿ ಕರ್ಣಾಟಕದ ಭಾಗ ಬಹಳ ಹಿಂದುಳಿದಿದೆ. ಈ ಭಾಗ ಮುಂದಕ್ಕೆ ಬರಬೇಕಾದರೆ, 35 ಸ್ಕೂಲುಗಳನ್ನು ಕೊಟ್ಟರೆ ಸಾಲದು. ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಕೊನೆಯ ಪಕ್ಷ 70 ಶಾಲೆಗಳನ್ನು ಪ್ರತಿ ವರ್ಷವೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಸಲುವಾಗಿ ಬಡ್ಜೆಟ್ಟಿನಲ್ಲಿ ಸೂಕ್ತ ರೀತಿಯಲ್ಲಿ reappropriation ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇಷ್ಟೇ ಅಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ, ಸಾಧಾರಣವಾಗಿ ಸರಾಸರಿ ಜನಸಂಖ್ಯೆ ಒಂದು ಲಕ್ಷ ಇದೆ. ಮಿಡಲ್ ಸ್ಕೂಲ್ ಸರಾಸರಿ ಮೂರಕ್ಕಂತ ಜಾಸ್ತಿ ಇಲ್ಲ, ಹೈಸ್ಕೂಲು ಒಂದಕ್ಕಿಂತ ಕಡಿಮೆ ಇದೆ. ನಮ್ಮ ಡಿಸ್ಟ್ರಿಕ್ಟಿನಲ್ಲಿ ಒಂದು ತಾಲ್ಲೂಕಿದೆ, ಅಲ್ಲ ಮಿಡಲ್ ಸ್ಕೂಲ್ ಇಲ್ಲ. ಅಂದ ಮೇಲೆ ಅಲ್ಲ ಬಹಳ ವಿಚಿತ್ರ ಪರಿಸ್ಥಿತಿ ಇದೆ. ಇದನ್ನು ವಿಚಾರ ಮಾಡಿಕೊಂಡು, ಮಿಡಲ್ ಸ್ಕೂಲುಗಳನ್ನು ಹೆಚ್ಚು ಪ್ರಮಾಣದಲ್ಲಿ ಕೊಡಬೇಕು, ಇದಕ್ಕೋಸ್ಕರ ಎಲ್ಲಿಂದ ಆದರೂ ಗ್ರಾಂಟನ್ನು ಒದಗಿಸಬೇಕು.

ಪ್ರೈವೇಟ್ ಮಿಡಲ್ ಸ್ಕೂಲುಗಳು ಬಹಳ ಚಿಂತಾಜನಕ ಪರಿಸ್ಥಿತಿಯಲ್ಲವೆ. ಅವುಗಳಿಗೆ ಸಾಕಷ್ಟು ಹಣ ಒದಗಿಸಿಲ್ಲ. ಆದ್ದರಿಂದ ಅವುಗಳಿಗೆ ಹೆಚ್ಚು ಹಣ ಒದಗಿಸಬೇಕು. ಅವುಗಳನ್ನು ಗವರ್ನಮೆಂಟ್ ತೆಗೆದುಕೊಳ್ಳದಿದ್ದರೆ ಅಡ್ಡಿ ಇಲ್ಲ. ಮಿಡಲ್ ಸ್ಕೂಲುಗಳಿಗೆ ಜಾಸ್ತಿ ಹಣ ಒದಗಿಸಬೇಕು. ಸರ್ಕಾರದವರು ಅವುಗಳನ್ನು ತಮ್ಮ ಕಡೆ ತೆಗೆದುಕೊಂಡು ನಡೆಸುವುದಕ್ಕೆ ಪ್ರಾರಂಭ ಮಾಡಬೇಕು.

ಇನ್ನೊಂದು ವಿಷಯ, ಗವರ್ನಮೆಂಟ್ ಶಾಲೆಗಳ ಕಟ್ಟಡಕ್ಕೋಸ್ಕರ ಒದಗಿಸಿರುವ ಹಣವನ್ನು ಬಡ್ಜೆಟ್ ಪೂರ್ತ ನೋಡಿದೆ. ನಮ್ಮ ಪ್ರದೇಶಕ್ಕೆ ಒಂದು ಕಟ್ಟಡಕ್ಕೂ ಬಡ್ಜೆಟ್ಟಿನಲ್ಲಿ ಹಣ ಅಲಾಟ್ ಮಾಡಿಲ್ಲ. ನಮ್ಮ ಭಾಗದ ಮೂರು ಡಿಸ್ಟ್ರಿಕ್ಟ್‌ಗಳನ್ನು ನೋಡಿ

(ಶ್ರೀ ಬಿ. ವಿ. ದೇಸಾಯಿ)

ದರೂ, ಅವುಗಳಲ್ಲಿ ಒಂದು ಕಟ್ಟಡಕ್ಕಾದರೂ ಹಣ ಅಲಾಟ್ ಮಾಡಿಲ್ಲ. "Lumpsum grant for integrated areas" ಎಂಬ ಒಂದು ಹೆಡ್ ಇದೆ. ಅದರಲ್ಲಿ ಒಟ್ಟು ಹತ್ತುಲಕ್ಷ ರೂಪಾಯಿ ಇಟ್ಟಿದ್ದಾರೆ. ಅದನ್ನು ಇಟ್ಟಿದ್ದರೂ ಲ್ಯಾಪ್ಸ್ ಮಾಡುತ್ತಾರೋ ಏನೋ? ಈ ರೀತಿ ವಿದ್ಯಾ ಶಾಖಾ ಮಂತ್ರಿಗಳು ಮಾಡಬಾರದು. ಎಷ್ಟೋ ಗವರ್ನಮೆಂಟ್ ಹೈಸ್ಕೂಲುಗಳಿಗೆ, ಗವರ್ನಮೆಂಟ್ ಕಟ್ಟಡ ಇಲ್ಲ. ಇರುವ ಎಷ್ಟೋ ಕಟ್ಟಡಗಳೂ ರಿಪೇರಿ ಆಗಲಾರದೆ, ಬಿದ್ದು ಹೋಗಿವೆ. ವಾಸಮಾಡಲಿಕ್ಕೆ ಸಾಧ್ಯವಿಲ್ಲ, ಆ ಕಟ್ಟಡಗಳನ್ನು ಬಿಟ್ಟುಬಿಡಬೇಕೆಂದು ಪಿ. ಡಬ್ಲು. ಡಿ. ಯವರು ಸರ್ಟಿಫಿಕೇಟ್ ಕೊಟ್ಟಿದ್ದರಿಂದ, ಗಿಡದ ಕೆಳಗೇ ವಿದ್ಯಾರ್ಥಿಗಳು ಓದುತ್ತಿದ್ದಾರೆ. ರಾಯಚೂರ್ ಹೈಸ್ಕೂಲ್ ಬಗ್ಗೆ ಇದನ್ನು ಹೇಳುತ್ತಿದ್ದೇನೆ. ಇನ್ನು ಉಳಿದ ಗುಲ್ಬರ್ಗ ಮತ್ತು ಬಿದರೆಯಲ್ಲಿಯೂ ಕೂಡ ಗವರ್ನಮೆಂಟ್ ಸ್ಕೂಲುಗಳ ಕಟ್ಟಡದ ಪರಿಸ್ಥಿತಿ ಇದೇ ರೀತಿ ಇದೆ ಎಂದು ಹೇಳಬಯಸುತ್ತೇನೆ.

ಇನ್ನೊಂದು ವಿಷಯ. ಉಪಾಧ್ಯಾಯರ ಪೇ ಬಿಲ್ಸ್ ಬಗ್ಗೆ ನಮ್ಮ ಕಡೆ ಇಸ್ಪೆಕ್ಟರೇ ಸಹಿ ಮಾಡಬೇಕು. ಪ್ರೈಮರಿ ಸ್ಕೂಲ್, ಮಿಡಲ್ ಸ್ಕೂಲ್ ಟೀಚರ್ಸ್ ಪೇ ಬಿಲ್ಸ್ ಅವರಿಗೇ ಹೋಗಬೇಕು. ಅವರು ಸಹಿ ಮಾಡಿದ ಮೇಲೆ ಇವರಿಗೆ ಸಂಬಳ ಬರಬೇಕು. ಇಸ್ಪೆಕ್ಟರ್ ಆಫ್ ಸ್ಕೂಲ್ಸ್ ಒಬ್ಬರೇ ಇರುವುದರಿಂದ, ಅವರಿಗೆ ಸಾಕಷ್ಟು ಸ್ಕೂಲುಗಳ ಕೆಲಸ ಇರುವುದರಿಂದ, ಅವರಿಗೆ ಸಹಿ ಮಾಡುವುದಕ್ಕಾಗುವುದಿಲ್ಲ. ಎಷ್ಟೋ ಉಪಾಧ್ಯಾಯರುಗಳಿಗೆ ನಾಲ್ಕು-ಆರು ತಿಂಗಳ ವರೆಗೆ ಸಂಬಳ ಸಿಕ್ಕಲಾರದೆ ಇರುತ್ತಾರೆ. ಇದಕ್ಕೆ ಏನಾದರೂ ಡೆಪ್ಯುಟಿ ಇಸ್ಪೆಕ್ಟರ್ಸ್ ಎಂದು ಮಾಡಿ ಆರೀತಿ ಪೇ ಬಿಲ್ಸ್‌ಗೆ ಸಿಗ್ನೇಚರ್ ಮಾಡುವ ಅಧಿಕಾರ ಅವರಿಗೆ ಕೊಡುವುದು ಅವಶ್ಯವಿದೆ ಎಂದು ನನಗೆ ಅನಿಸುತ್ತದೆ. ಇನ್ನೊಂದು ದೊಡ್ಡ ವಿಷಯ ಸರ್ಕಾರಕ್ಕೆ ಬಿನ್ನೈಸುತ್ತೇನೆ. ನಮ್ಮ ಭಾಗಕ್ಕೆ ಟೆಕ್ನಿಕಲ್ ಸ್ಕೂಲ್, ಟೆಕ್ನಿಕಲ್ ಕಾಲೇಜ್ ಇರಲಿಲ್ಲ, ಇಂಜಿನಿಯರಿಂಗ್ ಕಾಲೇಜ್ ಇರಲಿಲ್ಲ. ಇಂಜಿನಿಯರಿಂಗ್ ಕಾಲೇಜ್ ಪ್ರೈವೇಟಾಗಿ ಮಾಡುವುದಕ್ಕೆ ಒಂದು ಕಮಿಟಿ ಮಾಡಿದ್ದಾರೆ. ನಾನು ಅದರಲ್ಲಿ ಇದ್ದೇನೆ. ಸೆಂಟ್ರಲ್ ಗೌರ್ನಮೆಂಟಿನಿಂದ ಅರ್ಧ ಹಣ ದೊರೆಯುತ್ತದೆ. ನಮ್ಮಿಂದ ಅರ್ಧ ಹಣ ಕೊಡಬೇಕಾಗುತ್ತದೆ. ಎಂದರೆ ಸ್ಟೇಟ್ ಗೌರ್ನಮೆಂಟ್ ಮತ್ತು ಪ್ರೈವೇಟ್ ಕಲೆಕ್ಷನ್ಸ್. ಈ ಬಗ್ಗೆ ನನಗೆ ಲೇಟೆಸ್ಟ್ ಫಿಗರ್ಸ್ ಬಂದಿಲ್ಲ. ಸುಮಾರು ಒಂದೂವರೆ ಲಕ್ಷಕ್ಕಿಂತ ಹೆಚ್ಚು ಹಣ ನಮ್ಮ ಕಡೆಯಿಂದ ಬಂದಿದೆ. ಸರ್ಕಾರದ ಪ್ರಪೋಸ್ಡ್ ಇಂಜಿನಿಯರಿಂಗ್ ಕಾಲೇಜನ್ನು ಹೈದರಾಬಾದ್ ಕರ್ಣಾಟಕ ಏರಿಯಾಕ್ಕೆ ಮೀನಲಾಗಿ ಇಟ್ಟಿರುವುದೇ ನಂತೋಷದ ಸುದ್ದಿ. ಅದಕ್ಕೆ ನಮ್ಮ ಧನ್ಯವಾದಗಳನ್ನ ಸರ್ಕಾರಕ್ಕೆ ಅರ್ಪಿಸುತ್ತೇನೆ. ಈ ಕಾಲೇಜನ್ನು ಇಲ್ಲಿ ಸ್ಥಾಪನೆ ಮಾಡಬೇಕು ಎನ್ನುವುದಕ್ಕೆ ಮುಖ್ಯ ಮಂತ್ರಿಗಳು ಹೈದರಾಬಾದ್ ಕರ್ಣಾಟಕ ಸದಸ್ಯರ ಮೀಟಿಂಗ್ ಕರೆದಿದ್ದರು. ಕೆಲವು ಭಾಗದವರು ಗುಲ್ಬರ್ಗದಲ್ಲಿ ಆಗಬೇಕೆಂದರು. ಇನ್ನು ಕೆಲವು ಭಾಗದವರು ರಾಯಚೂರು ಭಾಗದಲ್ಲಿ ಆಗಬೇಕು ಎಂದರು. ಅದಕ್ಕಾಗಿ ಒಂದು ಎಕ್ಸ್‌ಪರ್ಟ್ ಕಮಿಟಿ ನೇಮಿಸೋಣ ಎಂದು ಸರ್ಕಾರದವರು ಹೇಳಿದರು. ಇಲ್ಲಿಯವರೆಗೆ ಎಕ್ಸ್‌ಪರ್ಟ್ ಕಮಿಟಿ ಆಗಿಲ್ಲ. ಕೆಲವೊಂದು ಮೀಟಿಂಗ್ ನೋಟೀಸ್‌ನಲ್ಲಿ "Notices for the establishment of Engineering College in Gulberga" ಎಂದು ಬರೆದಿತ್ತು. ಗೌರ್ನಮೆಂಟ್ ಸರವರು ಎಕ್ಸ್‌ಪರ್ಟ್ ಕಮಿಟಿ ನೇಮಿಸದೆಯೇ ನಿರ್ಣಯವನ್ನು ತೆಗೆದುಕೊಂಡಿದ್ದಾರೆಯೇ ಎಂಬ ವಿಷಯದಲ್ಲಿ ಮಾಹಿತಿ ಕೊಡಬೇಕು. ಹಾಗೆ ತೆಗೆದುಕೊಂಡರೆ ಕಾರಣ ಏನು? ರಾಯಚೂರ್ ಡಿಸ್ಟ್ರಿಕ್ಟ್ ವಿಷಯ ಹೇಳಬೇಕಾದರೆ ಇಂಜಿನಿಯರಿಂಗ್ ಕಾಲೇಜನ್ನು ರಾಯಚೂರ್ ಡಿಸ್ಟ್ರಿಕ್ಟನ್ನು ಬಿಟ್ಟು ಬೇರೆ ಕಡೆ ಮಾಡಿದರೆ ಅದು waste of money ಆಗುತ್ತದೆ. ರಾಯಚೂರ್ ಡಿಸ್ಟ್ರಿಕ್ಟಿನಲ್ಲಿ ತುಂಗಭದ್ರಾ ಪ್ರಾಜೆಕ್ಟ್ ಹೈಡ್ರೋ ಎಲೆಕ್ಟ್ರಿಕ್ ಸ್ಕೀಮ್ ಲೆಫ್ಟ್ ಬ್ಯಾಂಕ್ ಸೈಡ್ ಪೂರ್ತಿ ಆಗುತ್ತದೆ. ಆದ್ದರಿಂದ ಅಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಮಾಡಿದರೆ ಡ್ಯಾಮು ಕಟ್ಟುವ ವಿಷಯದಲ್ಲಿ ರಸ್ತೆ ಹಾಕುವುದರಲ್ಲಿ ಸಿವಿಲ್ ಮತ್ತು ಮೆಕಾನಿಕಲ್ ವಿಷಯದಲ್ಲಿ ತಿಳಿವಳಿಕೆ ಕೊಡಲು ಸಹಾಯಕವಾಗಿರುವ ಸ್ಥಳವಾಗಿರುತ್ತದೆ. ಆದ್ದರಿಂದ ನಾನು ಗೌರ್ನಮೆಂಟಿನವರನ್ನು ಕೇಳಿಕೊಳ್ಳುವುದು ಇಷ್ಟೆ. ಹೈದರಾಬಾದ್ ಕರ್ಣಾಟಕದಲ್ಲಿ ಅದನ್ನು ಎಲ್ಲಿ ಮಾಡಬೇಕೆಂದು ಯೋಚಿಸುವಾಗ ಈ ವಿಷಯವನ್ನು ಯೋಚನೆ ಮಾಡಿ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಒಂದೇ ಒಂದು ವಿಷಯ. ಪೊನ್ನೆ ಪ್ರಶ್ನೋತ್ತರಗಳ ಕಾಲದಲ್ಲಿ ಶ್ರೀ ಮೋಹಸಿನ್‌ರವರಿಗೆ ಉತ್ತರ ಕೊಡುತ್ತಾ ಹರಿಜನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಾವ ರೀತಿ ಸೌಲಭ್ಯ ಸೌಕರ್ಯಗಳು ದೊರೆಯುತ್ತವೆ ಅವು ಅವರು ಕನ್‌ವರ್ಟ್ ಆದಮೇಲೂ ಕೂಡ ಅದೇ ರೀತಿ ಸೌಲಭ್ಯ ಅವರಿಗೆ ದೊರೆಯಬೇಕು ಎಂದು ಸರ್ಕಾರದವರು ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಶ್ರೀ ವೆಂಕಟಪ್ಪನವರು ಹೇಳಿದರು. ಕ್ಯಾಬಿನೆಟ್ ಆ ರೀತಿ ತೀರ್ಮಾನ ತೆಗೆದುಕೊಂಡಿದ್ದಾರೆಯೇ ಅಥವಾ ಮಾನ್ಯ ಮಂತ್ರಿಗಳು ಆ ರೀತಿ ಹೇಳಿದರೋ ಎಂದು ನನಗೆ ಗೊತ್ತಾಗಿಲ್ಲ. ಈ ವಿಷಯ ದೊಡ್ಡದು ಇದೆ. ಹರಿಜನರಿಗೆ ಈರೀತಿ ಸೌಲಭ್ಯ ಕೊಡತಕ್ಕ ವಿಷಯ ಕಾನ್ಸ್‌ಟಿಟ್ಯೂಷನ್‌ನಲ್ಲಿ ಪ್ರೊವೈಡ್ ಮಾಡಿದ್ದಾರೆ. ಆದರೆ ಹರಿಜನರು ಕನ್‌ವರ್ಟ್ ಆದಮೇಲೆ ಕೊಡಬೇಕೇ ಕೊಡಬಾರದೇ ಎನ್ನುವುದನ್ನು ದೀರ್ಘವಾಗಿ ಯೋಚಿಸಬೇಕಾದ ವಿಷಯ. ಹಾಗೆ ಕನ್‌ವರ್ಟ್ ಆದಮೇಲೂ ಕೊಟ್ಟರೆ ಸೆಕ್ಯುಲರ್ ಸ್ಟೇಟಿಗೆ ಧಕ್ಕೆ ಬರುತ್ತದೆ. ತಾವು ಕೊಡಬೇಕಾಗಿದ್ದರೆ ಯಾವ ಮತಕ್ಕೇ ಆದರೂ ಕನ್‌ವರ್ಟ್ ಆದರೆ ಕೊಡಬೇಕು ಎಂದು ನಿರ್ಣಯ ತೆಗೆದುಕೊಳ್ಳಬೇಕಾಗಿತ್ತು. ಈ ವಿಷಯದಲ್ಲಿ ಈ ರೀತಿ ತಾರತಮ್ಯ ಏತಕ್ಕೆ ಮಾಡಿದರು ಎನ್ನುವ ಬಗ್ಗೆ ಸ್ಪಷ್ಟವಾಗಿ ಸಭೆಯ ಮುಂದೆ ವಿವರಣೆ ಇಡಬೇಕು ಎಂದು ಕೇಳಿಕೊಳ್ಳುತ್ತೇನೆ.

Sri K. PUTTASWAMY (Mysore).— Have the Government taken such a decision ?

Sri B. V. DESAI.—I want to ask about it specially. ಕ್ಯಾಬಿನೆಟ್‌ನಲ್ಲಿ ಈ ವಿಷಯವನ್ನು ಡಿಸ್‌ಕಸ್ ಮಾಡಿ ನಿರ್ಣಯ ತೆಗೆದುಕೊಂಡಿದ್ದಾರೆಯೇ, ಅಥವಾ ವಿದ್ಯಾಭ್ಯಾಸ ಖಾತೆಯಲ್ಲಿ ಈ ರೀತಿ ನಿರ್ಣಯ ತೆಗೆದುಕೊಂಡಿದ್ದಾರೆಯೇ ಎಂದು ತಿಳಿಸಬೇಕು. ಇದು ಸೆಕ್ಯುಲರ್ ಸ್ಟೇಟಿಗೆ ಧಕ್ಕೆ ತರತಕ್ಕ ವಿಷಯ. ಎಲ್ಲ ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ನೀತಿಯ ವಿಚಾರ. ಈಗ ಐದು ಒಂದುಗೂಡಿರತಕ್ಕ ಪ್ರದೇಶದಲ್ಲಿ ಆಯಾ ಭಾಗದ್ದು,

ಆಯಾ ಭಾಗಕ್ಕೆ ಬಿಟ್ಟಂತೆ ಇದೆ. ಮಾನಸಿಕ ದೃಷ್ಟಿಯಿಂದ ಒಂದುಗೂಡಬೇಕಾದರೆ ವಿದ್ಯಾಭ್ಯಾಸದ ನೀತಿಯನ್ನ ಒಂದೇ ರೀತಿಯಾಗಿ ಅನುಸರಿಸುವುದು ಅವಶ್ಯ ಇದೆಯೆಂದು ಶ್ರೀ ಕೌಜಲಗಿ ಹೇಳಿದರು. ಅದಷ್ಟು ತೀವ್ರವಾಗಿ ಈ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಎಲ್ಲಾ ಕಡೆಗೂ ಒಂದೇ ರೀತಿಯ ವಿದ್ಯಾಭ್ಯಾಸದ ನೀತಿಯನ್ನು ಅನುಸರಿಸಬೇಕು ಎಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಹಾಸ್ಟಲುಗಳಿಗೆ ಗ್ರಾಂಟುಕೊಡುವ ವಿಷಯ ಹೇಳಬೇಕಾದರೆ ನಮ್ಮ ಕಡೆ ಗ್ರಾಂಟು ಕೊಡುವುದಕ್ಕೆ ಹಾಸ್ಟೆಲುಗಳ ರಿಜಿಸ್ಟರ್ ಆಗಬೇಕಾಗಿರಲಿಲ್ಲ. ಹಳೆಯ ಮೈಸೂರು ಭಾಗದಿಂದ ಬಂದಿರುವ ಅಧಿಕಾರಿಗಳು ಹಳೆಯ ಮೈಸೂರು ರೂಲ್ಸ್ ಅಪ್ಲೈ ಆಗುತ್ತದೆ ಎಂದು ಹೇಳುತ್ತಾರೆ. ನಮ್ಮ ಕಡೆ ಹಾಸ್ಟಲ್ ರಿಜಿಸ್ಟ್ರೇಷ್ ಆಗುವ ಕಾರಣವಿಲ್ಲ, ರಿಜಿಸ್ಟ್ರೇಷ್ ಆಗದೆ ಗ್ರಾಂಟು ಸಿಕ್ಕುತ್ತಿತ್ತು. ಈ ಕಡೆ ರಿಜಿಸ್ಟ್ರೇಷ್ ಆಗದೆ ಕೊಡುವುದಿಲ್ಲ.

ಶ್ರೀ ವಿ. ವೆಂಕಟಪ್ಪ.—ಆ ರೀತಿ ಇರಲಾರದು.

Sri B. V. DESAI.—We have to register the Sarvajanik Vidyarthi Nilaya hostel in Kustgi before we could get grant. The Hon'ble Minister may look into this matter. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಈಗ ನಮ್ಮ ಕಾಂಗ್ರೆಸ್ ಸರ್ಕಾರದವರು ಆಡಳಿತ ವಹಿಸಿಕೊಂಡು ಹತ್ತು ವರ್ಷಗಳಾದವು. ಶ್ರೀ ವೆಂಕಟಪ್ಪನವರು ಇಪ್ಪತ್ತಿನ ದಿವನ ವಿದ್ಯಾಮಂತ್ರಿಗಳಾಗಿದ್ದಾರೆ. ಅವರು ಹಿಂದೆ ಅಸೆಂಬ್ಲಿಯಲ್ಲಿ ವಾದಮಾಡುತ್ತಿದ್ದರು, ನಮ್ಮ ದೇಶದಲ್ಲಿ ಕಡ್ಡಾಯವಾಗಿ ಕಂಪಲ್ಸರಿ ಎಜುಕೇಷ್ ಜಾರಿಗೆ ತರಬೇಕೆಂದು. ಆ ಕಾಲದಲ್ಲಿ ದೇಶದ ವರಮಾನ ಎಷ್ಟುಇತ್ತು ಎಂದರೆ ನಾಲ್ಕು-ಐದು ಕೋಟಿ ರೂಪಾಯಿ ಇತ್ತು. ಅಂಥಾ ಕಾಲದಲ್ಲಿ ಅವರು ಅಸೆಂಬ್ಲಿ ಫ್ಲೋರ್‌ನಲ್ಲಿ ನಿಂತುಕೊಂಡು ಬಹಳ ಜೋರಾಗಿ ನಮ್ಮ ದೇಶದಲ್ಲಿ ಹಳ್ಳಿಗಳ ಉದ್ಧಾರವಾಗಬೇಕಾದರೆ, ಹಳ್ಳಿಗಳಲ್ಲಿ ವಿದ್ಯಾಭ್ಯಾಸ ಮುಂದುವರಿಯಬೇಕು, ಅದಕ್ಕೋಸ್ಕರ ಹಳ್ಳಿಗಳಲ್ಲಿ ಕಡ್ಡಾಯ ಶಿಕ್ಷಣ ಏರ್ಪಾಡು ಆಗಬೇಕು ಎಂದು ವಾದಮಾಡುತ್ತಿದ್ದರು.

ಶ್ರೀ ವಿ. ವೆಂಕಟಪ್ಪ.—ಈಗ ಬೇಡ ಎಂದು ಹೇಳಲಿಲ್ಲ.

ಶ್ರೀ ಬಿ. ಚಾಮಯ್ಯ.—ಈಗ ಕಾಂಗ್ರೆಸ್‌ನವರು ಅಧಿಕಾರ ವಹಿಸಿಕೊಂಡಿದ್ದಾರೆ. ಬಂದ ಮೇಲೆ ಸರ್ಕಾರದ ವರಮಾನ ನಮ್ಮ ದೇಶದಲ್ಲಿ ಎಷ್ಟಿದೆಯೆಂದರೆ ಸುಮಾರು 50 ಕೋಟಿ ರೂಪಾಯಿಗಳ ಮೇಲಿದೆ. ಅಷ್ಟಿರುವಾಗ ನಮ್ಮ ದೇಶದಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ತರುವುದಕ್ಕೇಕೆ ಅವರು ಹಿಂತೆಗೆಯುಬೇಕು? ನಮ್ಮ ದೇಶದಲ್ಲಿ ಈ ದಿವನ ವಿದ್ಯಾವಂತರ ಸಂಖ್ಯೆ ಸುಮಾರು ಶೇಕಡ 20ರಷ್ಟಿರಬಹುದು, ಹಳ್ಳಿಯ ಕಡೆ ಅಷ್ಟೂ ಇಲ್ಲ, ಬರೀ ಹಳ್ಳಿಗಳಲ್ಲಿ ಲೆಕ್ಕ ಹಾಕಿದರೆ ಸುಮಾರು ಶೇಕಡ ಹತ್ತು ಮಂದಿ ವಿದ್ಯಾವಂತರಿರಬಹುದು. ಇದು ಕೇವಲ ಕಡಮೆ. ಪ್ರಜಾ ಪ್ರಭುತ್ವದಲ್ಲಿ ರಾಜ್ಯಭಾರ ಮಾಡುವಾಗ ಪ್ರತಿಯೊಬ್ಬರೂ ವಿದ್ಯಾವಂತರಾಗಬೇಕು. ಇದಕ್ಕೆ ಸರ್ಕಾರ ತಕ್ಕ ಏರ್ಪಾಡು ಮಾಡಬೇಕು. ಕಾಂಗ್ರೆಸ್ ಕೈಲಿ ಅಧಿಕಾರವಿರುವಾಗ ದೇಶದಲ್ಲಿರುವ ಎರಡು ಕೋಟಿ ಜನರು ವಿದ್ಯಾವಂತರಾಗುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ.

ಮತ್ತೊಂದು ವಿಷಯ. ಗ್ರಾಮಾಂತರಗಳಲ್ಲಿ ಸ್ಕೂಲು ಕಟ್ಟಡಗಳೇ ಇಲ್ಲ. ಎಷ್ಟೋ ಕಡೆ ಸ್ಕೂಲೇ ಇಲ್ಲವೆಂಬುದು ನಿಮಗೇ ಗೊತ್ತಿದೆ, ನೋಡಿದ್ದೀರಿ. ಈ ದಿವನ 1,400—1,500 ರೂಪಾಯಿಗಳನ್ನು ಕೊಡುವುದಾಗಿ ಸರ್ಕಾರಿ ಆಜ್ಞೆ ಹೊರಡಿಸಿದ್ದೀರಿ, ಅಷ್ಟೇ ಮೊಬಲಗನ್ನು ಜನರು ಕಟ್ಟಬೇಕೆಂದು, ಹಳ್ಳಿಯವರು ಕೊಡಬೇಕೆಂದು ಸರ್ಕಾರಿ ಆಜ್ಞೆಯಲ್ಲಿ ನಮೂದಿಸಲಾಗಿದೆ.

ಶ್ರೀ ವಿ. ವೆಂಕಟಪ್ಪ.—ಹಾಗೆ ಕೊಡಬೇಕಾದ್ದಿಲ್ಲವೆಂದು ಅನೇಕ ಸಲ ಹೇಳಿದ್ದೇನೆ. ಸ್ವಲ್ಪ ಹೆಚ್ಚು ಕಡಮೆ ಸರ್ಕಾರ ಕೊಟ್ಟ ಹಣದಲ್ಲೇ ಸ್ಕೂಲು ಕಟ್ಟಡವಾಗುತ್ತದೆ.

ಶ್ರೀ ಬಿ. ಚಾಮಯ್ಯ.—ಕೊಡುವುದಕ್ಕೆ ಶಕ್ತಿಯಿರುವವರು ಕೊಡುತ್ತಾರೆ. ಶಕ್ತಿಯಿಲ್ಲದಿರುವ ಹಳ್ಳಿಯವರ ವಿಚಾರದಲ್ಲಿ ಉದಾರ ಭಾವನೆ ತೋರಿಸಬೇಕು. 1,500 ರೂಪಾಯಿಗಳಲ್ಲೇ ಕಟ್ಟಡವಾಗುತ್ತದೆ ಎಂದರೆ, ಕಟ್ಟಲಿ. ಆಗದಿರುವ ಕಡೆ ಸರ್ಕಾರ ಸಹಾಯ ಮಾಡಬೇಕು. ಎಷ್ಟೋ ಕಡೆ ಹಳ್ಳಿಗಳಲ್ಲಿ ದೇವಸ್ಥಾನಗಳಲ್ಲಿ ಶಾಲೆ ನಡೆಯುತ್ತಿದೆ. ಅದೆಲ್ಲಾ ತಪ್ಪಿಸಬೇಕು. ಈಗ ಹರಿಜನರು ಹಳ್ಳಿಗಳಲ್ಲಿ ಸ್ಕೂಲಿಗೆ ಹೋದರೆ ದೇವಸ್ಥಾನಗಳಲ್ಲಿ ಶಾಲೆ ನಡೆಯುವ ಕಡೆ ಅವರಿಗೆ ಅವಕಾಶ ಕೊಡುವುದಿಲ್ಲ. ಹೀಗೆ ಹಳ್ಳಿಗಳಲ್ಲಿ ತೊಂದರೆಯಿದೆ. ಹರಿಜನರಾಗಲಿ, ಯಾರೇಆಗಲಿ ಹೋಗಿ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶ ಮಾಡಬೇಕು, ಚಾವಡಿ ಮತ್ತು ದೇವಸ್ಥಾನಗಳಲ್ಲಿ ಶಾಲೆ ನಡೆಸುವುದನ್ನು ನಿಲ್ಲಿಸಬೇಕು. ತಮ್ಮ ಕಾಲದಲ್ಲಾದರೂ ಹೆಚ್ಚು ಮುತುವರ್ಜಿ ವಹಿಸಿ ಹಳ್ಳಿಗಳಲ್ಲಿ ಶಾಲಾ ಕಟ್ಟಡವಾಗುವುದಕ್ಕೆ ಏರ್ಪಾಡು ಮಾಡಿ.

ಇನ್ನೊಂದು ವಿಷಯ. ಹಳ್ಳಿಗಳಲ್ಲಿ ಸ್ಕೂಲುಗಳಿಗೆ ಬಹುಶಃ ಉಪಾಧ್ಯಾಯರು ವಾರಕ್ಕೆ ಅರ್ಧ ದಿವನ ಹೋಗುತ್ತಾರೆ. ರಿಟೈರ್ಡ್ ಡೈರೆಕ್ಟರು ಇಲ್ಲೇಇದ್ದಾರೆ. ಅವರಿಗೆ ಈ ವಿಚಾರವೆಲ್ಲಾ ಗೊತ್ತೇಇರಬೇಕು. ಹಳ್ಳಿಗಳಲ್ಲಿ ಪಾರ್ಟಿಗಳಾಗಿ ಉಪಾಧ್ಯಾಯರು ಶಾಲೆಗೆ ಬಂದಿದ್ದರೆಂದು ಒಂದು ಪಾರ್ಟಿ ಹೇಳುವುದು, ಇನ್ನೊಂದು ಪಾರ್ಟಿ ಭಂದಿರಲಿಲ್ಲವೆಂದು ಹೇಳುವುದು ಈ ರೀತಿಯಿದೆ. ಆದ್ದರಿಂದ ಚೆನ್ನಾಗಿ ತನಿಖೆ ನಡೆಯಬೇಕು; ಅದು ಪರಿಣಾಮಕಾರಿಯಾಗಿರಬೇಕು. ಶಾಲಾ ಇನ್‌ಸ್ಪೆಕ್ಟರು ಸರಿಯಾಗಿ ತನಿಖೆಮಾಡಿ ಕೆಲಸ ಚೆನ್ನಾಗಿ ಮಾಡದಿರುವವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡುಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಆ ಮೇಲೆ ವಿದ್ಯಾರ್ಥಿ ವೇತನದ ವಿಷಯದಲ್ಲಿ ಎರಡು ಮಾತು ಹೇಳಬೇಕೆಂದಿದ್ದೇನೆ. ಹಳ್ಳಿಯಿಂದ ಅನೇಕ ಬಡ ವಿದ್ಯಾರ್ಥಿಗಳು ವ್ಯಾಸಂಗವನ್ನು ಮುಂದುವರೆಸುವುದಕ್ಕೆ ಪಟ್ಟಣಗಳಿಗೆ ಬರುತ್ತಾರೆ. ಅವರಿಗೆ ಗ್ರಾಂಟ್, ವಿದ್ಯಾರ್ಥಿ ವೇತನ ವಗೈರೆ ಸಹಾಯ ನೀಡದಿದ್ದರೆ ಬಹಳ ಕಷ್ಟವಾಗುತ್ತದೆ, ಇದನ್ನು ಪರಿಶೀಲಿಸಿ ಪ್ರತಿಯೊಬ್ಬ ಬಡಹುಡುಗನಿಗೂ ವಿದ್ಯಾರ್ಥಿವೇತನ ಕೊಟ್ಟು ಅವನು ವಿದ್ಯಾಭ್ಯಾಸ ಮುಂದುವರಿಸುವುದಕ್ಕೆ ಅವಕಾಶಮಾಡಬೇಕು, ಎಲ್ಲರೂ ವಿದ್ಯಾವಂತರಾಗುವುದಕ್ಕೆ ಸಹಾಯಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ವಿದ್ಯಾರ್ಥಿವೇತನ ವಿನಿಯೋಗ ಮಾಡುವುದು ವರ್ಷದ ಕೊನೆಯಲ್ಲ. ಇದು ಸರಿಯಲ್ಲ. ಬೇಗ ವರ್ಷದ ಮೊದಲೇ ವಿದ್ಯಾರ್ಥಿವೇತನ ತೀರ್ಮಾನವಾಗಿ ವಿಲೇವಾರಿಯಾಗುವಹಾಗೆ ಕಡ್ಡಾಯವಾಗಿ ಆಜ್ಞೆಮಾಡಿ ಪ್ರತಿಯೊಂದು ಹೈಸ್ಕೂಲಿಗೂ ತಿಳಿಸಬೇಕೆಂದು ವಿಜ್ಞಾಪನೆಮಾಡುತ್ತೇನೆ.

(ಶ್ರೀ ಬಿ. ಚಾಮಯ್ಯ)

ಸ್ಕಾಲರ್‌ಷಿಪ್ ಕಮಿಟಿ ಸದಸ್ಯರುಗಳಿಗೆ ಟಿ.ಎ. ಆಗಲಿ, ಡಿ. ಎ. ಆಗಲಿ ಕೊಡುವುದಿಲ್ಲ. ಆ ಸದಸ್ಯರು ಬೆಳಿಗ್ಗೆ ಹೋಗಿ ರಾತ್ರಿಯೆಲ್ಲಾ ಕುಳಿತು ತೀರ್ಮಾನ ಮಾಡಬೇಕಾಗಿದೆ. ಅಲ್ಲಿ ಹುಡುಗರ ಹೆಸರನ್ನು ಟೈಪ್ ಮಾಡಿಸಿಕೊಡುವುದಕ್ಕೆ ಟೈಪ್‌ರೈಟರ್ ಅನುಕೂಲವಿಲ್ಲವೆಂದು ಹೆಡ್‌ಮಾಸ್ಟರು ಹೇಳುತ್ತಾರೆ. ಹೀಗಾಗಿ ವಿದ್ಯಾರ್ಥಿಗಳ ಪಟ್ಟಿಯನ್ನು ಸದಸ್ಯರಿಗೆ ಒದಗಿಸುತ್ತಿಲ್ಲ. ವಿದ್ಯಾರ್ಥಿವೇತನಕ್ಕೆ ಯಾರು ಅರ್ಜಿ ಹಾಕಿಕೊಂಡಿದ್ದಾರೆಂಬುದನ್ನು ನೋಡುವುದಕ್ಕೆ ಸಹ ಅವಕಾಶವಿರುವುದಿಲ್ಲ. ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಈ ವೇತನ ತೀರ್ಮಾನ ಮಾಡುವವರಿಗೆ ಒಂದು ಲೋಟ ಕಾಫಿಗೆ ಸಹ ಅವಕಾಶ ಮಾಡಿಕೊಟ್ಟಿಲ್ಲ. ಬೆಳಿಗ್ಗಿನಿಂದ ರಾತ್ರಿಯವರೆಗೆ ಕೆಲಸ ಮಾಡುವಾಗ ತಕ್ಕ ಅನುಕೂಲ ಮಾಡಿಕೊಡಬೇಕು ಇದಕ್ಕೆ ಹಣ ಓದಗಿಸಿಲ್ಲ. ಅನ್ಯಾಯವಾಗಿ ಎಷ್ಟೋ ಹಣ ಖರ್ಚುಮಾಡುತ್ತಿದ್ದೀರಿ. ಹಾಗಿರುವಾಗ ಈ ಕಡೆ ಗಮನ ಕೊಡದಿರುವುದು ಸೂಕ್ತವಲ್ಲ. ಈ ವಿಚಾರದಲ್ಲೂ ಮನಸ್ಸುಮಾಡಿ ಉದಾರವಾಗಿ ಕೆಲಸಮಾಡುವವರಿಗೆ ತಿಂಡಿ, ಕಾಫಿ, ಊಟ ವಗೈರೆ ಬೇಕಾದ ಏರ್ಪಾಡುಮಾಡಬೇಕು. ಈ ಸಾರಿ ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ ನಾವು ತೀರ್ಮಾನಮಾಡಲು ಬೆಳಿಗ್ಗೆ ಹತ್ತು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ಕುಳಿತುಕೊಳ್ಳಬೇಕಾಯಿತು. ಆಗ ಥೇರ್ಮಾನ್‌ರವರೇ ಕೈಯಿಂದ ಹಣ ಕೊಟ್ಟು ಕಾಫಿ, ತಿಂಡಿ ತರಿಸಿದರು. ಸರ್ಕಾರಕ್ಕೆ ಅಷ್ಟು ಬಡತನವಿದೆಯೇ? ವಿದ್ಯಾರ್ಥಿವೇತನಗಳನ್ನು ತೀರ್ಮಾನಮಾಡುವವರಿಗೆ ಊಟ ತಿಂಡಿಗೆ ಏರ್ಪಾಡು ಮಾಡಲು ಶಕ್ತಿಯಿಲ್ಲವೇ? ಇದಕ್ಕೆ ತಾವು ಗಮನ ಕೊಡಬೇಕು.

ಸೇವಾದಳಕ್ಕೆ 50 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಬಲಪಡಿಸಲು, ಅದಕ್ಕೆ ಬೆಂಬಲ ಕೊಡಲು ಸೇವಾದಳಕ್ಕೆ ಹಣ ಕೊಟ್ಟು ನಡೆಸುತ್ತಿದ್ದಾರೆಯೇ ಹೊರತು ಇನ್ನೇನೂ ಇಲ್ಲ. ಇದರಿಂದ ದೇಶಕ್ಕೆ ನಿಜವಾಗಿಯೂ ಸೇವೆ ಸಲ್ಲುತ್ತಿಲ್ಲ.

ಸೋಷಿಯಲ್ ವೆಲ್‌ಫೇರ್ ಬೋರ್ಡಿನಿಂದ ಹಳ್ಳಿಯವರಿಗೆ ಸಹಾಯವಾಗುತ್ತಿಲ್ಲ. ಇದಕ್ಕೆ ಹಣ ಓದಗಿಸಿದ್ದೀರಿ. ಹಳ್ಳಿಯವರಿಗೆ ಸಹಾಯವಾಗುವುದಕ್ಕೆ ಮೊದಲು ಗಮನ ಕೊಡಬೇಕು. ಹಳ್ಳಿಯ ಜನರು ಉದ್ಧಾರವಾಗುವುದಕ್ಕೆ ತಕ್ಕ ಏರ್ಪಾಡೆಲ್ಲವೂ ತಮ್ಮ ಕಾಲದಲ್ಲಿ ಆಗಬೇಕು.

ವಯಸ್ಕರ ಶಿಕ್ಷಣಕ್ಕಾಗಿ ನಾಲ್ಕು ಲಕ್ಷ 40 ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಇದರಿಂದ ದೇಶಕ್ಕೆ ಪ್ರಯೋಜನವೇನು? ವ್ಯಾನ್ ಓದಗಿಸುವುದು ಮನೆ ಕೆಲಸಕ್ಕೆ ಸ್ವಂತ ಕೆಲಸಕ್ಕೆ ಉಪಯೋಗವಾಗುತ್ತಿದೆ. ಇದೆಲ್ಲಾ ನಿಲ್ಲಿಸಬೇಕು. ಈ ಕಾರ್ಯ ತೃಪ್ತಿಕರವಾಗಿಲ್ಲ. ಇದಕ್ಕಾಗಿ ವೆಚ್ಚವಾಗುವ ಹಣ ವ್ಯರ್ಥ, ಈ ಬಾಬಿನ ಹಣವನ್ನು ವಿದ್ಯಾರ್ಥಿಗಳಿಗಾದರೂ ಕೊಟ್ಟರೆ ಓದುವುದಕ್ಕೆ ಸಹಾಯವಾಗುತ್ತದೆ.

ಯೂನಿವರ್ಸಿಟಿಗೆ ಹೋಗುವ ಹುಡುಗರ ಸಂಖ್ಯೆ ಕಡಮೆಮಾಡಬೇಕು. ಈಗಿನ ಕಾಲದಲ್ಲಿ ನೀವು ಅವರಿಗೆಲ್ಲಾ ಕೆಲಸ ಒದಗಿಸುವುದಕ್ಕೆ ತಯಾರಾಗಿಲ್ಲ, ಅಶಕ್ತರು ಬಿ.ಎ., ಎಂ.ಎ. ಪಾಸುಮಾಡಿ ಬಂದವರಿಗೆಲ್ಲಾ ನೀವು ಕೆಲಸ ಕೊಡಬಲ್ಲಿರಾ? ಯೂನಿವರ್ಸಿಟಿಗಿರುವ ನೂಕುನುಗ್ಗಲನ್ನು ತಡೆಮಾಡಬೇಕು. ಮೆರಿಟ್ ಇರುವವರು ಮಾತ್ರ ಯೂನಿವರ್ಸಿಟಿಗೆ ಹೋಗುವುದಕ್ಕೆ ಅವಕಾಶ ಕೊಡಬೇಕು.

[MR. SPEAKER in the Chair]

ಟೆಕ್ನಿಕಲ್ ಕಾಲೇಜುಗಳಿಗೆ ಸೇರಿಸಿಕೊಳ್ಳುವುದು ಬಹಳ ನಿಧಾನವಾಗುತ್ತಿದೆ. ನಾನ್ ಅಫಿಷಿಯಲ್ಸ್ ಕಮಿಟಿಮಾಡಿ ಹುಡುಗರನ್ನು ಕಾಲೇಜಿಗೆ ಸೇರಿಸುತ್ತಿದ್ದರು. ಈ ಸಾರಿ ಕಾಲೇಜ್ ಕೌನ್ಸಿಲ್ಲೋ ಏನೋ ತೀರ್ಮಾನಮಾಡಿತು. ಇದಕ್ಕೆ ನಾನ್ ಅಫಿಷಿಯಲ್ಸ್ ಕಮಿಟಿಮಾಡಿ ಬಹಳ ಜಾಗ್ರತೆ ವಿದ್ಯಾರ್ಥಿಗಳನ್ನು ಸೇರಿಸಲು ಅವಕಾಶ ಮಾಡಬೇಕು.

ಅವರಿಗೆ ಅಡ್ಮಿಷನ್, ಪಾಠ ವಗೈರೆಗಳಿಗೆ ತೊಂದರೆಯಾಗುತ್ತದೆ. ಅವೆಲ್ಲವನ್ನೂ ಸರಿಪಡಿಸಬೇಕೆಂದು ಹೇಳುತ್ತೇನೆ.

4-30 P.M.

ಇನ್ನು ಟೆಕ್ಸ್ಟ್ ಬುಕ್ಕುಗಳು ಪ್ರಿಂಟಾಗಿದ್ದರೂ ಹುಡುಗರ ಪ್ರಯೋಜನಕ್ಕೆ ಸಿಕ್ಕುತ್ತಾ ಇಲ್ಲ. ಪಾಠಶಾಲೆಗಳು ತೆರೆದು ಮೂರು-ನಾಲ್ಕು ತಿಂಗಳುಗಳಾದ ಮೇಲೆ ಪುಸ್ತಕಗಳು ಸಿಕ್ಕುತ್ತವೆ, ಇದರಿಂದ ಹುಡುಗರಿಗೆ ವಿದ್ಯಾಭ್ಯಾಸ ಎಷ್ಟರಮಟ್ಟಿಗೆ ದೊರೆಯಬೇಕು. ಪಾಠಶಾಲೆಗಳು ತೆರೆಯುವ ಮೊದಲೇ ಹುಡುಗರಿಗೆ ಪುಸ್ತಕಗಳು ದೊರೆಯುವಂತೆ ಮಾಡಬೇಕು. ಇನ್ನು ಟೆಕ್ಸ್ಟ್ ಬುಕ್ಕುಗಳನ್ನು ವರ್ಷವರ್ಷವೂ ಬದಲಾಯಿಸುತ್ತಿದ್ದಾರೆ. ಇದರಿಂದ ಬಡವರಿಗೆ ಬಹಳ ತೊಂದರೆಯಾಗಿದೆ. ಈ ರೀತಿ ಆಗಾಗ್ಗೆ ಬದಲಾಯಿಸುವ ಪಾಲಿಸಿಯನ್ನು ಕೂಡಲೇ ನಿಲ್ಲಿಸಬೇಕು. ಒಂದು ವರ್ಷದಲ್ಲಿ ಇಟ್ಟಂಥ ಟೆಕ್ಸ್ಟ್ ಬುಕ್ಕುಗಳನ್ನು ಎರಡು-ಮೂರು ವರ್ಷಗಳವರೆಗೂ ಮುಂದುವರಿಸಿಕೊಂಡು ಹೋಗಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆಮಾಡುತ್ತೇನೆ.

ಈಗ ಹುಡುಗರಿಗೆ ಮಧ್ಯಾಹ್ನದ ಊಟಕ್ಕೋಸ್ಕರ ಸರ್ಕಾರದವರು ಎರಡು ಲಕ್ಷ ರೂಪಾಯಿಗಳನ್ನು ಈ ವರ್ಷದಲ್ಲಿ ಒದಗಿಸಿದ್ದಾರೆ. ಅದು ಬಹಳ ಸಂತೋಷ. ಈ ರೀತಿಯಾದ ಅನುಕೂಲವನ್ನು ಹಳ್ಳಿಯಿಂದ ಬಂದು ವಿದ್ಯಾಭ್ಯಾಸಮಾಡುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ ಒದಗುವಂತೆ ತಕ್ಕ ಏರ್ಪಾಡುಮಾಡಬೇಕು. ನನಗೆ ಹಳ್ಳಿಯವರಿಗೂ ಈ ರೀತಿಯಾದ ಅನುಕೂಲ ಒದಗೀತೇ ಇಲ್ಲವೇ ಎಂದು ನನಗೆ ಶಂಕೆಯಾಗಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಅಬ್ದುರ್ ರಷೀದ್ (ಕೋಲಾರ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರುವ ಈ ಸಾಲಿನ ವಿದ್ಯಾಭ್ಯಾಸದ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಂಡು ಸರ್ಕಾರದವರ ಗಮನಕ್ಕೆ ಕೆಲವು ಸಲಹೆಗಳನ್ನು ತರಲಿಚ್ಛಿಸುತ್ತೇನೆ.

ನಮ್ಮ ಸರ್ಕಾರದವರಂತೂ ವಿದ್ಯಾಭ್ಯಾಸದ ವಿಚಾರದಲ್ಲಿ ಹೊಸ ಯೋಜನೆಗಳನ್ನು ತಂದಿದ್ದಾರೆ. ಇದು ಬಹಳ ರಾಭಕರವಾಗಿಯೂ ಮತ್ತು ತೃಪ್ತಿಕರವಾಗಿಯೂ ಇದೆ. ಆದರೆ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಬಹಳ ನಿಧಾನಮಾಡುತ್ತಿದ್ದಾರೆ. ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರಲಲ್ಲ. ಈಗಿನ ಕಾಲದಲ್ಲಿ ಲಿಟರರಿ ಎಜುಕೇಷ್ಷ ಮತ್ತು ಔದ್ಯೋಗಿಕ ಶಿಕ್ಷಣ ಬಹಳ ಅಗತ್ಯ. ಆದ್ದರಿಂದ ಪ್ರತಿಯೊಂದು ಶಾಲೆಯಲ್ಲಿಯೂ ಟೆಕ್ನಿಕಲ್ ಎಜುಕೇಷನ್‌ನ್ನು ಅದಷ್ಟು ಜಾಗ್ರತೆ ಜಾರಿಗೆ ತರಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಪ್ರಾಥಮಿಕ ಶಾಲೆಗಳ ಕಟ್ಟಡ ವಿಚಾರದಲ್ಲಿ ಹೇಳಬೇಕಾದರೆ, ಹೋದ ವರ್ಷ ನಮ್ಮ ಸರ್ಕಾರದವರು ಒಂದು ಹೊಸ ಯೋಜನೆಯನ್ನು ತಂದರು. ಹಿಂದೆ ಪ್ರತಿಯೊಂದು ಹಳ್ಳಿಯವರು ಸ್ಕೂಲು ಕಟ್ಟಡ ಕ್ಕಾಗಿ ಶೇ॥ 25 ಭಾಗವನ್ನು ಡೊನೇಟ್ ಮಾಡಬೇಕೆಂದು ಇದ್ದುದನ್ನು ಈ ವರ್ಷ ಒಂದು ಹೊಸ ನಮೂನೆ ಕಟ್ಟಡ ಕಟ್ಟಬೇಕೆಂದು ಸರ್ಕಾರದವರು ಯೋಚಿಸುತ್ತಿದ್ದಾರೆ.

ಶ್ರೀ ಎ. ವೆಂಕಟಪ್ಪ.—ಶೇಕಡ 25 ಭಾಗವೆಂದು ಎಲ್ಲಿ ಇತ್ತು ?

ಶ್ರೀ ಡಿ. ಅಬ್ದುರ್ ರಷೀದ್.—ಮುಂಚೆ ಇತ್ತು. ಹೋದ ವರ್ಷ 50 ಪರ್ಸೆಂಟ್ ಡೊನೇಟ್ ಮಾಡಬೇಕೆಂದು ಹೇಳಿದಾಗ ಕೆಲವರು ಸ್ವಲ್ಪ ಫಂಡ್ಸನ್ನು ಡೆಪ್ಯೂಟಿ ಕಮಿಷನರ ವಶಕ್ಕೆ ಕೊಟ್ಟರು. ಆಗ ಯಾರೂ ಮುಂದಕ್ಕೆ ಬಂದು ಏನೂ ಕೆಲಸ ಮಾಡಲಿಲ್ಲ. ಆದ್ದರಿಂದ ಜನರು ಕೊಟ್ಟ ಫಂಡ್ಸ್ ಲ್ಯಾಪ್ಸ್ ಆಯಿತು, ಅದಕ್ಕೋಸ್ಕರ ಯಾರಲ್ಲಿ ಏನು ಒಂದು ಸ್ವಲ್ಪ ಲೋಪವಿದೆಯೋ, ಅದನ್ನು ತಿದ್ದಬೇಕು ಮತ್ತು ಸರಿಮಾಡಬೇಕು. ನಮ್ಮ ಡಿಸ್ಟ್ರಿಕ್ಟ್ ಬಹಳ ಡಿಸ್ಟ್ರೆಸ್ ಸ್ಥಿತಿಯಲ್ಲಿರುವುದರಿಂದ ಅಲ್ಲಿಯ ರೈತರು ಶೇಕಡ 25 ರಿಂದ ಶೇಕಡ 50ರಷ್ಟು ಡೊನೇಟ್ ಮಾಡುವ ಪರಿಸ್ಥಿತಿಯಲ್ಲಿಲ್ಲ. ಎಲ್ಲೆಲ್ಲಿ ಸ್ಕೂಲುಗಳು ಅಗತ್ಯವಿದೆಯೆಂದು ಸರ್ಕಾರದವರಿಗೆ ಕಂಡು ಬರುತ್ತದೋ, ಅಂತಹ ಕಡೆಗಳಲ್ಲಿ ಸರ್ಕಾರದವರು ಅರ್ಧ ಭಾಗವನ್ನು ನಬ್‌ವೆನ್ಷ್ ರೂಪದಲ್ಲಿಯೂ, ಇನ್ನರ್ಧ ಭಾಗವನ್ನು ಸಾಲದ ರೂಪವಾಗಿಯೂ ಕೊಟ್ಟು, ಸಾಲಕೊಟ್ಟಿರುವುದನ್ನು ನುಮಾರು 20 ಕಂತುಗಳಲ್ಲಿ ವಸೂಲು ಮಾಡಬೇಕು. ಆ ರೀತಿಯಾಗಿ ಅಗತ್ಯವಾಗಿರುವ ಜಾಗಗಳಲ್ಲಿ ಕಟ್ಟಡಗಳು ತಯಾರಾಗುವುದಾದರೆ ಸರ್ಕಾರ ಸಾಲದ ರೂಪವಾಗಿ ಕೊಟ್ಟ ಶೇಕಡ 50 ಭಾಗದಷ್ಟು ಹಣ ಸರ್ಕಾರಕ್ಕೆ ಕಂತಿನ ರೂಪವಾಗಿ ವಾಪಸ್ಸು ಬರುತ್ತದೆ. ಈ ತರಹ ಎಕ್ಸ್ಪೆರಿಮೆಂಟ್ ಮಾಡಿನೋಡಬೇಕು.

ನಮ್ಮ ಕೋಲಾರ ತಾಲ್ಲೂಕು ಬಹಳ ದೊಡ್ಡ ತಾಲ್ಲೂಕ್ ಆಗಿರುತ್ತದೆ. ಅಲ್ಲಿ ನುಮಾರು ಎರಡು ಲಕ್ಷ ಜನನಂಖ್ಯೆ ಇದೆ. ಆದರೂ ಕೂಡ ನಮ್ಮ ತಾಲ್ಲೂಕಿನಲ್ಲಿ ಒಂದೇ ಒಂದು ಹೈಸ್ಕೂಲಿದೆ ನಮಗೆ ಎರಡು ಹೈಸ್ಕೂಲುಗಳು ಬೇಕು. ಇದಕ್ಕೋಸ್ಕರವಾಗಿಯೇ ಕೆಲವು ಮಹನೀಯರು ವೇಮಗಲ್ ಗ್ರಾಮದವರು ಸೇರಿ ಒಂದು ಹೈಸ್ಕೂಲ್ ಕಮಿಟಿ ಎಂದು ಮಾಡಿಕೊಂಡು ಜನವರಿ 30ನೆಯ ತಾರೀಖು ಒಂದು ನಿಯೋಗವನ್ನು ತೆಗೆದುಕೊಂಡು ನಮ್ಮ ಮಾನ್ಯ ವಿದ್ಯಾಮಂತ್ರಿಗಳ ಹತ್ತಿರ ಬಂದಿದ್ದರು. ಆಗ ಆ ಮನವಿ ಪತ್ರದ ಮೇರೆ ನಮ್ಮ ವಿದ್ಯಾ ಮಂತ್ರಿಗಳು ತಕ್ಷಣ ಸ್ಪಾಟ್ ಇನ್ಸ್ಪೆಕ್ಷನ್ ಮಾಡಬೇಕೆಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗೆ ನೋಡನೆ ಕೊಟ್ಟರು ಎಂದು ತಿಳಿದು ಬಂತು. ಈಗ ನುಮಾರು ಎರಡೂವರೆ ತಿಂಗಳು ಆಗುತ್ತಾ ಬಂತು. ಸ್ಪಾಟ್ ಇನ್ಸ್ಪೆಕ್ಷನ್ ಆಗಲೇ ಇಲ್ಲ. ಸ್ಪಾಟ್ ಇನ್ಸ್ಪೆಕ್ಷನ್ನಿಗೆ ತಿಂಗಳಾನುಗಟ್ಟಲೆ ಆದರೆ ಇನ್ನು ಆ ಗ್ರಾಮಕ್ಕೆ ಸ್ಕೂಲು ಮಂಜೂರಾಗುವುದು ಯಾವಾಗ ! ಈ ತರಹವಾಗಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸ ಕಾರ್ಯಗಳು ನಿಧಾನವಾದರೆ ಸರ್ಕಾರಕ್ಕೆ ಕೀರ್ತಿ ಬರುವುದಿಲ್ಲ. ಜಾಗ್ರತೆ ಜಾಗ್ರತೆಯಾಗಿ ಕೆಲಸ ನಡೆಯಬೇಕು. ಮತ್ತೊಂದು ಸಾರಿ ಸ್ಕೂಲು ಕಟ್ಟಡದ ವಿಷಯವಾಗಿ ವಿದ್ಯಾ ಶಾಖೆಯ ಉಪ ನಿರ್ದೇಶಕರಿಗೆ ಫೆಬ್ರವರಿ 17ನೇ ತಾರೀಖು ಒಂದು ಮನವಿಯನ್ನು ಕೊಟ್ಟರುತ್ತೆ ಅದಕ್ಕೆ ಇದುವರೆಗೂ ದಾದುಫಿರ್ಯಾದು ಇಲ್ಲ. ಜವಾಬು ಮೊದಲೇ ಇಲ್ಲ ಈ ತರಹ ಬೇಕಾದಷ್ಟು ಲೋಪ ದೋಷಗಳು ಈ ಇಲಾಖೆಯಲ್ಲಿ ಕಂಡು ಬರುತ್ತವೆ, ಈ ತರಹ ಏಕೆ ನಿಧಾನವಾಗುತ್ತದೋ ನನಗಂತೂ ಬಹಳ ಆಶ್ಚರ್ಯವಾಗುತ್ತದೆ.

ಇನ್ನು ಪ್ರಾಥಮಿಕ ಶಾಲಾ ಉಪಧ್ಯಾಯರ ವಿಚಾರದಲ್ಲಿ ಹೇಳಬೇಕಾದರೆ, ಅವರಿಗೆ ಈಗ ಕೊಡುತ್ತಿರುವ ನಂಬಳ ಬಹಳ ಕಡಮೆ ಇದೆಯೆಂದು ಅನೇಕ ಸದಸ್ಯರು ಹೇಳಿದ್ದಾರೆಂಬುದನ್ನು ನಾನು ಸಮರ್ಥನೆ ಮಾಡುತ್ತಾ ಅವರ ನಂಬಳವನ್ನು ಹೆಚ್ಚಿಸಬೇಕೆಂದು ಹೇಳುತ್ತೇನೆ. ಜತ್ತೀ ಕಮಿಟಿಯವರೂ ಸಹ ಐದು ಜನರಿರುವ ಒಂದು ಸಂಸಾರಕ್ಕೆ ಮಾಹೆಯಾನ 100ರೂಪಾಯಿ ಆದಾಯ ವಿರಬೇಕೆಂದು ಹೇಳುತ್ತಿರುವಾಗ, ಒಬ್ಬ ಬಡ ಸ್ಕೂಲ್ ಮಾಸ್ಟರಿಗೆ ತಿಂಗಳಿಗೆ 100 ರೂಪಾಯಿಗಳಿಗಿಂತಲೂ ಕಡಿಮೆ ನಂಬಳ ಕೊಡುವುದು ಬಹಳ ಅನ್ಯಾಯ ಮತ್ತು ಅಧರ್ಮ. ಈ ವಿಚಾರದಲ್ಲಿ ಸರ್ಕಾರದವರು ಯಾವ ಉಪಾಧ್ಯಾಯನಿಗೂ 100 ರೂಪಾಯಿಗಳಿಗಿಂತ ಕಡಿಮೆಯಿಲ್ಲದ ರೀತಿಯಲ್ಲಿ ನಂಬಳ ಪಾವತಿಯಾಗುವ ಹಾಗೆ ಜಾಗ್ರತೆ ವಹಿಸಬೇಕು ಮಾಡಬೇಕೆಂದು ನನ್ನ ಅಭಿಪ್ರಾಯವನ್ನು ಸರ್ಕಾರಕ್ಕೆ ಸೂಚಿಸುತ್ತಿದ್ದೇನೆ. ಯಾವ ಉಪಾಧ್ಯಾಯನಿಗೂ 100 ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಹಾಗೆ ನಂಬಳ ಸಿಕ್ಕಬೇಕು ಎಂದು ನಾನು ಮತ್ತೊಮ್ಮೆ ಸರ್ಕಾರದಲ್ಲಿ ಮನವಿಮಾಡಿ ಕೊಳ್ಳುತ್ತೇನೆ.

ಈಗ ಮಾಧ್ಯಮಿಕ ಶಾಲೆಗಳಲ್ಲಿ ತರಬೇತರಾದ ಮತ್ತು ತರಬೇತರಾಗದೆ ಇರುವ ಉಪಾಧ್ಯಾಯರುಗಳು ಕೆಲಸ ಮಾಡುತ್ತಿದ್ದಾರೆ. ಆದರೆ ಇವರ ನಂಬಳ ಸಾರಿಗೆಗಳನ್ನು ನೋಡಿದರೆ ಸ್ವಲ್ಪವೂ ವ್ಯತ್ಯಾಸವಿಲ್ಲ. ಆದ್ದರಿಂದ ತರಬೇತರಾದ ಉಪಾಧ್ಯಾಯರಲ್ಲಿ ದಕ್ಷತೆ ಕಡಮೆಯಾಗಿದೆ. ಅವರಿಗೆ ಅಷ್ಟು ಉತ್ಸಾಹವಿಲ್ಲ. ನಂಬಳ ಸಾರಿಗೆಯಲ್ಲಿ ಸ್ವಲ್ಪ ವ್ಯತ್ಯಾಸವಿರಬೇಕು. ಆಗ ಅವರಿಗೆ ಉತ್ತೇಜನ ಕೊಟ್ಟಂತಾಗುತ್ತದೆ, ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ತರಬೇತಾದ ಉಪಾಧ್ಯಾಯರು ತರಬೇತಾಗದೆ ಇರುವ ಉಪಾಧ್ಯಾಯರಿಗಿಂತ ಸ್ವಲ್ಪ ಮೇಲು ಎಂದು ಸರ್ಕಾರದವರು ಭಾವಿಸಿಕೊಂಡ ಮೇಲೆ ತರಬೇತಾದ ಉಪಾಧ್ಯಾಯರಿಗೆ ತರಬೇತರಾಗದೆ ಇರುವ ಉಪಾಧ್ಯಾಯರಿಗೆ ಕೊಡುತ್ತಿರುವ ನಂಬಳಕ್ಕಿಂತಲೂ ಜಾಸ್ತಿ ನಂಬಳವನ್ನು ಕೊಡಬೇಕೆಂದು ನನ್ನ ಕೋರಿಕೆ.

ಇನ್ನು ವಯಸ್ಕರ ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ, ಈಗ ಯುವಕರಿಗೆ ಕೇವಲ ಒಂದೇ ಭಾಷೆಯಲ್ಲಿ ಶಿಕ್ಷಣ ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರದ ಕಾರ್ಯಸ್ವಿಟ್ಯೂಷನ್ ಪ್ರಕಾರ ಯಾವ ಯಾವ ಭಾಷೆಗಳನ್ನು ರೆಕಗ್‌ನೈಜ್ ಮಾಡಿದ್ದಾರೋ ಆಯಾಯ ಭಾಷೆಗಳಲ್ಲಿ ಶಿಕ್ಷಣ ದೊರಕುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ. ತಮಿಳು ಭಾಷೆ ಮಾತನಾಡುವ ಪ್ರದೇಶಗಳಿಗನುಗುಣವಾಗಿಯೂ, ತೆಲುಗು ಭಾಷೆ ಮಾತನಾಡುವ ಪ್ರದೇಶಗಳಿಗನುಗುಣವಾಗಿಯೂ, ಉರ್ದು ಭಾಷೆ ಮಾತನಾಡುವ ಪ್ರದೇಶಗಳಿಗನುಗುಣವಾಗಿಯೂ ಮತ್ತು ಮರಾಠಿ ಭಾಷೆ ಮಾತನಾಡುವ ಪ್ರದೇಶಗಳಿಗನುಗುಣವಾಗಿಯೂ ವಯಸ್ಕರ ಶಿಕ್ಷಣ ಶಾಲೆಗಳನ್ನು ಈ ವಿದ್ಯಾಭ್ಯಾಸದ ಇಲಾಖೆಯ ಆಶ್ರಯದಲ್ಲಿ ತೆರೆದು, ಅಲ್ಲಿ ಆಯಾ ಭಾಷೆಗಳಿಗನುಸಾರವಾಗಿ ಶಿಕ್ಷಣವನ್ನು ಕೊಡಬೇಕೆಂದು ನಾನು ಕೋರುತ್ತೇನೆ.

ಸರ್ಕಾರದವರು ಬಹಳ ಉದಾರ ಮನಸ್ಸಿನಿಂದ ಕೆಲವು ಖಾಸಗೀ ಸಂಸ್ಥೆಗಳಿಗೆ ಸಹಾಯ ದ್ರವ್ಯವನ್ನು ಕೊಡುತ್ತಿದ್ದಾರೆ. ಆದರೆ ಅವರು ಶೇಕಡ 50ರಷ್ಟೇ

(ಶ್ರೀ ಡಿ. ಅಬ್ದುಲ್ ರಷೀದ್)

ಅಥವಾ ಶೇಕಡ 75 ರಷ್ಟೋ ಶಾಲೆಯ ಖರ್ಚನ್ನು ಕೊಡುತ್ತಾರೆಂಬ ಭರವಸೆಯ ಮೇಲೆ ಸಂಸ್ಥೆಯವರು ತಮ್ಮ ಕೈಯಿಂದಲೇ ಆ ಹಣವನ್ನು ಹಾಕಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಇಂತಹ ನಿದರ್ಶನಗಳು ಬೇಕಾದಷ್ಟು ಇವೆ. ಎರಡು ಮೂರು ವರ್ಷಗಳಾದರೂ ಅನೇಕ ಖಾಸಗೀ ಸಂಸ್ಥೆಗಳಿಗೆ ಸಲ್ಲಬೇಕಾಗಿದ್ದ ಸಹಾಯ ದ್ರವ್ಯ ನಿಗದಿಯಾದ ಹೊತ್ತಿಗೆ ಸರಿಯಾಗಿ ಸರ್ಕಾರದವರಿಂದ ಸಲ್ಲುತ್ತಿಲ್ಲ. ಇಂತಹ ಬೇಕಾದಷ್ಟು ದೂರುಗಳು ನನ್ನ ಗಮನಕ್ಕೆ ಬಂದಿವೆ. ಸರ್ಕಾರದವರು ತಮ್ಮ ಸಹಾಯ ದ್ರವ್ಯವನ್ನು ಈ ರೀತಿಯಾಗಿ ವರ್ಷಾನುಗಟ್ಟಲೆ ಕೊಡದೆ ನಿಧಾನ ಮಾಡುತ್ತಿರುವುದರಿಂದ ಅನೇಕ ಸಂಸ್ಥೆಗಳಿಗೆ ಸಲ್ಲಬೇಕಾದ ಗ್ರಾಂಟು ಇನ್ನೂ ಸಲ್ಲದೇ ಇರುವುದರಿಂದ ಅನುಮಾನಪಟ್ಟು ಅವರಿಗೆ ಸರ್ಕಾರದ ಭರವಸೆಯೇ ಕಡಮೆಯಾಗಿ ಹೋಗಿದೆ. ಇದರಿಂದ ಸಂಸ್ಥೆಗಳ ಆಡಳಿತ ಕೆಡುತ್ತಿದೆ. ಮತ್ತು ಸಂಸ್ಥೆಗಳ ಆಡಳಿತವನ್ನು ಯಾವರೀತಿ ಮುಂದುವರಿಸುವುದೆಂಬ ಅನುಮಾನ ಹುಟ್ಟಿದೆ. ಆದ್ದರಿಂದ ಸರ್ಕಾರದವರು ಯಾವ ಯಾವ ಸಂಸ್ಥೆಗಳಿಗೆ ಎಷ್ಟೆಷ್ಟು ಸಹಾಯ ದ್ರವ್ಯವನ್ನು ಕೊಡುತ್ತಿದ್ದಾರೋ ಅಷ್ಟು ಸಹಾಯ ದ್ರವ್ಯವನ್ನು ಕಾಲಕ್ಕೆ ಸರಿಯಾಗಿ ಕೊಟ್ಟರೆ ಆ ಸಂಸ್ಥೆಗಳ ಆಡಳಿತ ಸರಿಯಾದ ರೀತಿಯಲ್ಲಿ ನಡೆದುಕೊಂಡು ಹೋಗುವುದಕ್ಕೆ ಒಂದು ದಾರಿ ಆಗುತ್ತದೆ.

ಇನ್ನು ನರ್ಸರಿ ಸ್ಕೂಲುಗಳ ವಿಷಯ. ಈ ಶಾಲೆಗಳು ಸಣ್ಣ ಸಣ್ಣ ಮಕ್ಕಳಿಗೆ ಬಹಳ ಅಗತ್ಯ. ಈ ಶಾಲೆಗಳನ್ನು ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರುನಲ್ಲಿಯೂ ತೆರೆಯಬೇಕು. ಈ ಯೋಜನೆಗಳನ್ನೇನೋ ಹಾಕಿಕೊಳ್ಳುತ್ತಾರೆ. ಆದರೆ ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಬಹಳ ನಿದಾನ ಮಾಡುತ್ತಾರೆ. ವರ್ಷಾನುಗಟ್ಟಲೆಯಾದರೂ ಆ ಯೋಜನೆಗಳು ಜಾರಿಗೆ ಬರುವ ಹಾಗಿಲ್ಲ. ಪೇಪರ್‌ನಲ್ಲಿರುತ್ತದೆ ಕ್ಯಾಬಿನೆಟ್ಟಿನಲ್ಲಿ ಡಿಸಿಷ್ಟ್ ಆಗಿದೆಯೆಂದು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಣೆಯಾಗುತ್ತದೆ ಅದನ್ನು ನೋಡಿ ಎಲ್ಲಾ ಜನರೂ ನಮ್ಮನ್ನೆ ನಂತೋಷಪಟ್ಟುಕೊಳ್ಳಬೇಕೇ ಏನಾ ಬೇರೆ ಇನ್ನೇನು ಯೋಜನೆ ಕಾರ್ಯಗತವಾಯಿತಲ್ಲಾ ಎಂದು ಹೇಳುವಹಾಗಿಲ್ಲ. ಎಷ್ಟೋ ಯೋಜನೆಗಳು ಜಾರಿಗೆ ಬರುವುದಿಲ್ಲ. ವರ್ಷ ವರ್ಷವೂ ಕಳೆದು ಹೋಗುತ್ತಿದೆ ಆದ್ದರಿಂದ ಪ್ರತಿವರ್ಷವೂ ಕೈಗೊಳ್ಳತಕ್ಕ ಎಲ್ಲಾ ಯೋಜನೆಗಳನ್ನು ಕಾರ್ಯಗತಮಾಡಿ ಅವನ್ನು ಜಾರಿಗೆ ತರತಕ್ಕ ಬಂದೋಬಸ್ತನ್ನು ಮಾಡಬೇಕು.

ನಮ್ಮ ಕೋಲಾರದಲ್ಲಿ ಒಂದು ಗರ್ಲ್ಸ್ ಹೈಸ್ಕೂಲು ಬಹಳ ಅಗತ್ಯವಾಗಿ ಬೇಕಾಗಿರುತ್ತದೆ. ಆದರೆ ಅಲ್ಲಿನ ಮೆಥೋಡಿಸ್ಟ್ ಮಿಷ್ ಗರ್ಲ್ಸ್ ಹೈಸ್ಕೂಲು ಬಹಳ ದಿನದಿಂದ ನಡೆಯುತ್ತಿದೆ. ಏಕೆಂದರೆ ಅಲ್ಲಿನ ಟೀಚಿಂಗ್ ಸ್ಟ್ಯಾಂಡರ್ಡ್ ಬಹಳ ಉನ್ನತ ಮಟ್ಟದಲ್ಲಿದೆ ಆದರೂ ಅದಕ್ಕೆ ಸಾಕಾದಷ್ಟು ಪ್ರೋತ್ಸಾಹ ಇಲ್ಲ. ಒಂದು ಸಾವಿರ ವಿದ್ಯಾರ್ಥಿಗಳು ಇಲ್ಲಿ ಇರುವ ಬಾಯ್ಸ್ ಹೈಸ್ಕೂಲಿಗೆ ಹೋಗುತ್ತಿದ್ದಾರೆ. ಇಂತಹ ಕ್ರಾಡೆಡ್ ಸ್ಕೂಲಿಗೆ ಹೆಣ್ಣುಮಕ್ಕಳು ಹೋಗುತ್ತಿರುವುದರಿಂದ ಮಿಷ್ ಸ್ಕೂಲಿನಲ್ಲಿ ಸರಿಯಾದ ಸ್ಟ್ರೆಂಗ್ತ್ ಇಲ್ಲದೆ ಪ್ರೋತ್ಸಾಹ ಕಡಮೆಯಾಗಿದೆ. ಆದ್ದರಿಂದ ಪ್ರತ್ಯೇಕವಾಗಿ ಒಂದು ಗರ್ಲ್ಸ್ ಹೈಸ್ಕೂಲನ್ನು ತೆರೆಯುವ ಬದಲು, ಈಗಿರತಕ್ಕ ಗರ್ಲ್ಸ್ ಹೈಸ್ಕೂಲನ್ನೇ ವಿದ್ಯಾರ್ಥಿನಿಯರನ್ನು ಹೆಚ್ಚಿಗೆ ಸೇರಿಸಿಕೊಂಡರೆ ಆಗ ಪಾಠಶಾಲೆ ಚೆನ್ನಾಗಿ ನಡೆಯುತ್ತದೆ ಮತ್ತು ಸರಿಯಾದ ಪ್ರೋತ್ಸಾಹವೂ ಸಿಕ್ಕುತ್ತದೆ.

ಮಾತೃಭಾಷೆ ಕನ್ನಡ ಆದವರಿಗೆ ಕನ್ನಡ ಮೀಡಿಯಂ ಮತ್ತು ಎರಡನೆಯವರಿಗೆ ಇಂಗ್ಲೀಷ್ ಮೀಡಿಯಂ ಇಡಿಸಿ ಆ ಸ್ಕೂಲನ್ನು ಅಭಿವೃದ್ಧಿಪಡಿಸಿದರೆ ತಮಗೆ ಎಷ್ಟೋ ಭಾರ ಕಡಮೆಯಾಗುತ್ತದೆ.

ಕೋಲಾರ ದೊಡ್ಡ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಾಗಿರುವುದರಿಂದ ಈಗ ಅಲ್ಲಿರುವ ಇಂಟರ್‌ಮೀಡಿಯೆಟ್ ಕಾಲೇಜನ್ನು ಅಪ್‌ಗ್ರೇಡ್ ಮಾಡಬೇಕೆಂದು ಒಂದು ವರ್ಷದಿಂದ ಪದೇ ಪದೇ ಕೇಳುತ್ತಾ ಇದ್ದೇವೆ. ತಾವೂ ಹಾಗೆಯೇ ತಳ್ಳಿಕೊಂಡು ಬರುತ್ತಾ ಇದ್ದೀರಿ. ಈ ವರ್ಷವಾದರೂ ಅಪ್‌ಗ್ರೇಡ್ ಮಾಡುವುದಕ್ಕೆ ಯೋಚನೆ ಮಾಡುತ್ತೀರೆಂದು ನಂಬಿದ್ದೇನೆ.

ಹೈಸ್ಕೂಲಿನಲ್ಲಿ ಸಿರಿಕಲ್ಚರ್‌ನ್ನು ಒಂದು ಅಪ್‌ಷನಲ್ ಸಬ್ಜೆಕ್ಟ್ ಆಗಿ ಇಂಟ್ರಡ್ಯೂಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದೆ ಹುಡುಗರ ಸಂಖ್ಯೆ ಕಡಿಮೆ ಇತ್ತು, ಅದಕ್ಕನುಗುಣವಾಗಿ ಸ್ಕಾಲರ್‌ಷಿಪ್‌ಗಳ ಸಂಖ್ಯೆಯೂ ಕೂಡ ಕಡಿಮೆ ಇತ್ತು. ಈಗ ಹುಡುಗರ ಸಂಖ್ಯೆ ಜಾಸ್ತಿ ಆಗಿದೆ, ಆದರೂ ಸ್ಕಾಲರ್‌ಷಿಪ್‌ಗಳ ಸಂಖ್ಯೆ ಮಾತ್ರ ಅಷ್ಟೇ ಇದೆ. ಆದ್ದರಿಂದ ಇದು ಒಂದಕ್ಕೆ ಎರಡರಷ್ಟಾದರೂ ಹೆಚ್ಚು ಮಾಡಬೇಕೆಂದು ಕೇಳಿಕೊಂಡು ಸಭಾಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ 10 ಜನ ಮಾತನಾಡಿದ್ದಾರೆ. ನನ್ನ ಹತ್ತಿರ ಇರುವ ಲಿಸ್ಟ್‌ನಲ್ಲಿ 20 ಜನ ಇದ್ದಾರೆ. ಚೀಟಿ ಕಳುಹಿಸಿರುವುದು ಸೇರಿಸಿದರೆ 32 ಜನ ಆಗುತ್ತದೆ. ಅದರಲ್ಲಿ 10 ಜನ ಹೋದರೆ 22 ಜನರಿಗೆ ಅವಕಾಶ ಕೊಡಬೇಕಾಗುತ್ತದೆ. ಇದು ಅಸಾಧ್ಯವಾದ ಮಾತು.

*Sri V. P. DEENADAYALU NAIDU (Cubbonpet).—I find that certain districts are completely left out or they have nothing to say other them. I think there are some important matters to be brought out and that ought to be borne in mind. I do not think one district can go completely without a member expressing any opinion on such important matters.

Mr. SPEAKER.—I am not to be blamed for that. I am to be guided by the list given by both the parties. The Hon'ble Member may make a representation to the whips of the parties. ಇಂಡಿಪೆಂಡೆಂಟ್ಸ್ ಇದ್ದಾರೆ. ಅವರು ಇದರಲ್ಲಿ ಇಲ್ಲ ಎಂದು ಕಾಣುತ್ತದೆ. ಆದರೆ ಇಷ್ಟು ಜನಕ್ಕೆ ಅವಕಾಶಕೊಡುವುದು ಸಾಧ್ಯವಿಲ್ಲ ಮತ್ತು ಅಗಲಾರದ ಮಾತು. ಅದಕ್ಕಾಗಿಯೇ 5½ ಘಂಟೆ ವರೆಗೂ ತಮಗೆ ಮಾತನಾಡಲು ಅವಕಾಶಕೊಡುತ್ತೇನೆ. ದಿನವೂ 7½–8 ಘಂಟೆವರೆಗೂ ಕುಳಿತುಕೊಳ್ಳಬೇಕೆಂದರೆ ಅಸಾಧ್ಯ ಎಂದು ಮಂತ್ರಿಗಳು ಹೇಳುತ್ತಾರೆ. ಆದ್ದರಿಂದ ಅದಷ್ಟು ಕಡಮೆ ಜನರು ಮಾತನಾಡಿದರೆ ಒಳ್ಳೆಯದು.

Sri K. S. SOORYANARAYANA RAO (Mysore City).—It would be very wrong if we attempt to speak in five minutes. We must have more time.

Mr. SPEAKER:—I have no objection to giving chance to as many members as possible. I can do that within the time that we have got.

ಶ್ರೀ ಬಿ. ರಾಚಯ್ಯ (ಚಾಮರಾಜನಗರ—ಅನುಸೂಚಿತ ಜಾತಿಗಳು):—ಇದು ಬಹಳ ಮುಖ್ಯವಾದ ಪ್ರಶ್ನೆ. ಇದಕ್ಕೆ ಸಂಬಂಧಪಟ್ಟವರಿಗೆ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಅದು ಸರಿ, ಆದರೆ ತಮ್ಮ ಹೆಸರು ಇದರಲ್ಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಬಹಳ ಮುಖ್ಯವಾದಂಥ ವಿಷಯ ಚರ್ಚೆಯಾಗುತ್ತಾ ಇದೆ. ದೊಡ್ಡ ಮನಸ್ಸು ಮಾಡಿ ಸ್ವಲ್ಪ ಹೊತ್ತಾದರೂ ಚಿಂತೆ ಇಲ್ಲ, ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶಮಾಡಿ ಕೊಡಬೇಕು.

ಅಧ್ಯಕ್ಷರು.—ಒಬ್ಬೊಬ್ಬ ಸದಸ್ಯರು 5 ನಿಮಿಷಕ್ಕೆ ಮೀರದಂತೆ ಮಾತನಾಡಿ, ಆಮೇಲೆ ನೋಡೋಣ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಪುನಕ್ತ ಸಾಲನಲ್ಲಿ ದೇಶದಲ್ಲಿರತಕ್ಕ ಜನರ ವಿದ್ಯಾಭಿವೃದ್ಧಿಯ ಬಗ್ಗೆ ಸರ್ಕಾರದವರು ಈ ದಿವಸ ಈ ಸಭೆಯ ಮುಂದೆ ದೇಶದ ಆದಾಯದಲ್ಲಿ ನುಮಾರು ನಾಲ್ಕನೆಯ ಒಂದು ಭಾಗದಷ್ಟು ಹಣವನ್ನು ಒದಗಿಸಬೇಕೆಂದು ಕೇಳಿರುವುದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಈ ದಿವಸ ಇಂಥ ಒಂದು ಬೇಡಿಕೆಯನ್ನು ನಮ್ಮ ಮಾನ್ಯ ವಿದ್ಯಾ ಮಂತ್ರಿಗಳು ಸಭೆಯ ಮುಂದೆ ತಂದಿದ್ದಾರೆ. ಜನರಿಗೆ ಜ್ಞಾನದ ಬೆಳಕನ್ನು ಕೊಡುವಂಥ ಈ ವಿದ್ಯಾಭಿವೃದ್ಧಿಯ ವಿಷಯದಲ್ಲಿ ನಮ್ಮ ದೇಶದ ಸರ್ಕಾರ ಬಹಳ ಹಿಂದಿನಿಂದಲೂ ಹೆಚ್ಚಿನ ಹಣವನ್ನು ಈ ಬಗ್ಗೆ ಖರ್ಚು ಮಾಡುತ್ತಾ ಬಂದಿದೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರತಕ್ಕಂಥ ಒಂದು ಪದ್ಧತಿ. ಮಾನವನಿಗೆ ಅತ್ಯಗತ್ಯವಾಗಿ ಬೇಕಾಗಿರತಕ್ಕಂಥ ವಸ್ತುಗಳಲ್ಲಿ ಈ ವಿದ್ಯೆಯೂ ಒಂದಾಗಿದೆ. ಈ ವಿದ್ಯಾದಾನದ ಬಗ್ಗೆ ಅನಂಖ್ಯಾತ ಜನರಿಗೆ ಅನುಕೂಲ ಮಾಡಬೇಕೆಂಬ ಉದ್ದೇಶದಿಂದ ನಮ್ಮ ಸರ್ಕಾರ ಈ ಬಗ್ಗೆ ಖರ್ಚುಮಾಡುತ್ತಿರುವಷ್ಟು ಹಣವನ್ನು ಬೇರೆ ಯಾವ ಸರ್ಕಾರವೂ ಮಾಡುತ್ತಿಲ್ಲ ವೆಂಬ ವಿಷಯದಲ್ಲಿ ಒಂದು ಮೆಚ್ಚಿಗೆಗೆ ಪಾತ್ರವಾಗಿದೆ.

ವಿಶ್ವವಿದ್ಯಾನಿಲಯಗಳಿಗೂ ಕೂಡ ವರ್ಷೇ ವರ್ಷೇ ಹೆಚ್ಚು ಹೆಚ್ಚು ಹಣವನ್ನೊದಗಿನಲಾಗುತ್ತಿದೆ. ಅದೇ ರೀತಿ ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾನಕ್ಕೂ ಹೆಚ್ಚು ಹೆಚ್ಚು ಹಣವನ್ನೊದಗಿನಲಾಗುತ್ತಿದೆ. ನೂರಾರು ಸ್ಥಳಗಳಲ್ಲಿ ಕೊನ ಶಾಲೆಗಳನ್ನು ಸ್ಥಾಪಿಸಲು ಹಣವನ್ನೊದಗಿನಲಾಗಿದೆ. ಹೀಗೆ ಸರ್ಕಾರದವರು ವರ್ಷೇ ವರ್ಷೇ ಸಹಸ್ರಾರು ರೂಪಾಯಿಗಳನ್ನು ಈ ಬಾಬಿಗೆ ಪೆಚ್ಚಮಾಡುತ್ತಿದ್ದಾರೆಂದೂ ಹಾಲ ಜಾರಿಯಲ್ಲಿರತಕ್ಕ ವಿದ್ಯಾಭ್ಯಾನ ಕ್ರಮದಲ್ಲಿರತಕ್ಕ ಅನಾನುಕೂಲಗಳೇನೆಂಬುದರ ಕಡೆಗೆ ಸರ್ಕಾರದವರು ಸಾಕಷ್ಟು ಗಮನಕೊಡದಿರುವುದು ಬಹಳ ವಿಷಾದಕರ. ಕೆಲವು ಹಳ್ಳಿಗಳಲ್ಲಿ ಶಾಲಾಕಟ್ಟಡಗಳೇ ಇಲ್ಲ. ದೇವಸ್ಥಾನದಲ್ಲೋ ಪುಂಗಳ ನೆರಳಿನ ಆಶ್ರಯದಲ್ಲೋ ಅಥವಾ ಎಲ್ಲೋ ಬಯಲಿರತಕ್ಕಂಥ ಸ್ಥಳಗಳಲ್ಲಿ ಮಕ್ಕಳ ವಿದ್ಯಾಭ್ಯಾನ ನಡೆಯುತ್ತಿದೆ. ಸ್ವಾತಂತ್ರ್ಯ ಬಂದು ಹತ್ತು ವರ್ಷಗಳು ಕಳೆದುಹೋದಾಗ್ಯೂ ಸರ್ಕಾರ ಈ ಬಗ್ಗೆ ಯಾವ ಪ್ರಯತ್ನಗಳನ್ನೂ ನಡೆಸಿರುವಹಾಗೆ ಕಾಣಬರುತ್ತಿಲ್ಲ. ಆದರೆ ಈ ಶಾಲಾಕಟ್ಟಡಗಳ ವಿಷಯದಲ್ಲೇಕೋ ನಮ್ಮ ಸರ್ಕಾರ ಸ್ವಲ್ಪ ಮಂದಗಾಮಿಯಾಗಿರತಕ್ಕದ್ದು ದುಃಖವನ್ನೂ ಮತ್ತು ಆಶ್ಚರ್ಯವನ್ನೂ ಉಂಟುಮಾಡತಕ್ಕದ್ದಾಗಿದೆ. ಸರ್ಕಾರದವರು ಹಳ್ಳಿಗಳಿಗೆ ಶಾಲೆಗಳನ್ನು ಮಂಜೂರುಮಾಡಬೇಕಾಗಿದ್ದರೆ ಒಂದು ನೇಮಕವನ್ನು ಮಾಡಿಕೊಂಡಿದ್ದಾರೆ. ಅದೇನೆಂದರೆ ಗ್ರಾಮಾಸ್ತರು ಈ ಶಾಲಾಕಟ್ಟಡದ ಬಗ್ಗೆ 750 ರೂಪಾಯಿಗಳನ್ನು ಕೊಡಬೇಕೆಂದು ಒಂದು ನೇಮವಿದೆ. ಈ ಒಂದು ನೇಮಕದ ಪ್ರಕಾರ ಈ ದಿವಸ ಶಾಲೆಗಳಿಗೆ ಸಾಕಷ್ಟು ಕಟ್ಟಡಗಳನ್ನು ಒದಗಿನಲು ಸಾಧ್ಯವಾಗಿರುವುದಿಲ್ಲ. ಈ ದಿವಸ ಅನೇಕ ಗ್ರಾಮಗಳಲ್ಲಿ ಅಲ್ಲಿ ವಾಸಿನತಕ್ಕಂಥ ಜನರಿಗೆ ಸರ್ಕಾರದವರು ಕೇಳಿತಕ್ಕ ಹಣವನ್ನು ಒದಗಿನಲು ಅವರಿಗೆ ಶಕ್ತಿ ಇರುವುದಿಲ್ಲ. ಹೀಗಾಗಿ ಅನೇಕ ಗ್ರಾಮಗಳಲ್ಲಿ ಬಡ ಜನರ ಮಕ್ಕಳ ವಿದ್ಯಾಭಿವೃದ್ಧಿಗೆ ಅವಕಾಶವಿಲ್ಲದಂತಾಗಿದೆ. ಆದರೆ ಕೆಲವು ಗ್ರಾಮಗಳಲ್ಲಿ ಈ ಹಣವನ್ನು ಕೊಡತಕ್ಕಂಥ ಶಕ್ತಿವಂತರಿರಬಹುದು. ಆದರೆ ಅವರು ಲೋಭಿಗಳಿರುತ್ತಾರೆ. ಮಕ್ಕಳ ವಿದ್ಯಾದಾನಕ್ಕಾಗಿ ಹಣವನ್ನು ದಾನಮಾಡಬೇಕೆಂಬ ಬುದ್ಧಿ ಅವರಿಗಿರುವುದಿಲ್ಲ. ಹೀಗಾಗಿ ಅಲ್ಲೆಲ್ಲ ಮಕ್ಕಳ ವಿದ್ಯಾಭಿವೃದ್ಧಿಗೆ ತುಂಬ ಅಡಚಣೆಯುಂಟಾಗಿದೆ. ಆದುದರಿಂದ ಸರ್ಕಾರದವರು ಈ ಒಂದು ಪದ್ಧತಿಯನ್ನು ಮಾರ್ಪಾಟು ಮಾಡತಕ್ಕದ್ದು ಅತ್ಯಾವಶ್ಯಕ. ಆದರೆ ಸರ್ಕಾರದವರು ಈ ದಿವಸ ಇಂಥಾ ಒಂದು ನಿಬಂಧನೆಯನ್ನು ಜನರಮೇಲೆ ಹಾಕುವುದರ ಮೂಲಕ ನೂರಾರು ಹಳ್ಳಿಗಳ ಬಾಲಕರ ವಿದ್ಯಾಭಿವೃದ್ಧಿಯನ್ನು ಮೊಟಕು ಮಾಡಿದಂತಾಗುತ್ತದೆ. ಈ ರೀತಿ ಮಾಡಬಾರದೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಈ ದಿವಸ ಈ ಪ್ರಾಥಮಿಕ ಶಿಕ್ಷಣದ ಒಂದು ಜವಾಬ್ದಾರಿ ಯಾರ ಮೇಲೆ ಬಿದ್ದಿದೆ? ಈ ಹೊಣಗಾರಿಕೆ ಈ ದಿವಸ ನಮ್ಮ ಭಾರತ ರಾಜ್ಯಾಂಗದಲ್ಲಿ ಹೇಳಿರುವಂತೆ ಪ್ರತಿಯೊಂದು ಪ್ರಾಂತ ಸರ್ಕಾರಗಳಮೇಲೆ ಬಿದ್ದಿದೆ. ಜೊತೆಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ದೇಶದಲ್ಲಿ ಜಾರಿಗೆ ತರಬೇಕೆಂಬ ನೇಮಕವಿವೆ. ಇದು ಈಗಾಗಲೇ ಅನೇಕ ಕಡೆಗಳಲ್ಲಿ ಜಾರಿಯಲ್ಲಿದೆ. ಇಷ್ಟೆಲ್ಲಾ ಇದ್ದಾಗ್ಯೂ ಇಲ್ಲಿಯವರೆಗೂ ಸರ್ಕಾರದವರು ಈ ಪ್ರಾಥಮಿಕ ಶಾಲಾಕಟ್ಟಡಗಳ ಬಗ್ಗೆ ಸಾಕಷ್ಟು ಗಮನ ಕೊಡದಿರುವುದು ತುಂಬಾ ಆಶ್ಚರ್ಯ. ಸರ್ಕಾರದವರು ವರ್ಷೇ ವರ್ಷೇ ಹೊಸ ಶಾಲಾಕಟ್ಟಡಗಳನ್ನು ಕಟ್ಟಿಸಲು ಆಗುವುದಿಲ್ಲವೆಂದು ಜನರಿಗೆ ಹೇಳುತ್ತಿದ್ದಾರೆ. ಆದರೆ ಈ ದಿವಸ ಜನರು ಸರ್ಕಾರದವರು ಹಣವನ್ನು ಬಹಳ ದುಂದು ವೆಚ್ಚ ಮಾಡುತ್ತಿದ್ದಾರೆಂದು ಏನು ಹೇಳುತ್ತಿದ್ದಾರೋ ಅದನ್ನು ಈ ದಿವಸ ತಡೆಗಟ್ಟಿದರೆ ಆ ಉಳಿತಾಯ ದಲ್ಲೇ ಪ್ರತಿಯೊಂದು ಕಡೆಗೂ ಈ ಶಾಲಾ ಕಟ್ಟಡಗಳನ್ನು ಒದಗಿನಬಹುದು. ಈ ದಿವಸ ಅತಿಥಿ ಸತ್ಕಾರದ ಬಗ್ಗೆ ಸರ್ಕಾರ 7 ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ಈ ಬಾಬು ವರ್ಷೇ ವರ್ಷೇ ಹನುಮಂತನ ಬಾಲ ಬೆಳೆದುಕೊಂಡ ಹಾಗೆ ಬೆಳೆದು ಬರುತ್ತದೆ. ಆದರೆ ನಾನೀಗ ಈ ಬಾಬನ್ನು ಸಂಪೂರ್ಣವಾಗಿ ಕೈಬಿಡಬೇಕೆಂದೇನೂ ಹೇಳುತ್ತಿಲ್ಲ. ಈ ಬಾಬಿನಲ್ಲಿ ಮಿತವ್ಯಯ ಮಾಡಿದರೆ, ಇನ್ನು 10 ವರ್ಷಗಳೊಳಗಾಗಿ ನಮ್ಮ ದೇಶಾದ್ಯಂತವೂ ಆ ಉಳಿತಾಯದ ಹಣದಿಂದ ಈ ಶಾಲಾಕಟ್ಟಡಗಳನ್ನೊದಗಿಸಲು ಸಾಧ್ಯವಿದೆಯೆಂಬುದು ನನ್ನ ಅಭಿಪ್ರಾಯ. ಹೀಗೆ ಯಾವುದಾದರೊಂದು ರೀತಿಯಲ್ಲಿ ಆ ಬಡ ಹಳ್ಳಿಜನರ ಮಕ್ಕಳ ವಿದ್ಯಾಭಿವೃದ್ಧಿಗೆ ಒಂದು

(ಶ್ರೀಮತಿ ರತ್ನಮ್ಮ ಮಾಧವರಾವ್)

ಅನುಕೂಲ ಮಾಡಿಕೊಟ್ಟು ಆ ಬಗ್ಗೆ ಒಂದು ಕೀರ್ತಿಗಳಿಸ ತಕ್ಕ ರೀತಿಯಲ್ಲಿ ನಮ್ಮ ಸರ್ಕಾರದವರು ಮನಸ್ಸು ಮಾಡುತ್ತಾರೆಂದು ನಾನು ಆಶಿಸುತ್ತೇನೆ.

ಇನ್ನು ಪ್ರೌಢ ವಿದ್ಯಾಭ್ಯಾಸದ ಬಗ್ಗೆ ಒಂದು ಸಲದೆ ಇದೆ. ಈ ವಿದ್ಯಾಭ್ಯಾಸ ಬಹಳ ದಿವಸಗಳಿಂದಲೂ ಸರ್ಕಾರದವರ ಆಶ್ರಯದಲ್ಲೇ ನಡೆದುಕೊಂಡು ಬರುತ್ತಿದೆ. ಆದರೆ ಇತ್ತೀಚೆಗೆ ಕೆಲವು ಖಾಸಗೀ ಸಂಸ್ಥೆಗಳು ಈ ಬಗ್ಗೆ ಮುಂದೆ ಬಂದಿರುತ್ತವೆ. ಈ ಸಂಸ್ಥೆಗಳು ಈ ದಿವಸ ಸರ್ಕಾರದಿಂದ ಉತ್ತಮ ರೀತಿಯಲ್ಲಿ ಸಹಾಯವನ್ನು ಪಡೆದುಕೊಂಡು ದೇಶದಲ್ಲಿರತಕ್ಕ ಮಕ್ಕಳಿಗೆ ವಿದ್ಯಾದಾನ ಮಾಡುತ್ತಿವೆ. ಇನ್ನುಮೇಲೆ ಸರ್ಕಾರ ಈ ಜವಾಬ್ದಾರಿಯನ್ನು ಹೊರುವುದರ ಬದಲು ಇದನ್ನು ಬೇರೆ ಖಾಸಗೀ ಸಂಸ್ಥೆಗಳಿಗೆ ವಹಿಸಿ ಅಂಥ ಸಂಸ್ಥೆಗಳಿಗೆ ಸರ್ಕಾರ ಒಂದು ಉತ್ತಮ ರೀತಿಯಲ್ಲಿ ಹೆಚ್ಚಿನ ಹಣ ಸಹಾಯ ಒದಗಿಸುವಂಥಾ ಒಂದು ಏರ್ಪಾಡನು ಮಾಡತಕ್ಕದ್ದು ಅತ್ಯಗತ್ಯವಾದುದೆಂದು ನಾನು ಈ ಒಂದು ಸಲಹೆಯನ್ನು ಸರ್ಕಾರಕ್ಕೆ ಸೂಚಿಸಬಯಸುತ್ತೇನೆ. ನಮ್ಮ ಅಕ್ಕಪಕ್ಕದ ಪ್ರಾಂತಗಳಾದ ಮದ್ರಾಸ್ ಮತ್ತು ಕೇರಳದಲ್ಲಿ ಈ ಒಂದು ಪದ್ಧತಿ ಈಗಾಗಲೇ ಜಾರಿಯಲ್ಲಿ ಬಂದಿದೆ. ಆದುದರಿಂದ ನಮ್ಮ ಸರ್ಕಾರದವರೂ ಕೂಡ ಆ ಒಂದು ಪದ್ಧತಿಯನ್ನು ಇಲ್ಲಿಯೂ ಜಾರಿಗೆ ತಂದು ಆ ಬಗ್ಗೆ ಒಂದು ಹೆಚ್ಚಿನ ಧನಸಹಾಯ ನೀಡತಕ್ಕದ್ದು ಅತ್ಯಗತ್ಯವೆಂದು ಸೂಚಿಸಲಿಚ್ಛಿಸುತ್ತೇನೆ.

ಇನ್ನು ನಮ್ಮ ವಿಶ್ವವಿದ್ಯಾನಿಲಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಆದರೆ ಸರ್ಕಾರದವರು ಈ ದಿವಸ ಈ ವಿಶ್ವವಿದ್ಯಾನಿಲಯಗಳ ಬಗ್ಗೆ ಒದಗಿಸಿರತಕ್ಕ ಹಣ ಏನೇನೂ ಸಾಲದೆಂಬ ಅಂಶವನ್ನು ನಾನೀಗ ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಮೊಬಲಗಿನಿಂದ ಯಾವ ರೀತಿಯಲ್ಲೂ ಒಂದು ಉತ್ತಮ ರೀತಿಯ ಶಿಕ್ಷಣವನ್ನು ಕೊಡಲು ಅಲ್ಲಿ ಸಾಧ್ಯವಾಗುತ್ತಿಲ್ಲವೆಂಬುದು ಅನುಭವದಿಂದ ಕಂಡು ಬಂದಿದೆ. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಈಗಿನ ಮಾಡರನ್ ರೀತಿಯ ವಿದ್ಯಾರ್ಜನೆಗೆ ಸಹಾಯಮಾಡಬೇಕಾಗಿದ್ದರೆ ಈ ಬಾಬಿಗೆ ಹೆಚ್ಚು ಹಣ ಒದಗಿಸಬೇಕಾದದ್ದು ಅತ್ಯವಶ್ಯಕ. ನಮ್ಮ ವಿಶ್ವವಿದ್ಯಾನಿಲಯಗಳ ವಿದ್ಯಾಭ್ಯಾಸ ಕ್ರಮವು ಆ ಒಂದು ಹಳೆಯ ಓಬರಾಯನ ಕಾಲದಲ್ಲಿ ಯಾವ ರೀತಿಯಲ್ಲಿ ನಡೆಸಲ್ಪಡುತಿತ್ತೋ ಅದೇ ರೀತಿಯಾಗಿ ಈ ದಿವಸವೂ ನಡೆಯುತ್ತಿದೆ; ಈ ವಿಜ್ಞಾನಯಂತ್ರಯುಗವೆಂದು ನಾವೇನು ಕರೆಯುತ್ತಿದ್ದೇವೋ ಅಂಥಾ ಯುಗದಲ್ಲೂ ಆ ಓಬರಾಯನ ಪದ್ಧತಿಯ ವಿದ್ಯಾಭ್ಯಾಸ ಕ್ರಮವನ್ನೇ ಮುಂದುವರಿಸಿಕೊಂಡು ಬರಲಾಗುತ್ತಿದೆ. ಚಂದ್ರ ಮಂಡಲಕ್ಕೆ ಜನರು ಹೋಗಿಬರತಕ್ಕ ಬಗ್ಗೆ ನಂಶೋಧನೆಗಳನ್ನು ಕಂಡುಹಿಡಿಯಲು ವಿಶ್ವದಲ್ಲಿ ನಾನಾ ಜನರು ಪ್ರಯತ್ನ ನಡೆಸುತ್ತಿರುವಂಥಾ ಕಾಲದಲ್ಲಿ ನಾವೂ ಸಹ ನಮ್ಮ ಜನರಿಗೆ ಅಂಥಾ ವಿದ್ಯಾರ್ಜನೆಗೆ ಅನುಕೂಲಗಳನ್ನೊದಗಿಸತಕ್ಕದ್ದು ಅತ್ಯವಶ್ಯಕ. ಅಂಥಾ ಒಂದು ಆದರ್ಶ ಮಾರ್ಗವನ್ನಿಟ್ಟುಕೊಂಡು ನಮ್ಮ ವಿಶ್ವವಿದ್ಯಾನಿಲಯಗಳು ಮುಂದುವರಿಯಬೇಕಾಗಿದೆ. ಅದಕ್ಕಾಗಿ ಈ ದಿವಸ ಅಲ್ಲಿ ಹೆಚ್ಚಿನ ಸಂಶೋಧನೆಗಳಿಗೆ ಅವಕಾಶ ಮಾಡಿಕೊಡಬೇಕು. ಅದಕ್ಕಾಗಿ ಈ ಬಾಬಿಗೆ ಸರ್ಕಾರ ಹೆಚ್ಚು ಹಣ ಒದಗಿಸಬೇಕಾದ್ದು ಅತ್ಯಗತ್ಯ. ಈ ಬಾಬಿಗೆ ಮಾನ್ಯ ವಿದ್ಯಾ ಸಚಿವರು ಆದಷ್ಟೂ ಹೆಚ್ಚಿಗೆ ಹಣವನ್ನೊದಗಿಸುತ್ತಾರೆಂದು ನಾನು ಭಾವಿಸುತ್ತೇನೆ.

ಇನ್ನು ಪ್ರೌಢ ವಿದ್ಯಾ ಶಿಕ್ಷಣಕ್ಕೆ ಸರ್ಕಾರದವರೇನೋ ಹೆಚ್ಚಿನ ಹಣವನ್ನೊದಗಿಸಿದ್ದಾರೆ. ಆದರೆ ಈ ದಿವಸ ನಮ್ಮ ಮಕ್ಕಳಿಗೆ ಈ ಶಾಲೆಗಳಲ್ಲಿ ದೊರೆಯುತ್ತಿರುವ ವಿದ್ಯೆಯಿಂದೇನಾದರೂ ಪ್ರಯೋಜನವಾಗುತ್ತಿದೆಯೇ ಎಂದು ಒಳಹೊಕ್ಕು ನೋಡಿದರೆ ಈಗಿರತಕ್ಕ ಈ ವಿದ್ಯಾಭ್ಯಾಸಕ್ರಮದಿಂದ ನಮ್ಮ ಮಕ್ಕಳಿಗೆ ಸರಿಯಾದ ಜ್ಞಾನ ಸಂಪಾದನೆಯಾಗುತ್ತಿಲ್ಲ. ಹಿಂದಿನ ವಿದ್ಯಾಭ್ಯಾಸ ಕ್ರಮವು ನಮ್ಮ ದೇಶದ ಹುಡುಗರನ್ನು ಕೇವಲ ಒಂದು ಗುಮಾಸ್ತೆಗಿರಿಗೆ ರಾಯಕ್ಕಾಗಿರುವಂತೆ ತಯಾರು ಮಾಡುತ್ತಿದ್ದೇವೆ. ಮುಂದೆ ಅವರು ದೇಶದ ಪ್ರಜೆಗಳಾದಾಗ ಒಂದು ಸ್ವತಂತ್ರವಾದ ಜೀವನೋಪಾಯವನ್ನು ಕಲ್ಪಿಸಿಕೊಂಡು ಅವರು ಸ್ವತಂತ್ರರಾಗಿ ಬಾಳತಕ್ಕಂಥ ಒಂದು ವಿದ್ಯೆಯನ್ನ ನಾವು ಅವರಿಗೆ ಕಲಿಸುತ್ತಿಲ್ಲ. ಇದಕ್ಕಾಗಿಯೇ ಮಹಾತ್ಮಾಗಾಂಧಿಯವರು ಈಗಿನ ಶಿಕ್ಷಣ ಕ್ರಮದಲ್ಲಿ ಸೂಕ್ತ ಬದಲಾವಣೆಗಳಾಗ ತಕ್ಕದ್ದು ಅತ್ಯಾವಶ್ಯಕವೆಂದು ಬಹಳ ಹಿಂದೆಯೇ ತಿಳಿಸಿರುತ್ತಾರೆ. ನಮ್ಮ ದೇಶದ ಮಕ್ಕಳು ಹಾಗೆ ವಿದ್ಯೆಯಲ್ಲಿ ಮುಂದುವರಿಯಬೇಕಾಗಿದ್ದರೆ ಇನ್ನೂ ಹತ್ತಾರು ವರ್ಷಗಳವರೆಗೆ ನಂಸ್ಥಾನದ ಮೂಲೆಮೂಲೆಗಳಲ್ಲೂ ಮೂಲಶಿಕ್ಷಣ ಪದ್ಧತಿಯನ್ನು ಜಾರಿಗೆ ತರತಕ್ಕಂಥ ಒಂದು ಯೋಜನೆಯನ್ನು ಸರ್ಕಾರದವರು ಶೀಘ್ರವಾಗಿ ತಯಾರಿಸಿ ಅದನ್ನು ಬೇಗ ಕಾರ್ಯರೂಪಕ್ಕೆ ತರತಕ್ಕದ್ದು ಅತ್ಯಗತ್ಯ. ಇನ್ನು ಈ ಉಪಾಧ್ಯಾಯರುಗಳಿಗೆ ಇತ್ತೀಚೆಗೆ ನಂಬಳಸಾರಿಗೆಗಳನ್ನು ಹೆಚ್ಚುಮಾಡಿ, ಹೀಗೆ ಅವರಿಗೆ ಹೆಚ್ಚಿನ ಸೌಲಭ್ಯಗಳನ್ನೊದಗಿಸಿ ಕೊಟ್ಟಿರುವುದಕ್ಕೆ ನಮ್ಮ ಸರ್ಕಾರದವರನ್ನು ನಾನು ಅಭಿನಂದಿಸುತ್ತೇನೆ. ಈ ನಂದರ್ಭದಲ್ಲಿ ಒಂದೆರಡು ಅಂಶಗಳನ್ನು ಮಾನ್ಯ ವಿದ್ಯಾ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ದಿವಸ ಮಾಧ್ಯಮಿಕ ಶಾಲೆಗಳಲ್ಲಿ ಕೆಲವು ಪದವೀಧರರಾದ ಉಪಾಧ್ಯಾಯರುಗಳಿದ್ದಾರೆ. ಆದರೆ ಅವರ ವಿದ್ಯಾ ಅರ್ಹತೆಗೆ ತಕ್ಕಷ್ಟು ಸೌಲಭ್ಯಗಳು ಅಲ್ಲ ಅವರಿಗೆ ದೊರೆಯುತ್ತಿಲ್ಲ. ಮಾಧ್ಯಮಿಕ ಶಾಲೆಗಳಲ್ಲಿ ಕೆಲಸಮಾಡುತ್ತಿರುವಂಥ ಪದವೀಧರರುಗಳಾದ ಉಪಾಧ್ಯಾಯರಿಗೂ ಸಹ ಇತರೇ ಪದವೀಧರರಿಗೆ ಬೇರೆ ಇಲಾಖೆಗಳಲ್ಲಿ ದೊರೆಯುತ್ತಿರುವ ಸೌಲಭ್ಯಗಳೇ ನಿವೆಯೋ ಅವನ್ನು ಇವರಿಗೂ ಸರ್ಕಾರದವರು ದೊರಕಿಸಿಕೊಡತಕ್ಕ ಅವಕಾಶ ನೀಡಬೇಕೆಂದು ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ನಾನು ಮನವಿಮಾಡಿ ಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ನಾನು ನಂಗೀತ ಉಪಾಧ್ಯಾಯರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಯಾರಾದರೂ ನಂಗೀತ ಹಾಡ ತಕ್ಕವರಿದ್ದರೆ ಅದನ್ನು ನಾವೆಲ್ಲರೂ ಸುಖವಾಗಿ ಕೇಳುತ್ತ ಕುಳಿತುಕೊಳ್ಳಬಹುದು. ಆದರೆ ಅಂಥ ನಂಗೀತ ವಿದ್ಯೆಯನ್ನು ಕಲಸುವುದು ಬಹಳ ಕಷ್ಟ. ಆದರೆ ಈ ದಿವಸ ಆ ಕಷ್ಟಕ್ಕೆ ಸರಿಯಾದ ಸಂಬಳವನ್ನು ಅವರಿಗೆ ಕೊಡುತ್ತಿಲ್ಲ. ಈ ವಿಚಾರವನ್ನು ಸರ್ಕಾರದವರು ಸೂಕ್ತರೀತಿಯಲ್ಲಿ ವಿಮರ್ಶೆಮಾಡುತ್ತಾರೆಂದು ನಂಬಿದ್ದೇನೆ. ಇವರಿಗೂ ಕೂಡ ಹೆಚ್ಚಿನ ಸಂಬಳಸಾರಿಗೆ ಕೊಡತಕ್ಕದ್ದು ಅಗತ್ಯ. ಇಂಥ ಒಂದು ಅವಕಾಶವನ್ನು ಇವರಿಗೂ ಸಹ ಮಾನ್ಯ ವಿದ್ಯಾಮಂತ್ರಿಗಳು ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟದ್ದಕ್ಕಾಗಿ ನಾನು ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಅಧ್ಯಕ್ಷರೇ, ಈ ವಿಚಾರದಲ್ಲಿ ಏಕೋ ಬಹಳ ಅನ್ಯಾಯವಾಗುತ್ತಿರುವಂತೆ ಕಂಡುಬರುತ್ತಿದೆ.....

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಪಾಯಿಂಟ್ ಆಫ್ ಆರ್ಡರ್ ಸಾರ್. "ಬಹಳ ಅನ್ಯಾಯ" ಆಗುತ್ತಿದೆ ಎಂಬ ಶಬ್ದ ಉಪಯೋಗಿಸಿದ್ದಾರೆ, ಅದು ಸರಿಯೇ ಎಂದು ಕೇಳುತ್ತೇನೆ!

ಅಧ್ಯಕ್ಷರು.—ಆ ರೀತಿ ಅನ್ಯಾಯ ನಡೆಯುತ್ತಿಲ್ಲ ಎಂದು ನೀವು ಅಲ್ಲೇ ಅವರಿಗೆ ತಿಳಿಸಿಬಿಡಿ.

5 P.M.

*ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ಈ ಸಾರಿ ವಿದ್ಯಾಖಾತೆಗಾಗಿ ಖರ್ಚುಮಾಡತಕ್ಕ ಹಣ ಬಹಳ ಜಾಸ್ತಿಯಾಗಿ ಯೇನೋ ಇದೆ. ಇಷ್ಟು ಹಣವನ್ನು ನಿಗದಿಮಾಡುತ್ತಿದ್ದರೂ ಈ ಖಾತೆ ಅಷ್ಟೂ ಬೆಳೆಯುತ್ತ ಇದೆ ಮತ್ತು ಅಷ್ಟೂ ಖರ್ಚಾಗುವುದಕ್ಕೆ ಅವಕಾಶವಿದೆ. ಈ ದೃಷ್ಟಿಯಿಂದ ಹೆಚ್ಚಿನ ಡೆವೆಲಪ್‌ಮೆಂಟು ಪ್ರೋಗ್ರಾಂಗಳನ್ನು ಏನು ಹಾಕಿಕೊಂಡಿದ್ದಾರೋ ಆ ಕಡೆ ಹೆಚ್ಚಿನ ಗಮನವನ್ನು ಕೊಡಬೇಕಾದುದು ಅತ್ಯಗತ್ಯ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಈ ಖಾತೆಯ ವಿಚಾರವಾಗಿ ಅನೇಕ ಉಪಯುಕ್ತವಾದ ಸಲಹೆಗಳು ಬಂದಿವೆ. ನಾನೂ ಕೂಡ ಒಂದೆರಡು ವಿಷಯಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ನಮ್ಮ ದೇಶದಲ್ಲಿರುವ ಸಂಸ್ಕೃತ ಕಾಲೇಜುಗಳ ವಿಚಾರವಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಹಳೆಯ ಮೈಸೂರಿನಲ್ಲಿ ನನಗೆ ತಿಳಿದಮಟ್ಟಿಗೆ ನಾಲ್ಕು ಸಂಸ್ಕೃತ ಕಾಲೇಜುಗಳಿವೆ. ಆದರೆ ಒಂದೊಂದು ಕಾಲೇಜುಗಳಲ್ಲಿಯೂ ಒಂದೊಂದು ರೀತಿಯ ವ್ಯವಸ್ಥೆಯಿದೆ. ಇವೆಲ್ಲವನ್ನು ಒಂದುಗೂಡಿಸಿ ಒಂದೇರೀತಿಯಾದ ವ್ಯವಸ್ಥೆ ಇರುವಹಾಗೆ ಮಾಡಬೇಕು. ಮತ್ತು ಸಂಸ್ಕೃತ ಕಾಲೇಜುಗಳನ್ನೇನೋ ಮಾಡುತ್ತಾರೆ. ಆದರೆ ಇದಕ್ಕೆ ಹೊರಗಡೆ Recognition ಇರುವುದಿಲ್ಲ. ಈ ದೃಷ್ಟಿಯಿಂದ ಇದನ್ನು ಸರಕಾರದವರು ಯೂನಿವರ್ಸಿಟಿಗೆ ಸೇರಿಸಿಬಿಡುವುದರಮೂಲಕ ಒಂದು "All India Recognition" ದೊರಕಿಸಿಕೊಡುವಂತಾಗುವಂತೆ ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ. ಹೀಗೆ ಮಾಡದೆಹೋದರೆ ನಮ್ಮಲ್ಲಿ ಸಂಸ್ಕೃತ ಕಾಲೇಜುಗಳು ಮುಂದಕ್ಕೆ ಬರುವುದಿಲ್ಲ. ಅಲ್ಲದೆ ನಮ್ಮಲ್ಲಿ ಸಂಸ್ಕೃತವನ್ನು ವ್ಯಾಸಂಗ ಮಾಡುವ ಜನರೇ ಬಹಳ ಕಡಿಮೆ. ಹೀಗೆ ಸಂಸ್ಕೃತವನ್ನು ವ್ಯಾಸಂಗ ಮಾಡಿದ ಜನಗಳಿಗೆ ಪುರಸ್ಕಾರವೂ ಬಹಳ ಕಡಮೆಯಾಗಿದೆ. ಆದುದರಿಂದ ಇದು ಬಹಳ ಅಗತ್ಯವೆಂದು ಹೇಳಬೇಕಾಗಿದೆ.

ಎರಡನೆಯದಾಗಿ ಸಂಬಳಸಾರಿಗೆಗಳಲ್ಲೂ ಕೂಡ ಕಾಲೇಜಿನಿಂದ ಕಾಲೇಜಿಗೆ ವ್ಯತ್ಯಾಸ ಏದೆ. ಇದರ ಕಡೆ ಕೂಡ ಸರ್ಕಾರವು ತನ್ನ ಗಮನವನ್ನು ಹರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಮತ್ತೆ ಈ ವಿದ್ಯಾಭ್ಯಾಸದ ವಿಚಾರದಲ್ಲಿ ಈ ಸಭೆಯಲ್ಲಿ ಕೆಲವು ಸದಸ್ಯರುಗಳು ಮಾಡಿದ ಟೀಕೆಗೆ ಜವಾಬು ಕೊಟ್ಟು ನನ್ನ ಈ ಭಾಷಣವನ್ನು ಮುಗಿಸಬೇಕೆಂದಿದ್ದೇನೆ. ಇದಕ್ಕೆ ಮುಂಚಿತವಾಗಿ ಒಂದು ವಿಚಾರವನ್ನು ಹೇಳಬೇಕಾಗಿದೆ. ನಮ್ಮ ವಿದ್ಯಾರ್ಥಿಗಳಲ್ಲಿ ಈಚೆಗೆ ಸ್ವಲ್ಪ ಶಿಸ್ತು ಕಮ್ಮಿಯಾಗುತ್ತಿದೆ. ಈ ರೀತಿಯಾಗಿ ಶಿಸ್ತು ಕಡಮೆಯಾಗುವುದಕ್ಕೆ ಕಾರಣ ವೇನು ಎನ್ನುವ ಬಗ್ಗೆ ಇಂಡಿಯಾ ಸರಕಾರದವರು ಸ್ವಲ್ಪಮಟ್ಟಿಗೆ ಪ್ರಾಂತ ಸರ್ಕಾರದವರೂ ಕಲೆತು ವಿಚಾರವಿನಿಮಯವಾಗುತ್ತಿದೆ ಎಂದು ಕೇಳಿದೆ, ಮತ್ತೆ ಯಾವ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣಗಳನ್ನು ಹುಡುಕುವುದು ಅತ್ಯಗತ್ಯ. ಇದಕ್ಕೆ ಸ್ವಲ್ಪಮಟ್ಟಿಗೆ ನನಗೆ ತಿಳಿದಂತೆ ಒಂದು ಕಾರಣವಿದೆ ಎಂದು ಕಾಣುತ್ತದೆ. ಸರ್ಕಾರದವರು ಒಂದು ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಂಡಮೇಲೆ ಪದೇಪದೇ ಬದಲಾವಣೆ ಮಾಡುವುದೇ ಈ ವಿದ್ಯಾರ್ಥಿಗಳ ಅಶಿಸ್ತಿಗೆ ಕಾರಣ ಎನ್ನಬಹುದು. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಈಗ ಈ ಪರೀಕ್ಷೆಗಳನ್ನು ಮುಂದುವರಿಸಬೇಕೆಂಬ ಕೂಗು ಒಂದು ಬಂದಿತ್ತು. ಸರಕಾರದವರಿಗೆ ಇದನ್ನು ಹೇಳುವ ಕಾರಣವಿಲ್ಲ ಎನ್ನಬಹುದು. ಈ ವಿಷಯ ಯೂನಿವರ್ಸಿಟಿಗೆ ಅಥವಾ ಸೆಕೆಂಡರಿ ಎಜುಕೇಷನ್ನಿನ ಶಾಖೆಗೆ ಸೇರಿರಬಹುದು. ಯೂನಿವರ್ಸಿಟಿಗೆ ಸೇರಿದೆ ಎಂದೇ ಒಪ್ಪಿಕೊಳ್ಳೋಣ. ಯೂನಿವರ್ಸಿಟಿಗೇ ಆಗಲೀ ಅಥವಾ ಯಾರೇ ಆಗಲೀ, ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಂಡಮೇಲೆ ಪುನಃ ಬದಲಾವಣೆ ಮಾಡಿಕೊಂಡು ಹೋಗುವುದು ಸರಿಯಲ್ಲ. ಇದರಿಂದ ಏನಾಗುತ್ತದೆ ಎಂದರೆ, ಹುಡುಗರು ಒಂದು ಸ್ಟ್ರೈಕು ಮಾಡುತ್ತೇವೆಂದು ಹೆದರಿಸುವುದಾಗಲೀ ಅಥವಾ ಡೆಮಾನ್‌ಸ್ಟ್ರೇಷನ್ನನ್ನು ಮಾಡುತ್ತೇವೆ ಎಂದು ಹೇಳುವುದರಿಂದಲೇ ಅವರ ಬೇಡಿಕೆಗಳನ್ನೂ ಪೂರ್ಣವಾಗಿ ಪರಿಶೀಲಿಸಬೇಕು ಎನ್ನುವ ಒಂದು ಭಾವನೆ ಬೆಳೆಸಲಕ್ಕೆ ಅವಕಾಶವಾಗಿವೆ. ಕೆಲವು ಸಮಯದಲ್ಲಿ ವಿದ್ಯಾರ್ಥಿಗಳು ಅವರಿಗೆ ಬೇಕಾದ ಸೌಕರ್ಯಗಳಲ್ಲಿ ಎಂದು ಹೇಳಿದಾಗ ಆರ್ಡಿನೆನ್ಸುಗಳನ್ನು ಕೂಡ (issue) ಜಾರಿ ಮಾಡಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆ ಎಂದರೆ, ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿಗಳು ಮನಸ್ಸಿಯಾದಂತೆ ಕಾನೂನುಗಳನ್ನು ಮಾಡುವುದು, ರೂಲ್ಸುಗಳನ್ನೂ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ನನ್ನ ಭಾವನೆ. ಇದು ಹೋಗಬೇಕಾದರೆ ನಾವು ಕೈಗೊಂಡ ತೀರ್ಮಾನವನ್ನು ಖಂಡಿತ ಬದಲಾಯಿಸಬಾರದು.

ಹಾಗೇ ಈ ಶುಲ್ಕಗಳನ್ನು ಪುನರ್ವಿಮರ್ಶಿಸುವ ವಿಚಾರದಲ್ಲಿ ಖಚಿತವಾದ ಅಭಿಪ್ರಾಯಗಳನ್ನು ತಿಳಿಸಿ ಹೆಚ್ಚಿಸುವುದಾಗಿದ್ದರೆ, ಹೆಚ್ಚಿಸಬಹುದು, ಮತ್ತು ಹಾಗೆ ಹೆಚ್ಚಿಸಲು ನಿರ್ದಿಷ್ಟವಾದ ಕಾರಣವಿದ್ದರೆ ಅದನ್ನು ಹೆಚ್ಚಿಸಬೇಕು. ಇದರಿಂದ ಹುಡುಗರು ಸ್ಟ್ರೈಕನ್ನು ಮಾಡುತ್ತಾರೆ ಎಂದು ಇದಕ್ಕೆ yield ಆಗುವುದು ಸರಿಯಲ್ಲ. ಹೆಚ್ಚಿಸಬೇಕಾಗಿಲ್ಲ, ಸೆಗೆದುಹಾಕಿ ಎನ್ನುವ ಕೇಳಿಕೆಗಳಿಗೆ ಕಿವಿಗೊಡದೆ ಯಾವಕಾರಣದಿಂದಲೂ ಬದಲಾಯಿಸಕೂಡದು ಎನ್ನುವ ಒಂದು ಖಚಿತವಾದ ಅಭಿಪ್ರಾಯಕ್ಕೆ ಬರಬೇಕು.

ನಾವು ಡೆಮಾಕ್ರೆಸಿಯನ್ನು ನಂಬಿರುವವರು. ಪ್ರಜಾನತ್ವಾತ್ಮಕವಾದ ರೀತಿಯಲ್ಲೇ ಹೇಳುತ್ತಿದ್ದೇನೆ. ಈಗ ಮತ್ತೆ ಈ ವಿದ್ಯಾಸೌಲಭ್ಯಗಳನ್ನು ಕೊಡುವ ವಿಚಾರದಲ್ಲಿ ಹರಿಜನರಿಗೆ ಒಂದು ವಿಶೇಷವಾದ ರಿಯಾಯಿತಿಯನ್ನು ತೋರಿಸಿದ್ದೀರಿ. ಅದು ನಮ್ಮ ರಾಜ್ಯಾಂಗದ ಪ್ರಕಾರ ನಡೆಯುತ್ತಿದೆ. ರಾಜ್ಯಾಂಗದ ಪ್ರಕಾರ ನ್ಯಾಯವಾಗಿ ಅವರಿಗೆ ಸಹಾಯ ಸಿಕ್ಕಬೇಕು. ಹಾಗೆ ದೊರೆಯಬೇಕಾದದ್ದು ನ್ಯಾಯ. ಆದರೆ ಮತಾಂತರ ಹೊಂದಿದವರಿಗೂ ಈ ರೀತಿಯಾಗಿ ದೊರೆಯಬೇಕು ಎಂದು ಸರ್ಕಾರ ಮಾಡುತ್ತಿದೆ ಎಂದು ತಿಳಿದಿದೆ. ನನ್ನಮಟ್ಟಿಗೆ ಹೇಳುವುದಾದರೆ ಇದು ಸರಿಹೋಗುವುದಿಲ್ಲ. ಹಿಂದುಳಿದವರೆಲ್ಲ

(ಶ್ರೀ ಕೆ. ಎಸ್. ನೂರ್ಯನಾರಾಯಣರಾವ್)

ರಿಗೂ ಕೊಡುತ್ತೇವೆಂದು ಹೇಳಿದರೆ ನಾನು ಅರ್ಥ ಮಾಡಿಕೊಳ್ಳಬಹುದು. ಈಗ ನಾನು ಅರ್ಥಮಾಡಿಕೊಂಡಿರುವಹಾಗೆ 'ಮತಾಂತರಹೊಂದಿದ ಕ್ರಿಶ್ಚಿಯನ್ನಿರಿಗೆ ಮಾತ್ರ ಎಂದು ಹೇಳುತ್ತಿದ್ದಾರೆ. ಹೀಗೆ ಬೇರೆ ಹಿಂದುಳಿದ ಮುಸ್ಲಿಮರಿಲ್ಲವೇನು? ಬುದ್ಧಿಸ್ಟ್‌ಗಳು ಇಲ್ಲವೇನು ಮತ್ತು ಇತರ ಕೋಮಿಗೆ ಏಕೆ ಅವಕಾಶ ಕೊಡಬಾರದು? ಈಗ ಹರಿಜನರಿಗೇ ಎಂದು ನಿಗದಿಯಾಗಿರುವ ವಿಚಾರದಲ್ಲಿ ಹರಿಜನರಿಗೇ ಕೊಡಲಿ. ಅದಿಲ್ಲದಿದ್ದರೆ ಎಲ್ಲರಿಗೂ ಒಂದೇ ಸಮಾನವಾದ ದೃಷ್ಟಿಯಿಂದ ಹಿಂದುಳಿದವರೆಲ್ಲರಿಗೂ ಕೊಡಿ. ಎಲ್ಲರನ್ನೂ ಒಂದೇ ರೀತಿಯಾಗಿ ನೋಡಿಕೊಳ್ಳದೆ ಈ ಹರಿಜನರಲ್ಲದೆ ಹೋದ ಇತರರಿಗೂ ಈ ಸೌಲಭ್ಯಗಳನ್ನು ಒದಗಿಸುವುದು ಒಂದು ರೀತಿಯಾದ ಭೇದಭಾವ ಬೆಳೆಯಲು ಅವಕಾಶ ವಾಗುತ್ತದೆ. ಇದು ಕಾನೂನು ದೃಷ್ಟಿಯಿಂದ ತಪ್ಪಾಗುತ್ತದೆ ಎಂದು ನನ್ನ ಭಾವನೆ.

ಈ ವಿದ್ಯಾಖಾತೆಯ ವಿಚಾರವಾಗಿ ಮಾತನಾಡುತ್ತ ವಯಸ್ಕರ ಶಿಕ್ಷಣ ಸಮಿತಿಯ ವಿಚಾರವನ್ನು ಹೇಳಬೇಕಾಗಿದೆ. ಇದರ ವಿಚಾರವನ್ನು ಹೇಳುವುದಕ್ಕೆ ಮುಂಚಿತವಾಗಿ ಒಂದು ವಿಷಯವನ್ನು ಹೇಳಬೇಕಾಗಿದೆ. ಹಿಂದೆ ಹುಡುಗರ Discipline ವಿಚಾರವಾಗಿ ಹೇಳಿದ್ದೆ. ಈ ವಿಚಾರ ಹೇಳಿರಲಿಲ್ಲ. ನಮ್ಮ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುವಾಗ ಶಿಸ್ತಿನಿಂದ ಇರಬೇಕೆಂದು ಕೆಲವು ಸದಸ್ಯರು ಸೂಚನೆ ಕೊಡುತ್ತ Scout Movement ಸೇವಾದಳ, ಇವುಗಳಲ್ಲಿ ತರಬೇತಿ ಕೊಡಬೇಕು. ಹಾಗೆಯೆ ಎಲ್ಲಕಡೆಗಳಲ್ಲಿಯೂ N.C.C. ಮತ್ತು A.C.C. ಯನ್ನು ಬೆಳೆಸಬೇಕು. ಈ ರೀತಿ ಮಾಡಿದರೆ ಹುಡುಗರಲ್ಲಿ ಒಂದು ಶಿಸ್ತು ಚೆನ್ನಾಗಿ ಬೆಳೆಯಲಿಕ್ಕೆ ಅವಕಾಶವಾಗುತ್ತದೆ. ಇದಕ್ಕಾಗಿ Residential Institutions ಹೆಚ್ಚಾಗ ಬೇಕು. ಅಲ್ಲಿ ಈ ಶಿಸ್ತನ್ನು ಬೆಳಸಲಿಕ್ಕೆ ಹೆಚ್ಚಿನ ಅವಕಾಶವಾಗುತ್ತದೆ. ಇದಕ್ಕಾಗಿ ಸ್ವಲ್ಪ ಹೆಚ್ಚಿನ ಹಣ ಬೇಕೆಂದು ಕೇಳಿದರೆ ನಮ್ಮ ಸರಕಾರ ಸ್ವಲ್ಪ ಹೆಚ್ಚಿನ ಹಣ ಕೊಟ್ಟರೂ ತಪ್ಪಾಗುವುದಿಲ್ಲ. ಈ ದೃಷ್ಟಿಯಿಂದ ಇಂತಹ ಸಂಸ್ಥೆಗಳನ್ನು ಬೆಳೆಸಬೇಕು. ಇದಕ್ಕಾಗಿ ಎಷ್ಟು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಲಾಗುವುದೋ ಅದನ್ನು ಪೂರ್ಣವಾಗಿ ವಿನಿಯೋಗ ಮಾಡಬೇಕು.

ಇನ್ನು ಮೈಸೂರಿನಲ್ಲಿರುವ ವಯಸ್ಕರ ಶಿಕ್ಷಣ ಸಮಿತಿ ವಿಚಾರವಾಗಿ ಒಂದು ಮಾತು ಹೇಳಿ ಈ ನನ್ನ ಭಾಷಣವನ್ನು ಮುಗಿಸುತ್ತೇನೆ.

ಈ ವಯಸ್ಕರ ಶಿಕ್ಷಣ ಸಮಿತಿಯು ಸುಮಾರು ಹತ್ತು ಹನ್ನೆರಡು ವರ್ಷಗಳಿಂದಲೂ ಕೆಲಸಮಾಡುತ್ತ ಬಂದಿದೆ. ಇದು ಎಷ್ಟರಮಟ್ಟಿಗೆ ಕೆಲಸಮಾಡುತ್ತಿದೆ ಎಂದರೆ, ಪ್ರಪಂಚದಲ್ಲೆಲ್ಲ ಇದು ಒಂದು ಉತ್ತಮ ಸ್ಥಾನವನ್ನು ಗಳಿಸಿದೆ. ಪ್ರಪಂಚದಲ್ಲೆಲ್ಲ ಇಂಡಿಯಾ ದೇಶ ಹೇಗೆ ಮುಖ್ಯವಾದ ದೇಶವಾಗಿದೆಯೋ ಅದರ ಹಾಗೆ ಈ ಶಿಕ್ಷಣದ ಕ್ಷೇತ್ರದಲ್ಲಿ ಈ ಮೈಸೂರಿನಲ್ಲಿರುವ ವಯಸ್ಕರ ಶಿಕ್ಷಣ ಸಮಿತಿಯು ಪ್ರಪಂಚದಲ್ಲೆಲ್ಲ ಒಂದು ಉತ್ತಮವಾದ ಸ್ಥಾನವನ್ನು ಗಳಿಸಿದೆ ಎಂದು ನಾನು ಈ ಸಭೆಯಲ್ಲಿ ಹೇಳಬಯಸುತ್ತೇನೆ. ಹೊರ ದೇಶಗಳಿಂದ ನಮ್ಮ ದೇಶಕ್ಕೆ ಬಂದಿದ್ದ ಅನೇಕ ತಜ್ಞರು ನಮ್ಮ ಈ ಸಂಸ್ಥೆಯ ಕಾರ್ಯಕಲಾಪಗಳನ್ನು ನೋಡದೆ ಹೋಗದೇ ಇರತಕ್ಕವರೇ ಇಲ್ಲ. ನಮ್ಮ ಕಾರ್ಯಕಲಾಪಗಳನ್ನು ನೋಡಿ ಪ್ರಪಂಚ ಸಂಸ್ಥೆಯವರು ಒಂದು ತಜ್ಞರ ಸಮಿತಿಯನ್ನು ನೇಮಿಸಿದಾಗ ನಮ್ಮ ಈ ಸಮಿತಿಯ ಅಧ್ಯಕ್ಷರಿಗೆ ಒಂದು ಸ್ಥಾನವನ್ನು ಕೊಟ್ಟಿರುವುದು ಬಹಳ ವಿಶೇಷದ ಸಂಗತಿ. ಇಂಡಿಯಾ ದೇಶದಲ್ಲಿ ಮತ್ತು ಇತರ ಎಲ್ಲ ದೇಶಗಳ ಇತರ ಸಂಸ್ಥೆಗಳೂ ಕೆಲಸಮಾಡುವಂತೆ ಯುನೆಸ್ಕೋ ಮಾಡಿದ ಕೆಲಸಕಾರ್ಯಗಳನ್ನು ಮಾಡುವಾಗ ಮತ್ತು ಈ ಎಜುಕೇಷನ್ನಿನ ನರ್ವೆ ಮಾಡುವ ಕೆಲಸದಲ್ಲಿ ನಮ್ಮ ಈ ಸಮಿತಿಯವರನ್ನು ಇಂಡಿಯಾದೇಶದ ಪ್ರತಿನಿಧಿಗಳಾಗಿ ಆರಿಸಿಕೊಂಡು ಬಂದರು, ಇಲ್ಲಿಯೂ ಇವರು ಬಹಳ ಚೆನ್ನಾಗಿ ಕೆಲಸಮಾಡಿದ್ದಾರೆ. ಮತ್ತು ಇಂಡಿಯಾ ಸರಕಾರದವರು ನೇಮಿಸಿದಂತಹ ಲೈಬ್ರರಿ ಸಮಿತಿಯಲ್ಲಿಯೂ ಈ ಸಮಿತಿಯವರು ಕೆಲಸಮಾಡಿ ಒಂದು ಶುದ್ಧವಾದ ವರದಿಯನ್ನು ಸಲ್ಲಿಸಿದ್ದಾರೆ. ಈ ಸಮಿತಿಯಲ್ಲಿ ಕೆಲಸಮಾಡುವ ಸೌಭಾಗ್ಯ ನಮ್ಮವರಿಗೊಬ್ಬರಿಗೂ ದೊರಕಿತ್ತು. ಅವರು ಹೇಳಿರುವುದನ್ನು ಹೇಳುವುದಾದರೆ ಸರಕಾರದವರು ಕೊಟ್ಟ ಹಣವನ್ನು ಪೂರ್ಣವಾಗಿ ವಿನಿಯೋಗಿಸಿ ಇನ್ನೂ ಹೆಚ್ಚಿನ ಹಣವನ್ನು ಬೇಡುತ್ತಿದ್ದೇವೆ. ಮೈಸೂರು ಸರಕಾರದವರು ಕೊಡತಕ್ಕ ನಾಲ್ಕು ಲಕ್ಷ ಚಿಲ್ಲರೆ ಹಣದ ಜೊತೆಗೆ ನಮಗೆ ಇಂಡಿಯಾ ಸರಕಾರದಿಂದ United Nations Agencyಯವರ ಮೂಲಕ ಇಪ್ಪೇ ಮೊತ್ತದ ಹಣ ಬರುವಂತೆ ಮಾಡಿದ್ದಾರೆ.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಇಷ್ಟು ಹಣವನ್ನು ಖರ್ಚುಮಾಡುತ್ತಿದ್ದರೂ ಇದಕ್ಕೆ ದೊರೆತಿರುವ ಪ್ರತಿಫಲವೇನು ಎನ್ನುವುದನ್ನು ಹೇಳಬಲ್ಲರಾ?

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಪ್ರತಿಫಲವೇನು ಎನ್ನುವುದಕ್ಕೆ ವಿಶ್ವಸಂಸ್ಥೆಯ ರಿಪೋರ್ಟ್‌ಗಳನ್ನು ನೋಡಿದರೆ ಗೊತ್ತಾಗುತ್ತದೆ. ಹಿತ್ತಲಗಿಡ ಮದ್ದಲ್ಲವೆನ್ನುವಂತೆ ಇದೆ ಇವರು ಹೇಳುವುದು. ಮಾನ್ಯ ಪುಟ್ಟಣ್ಣನವರ ವಿಷಯ ಅವರ ಪಕ್ಕದಲ್ಲಿರುವವರಿಗೆ ಗೊತ್ತಿರುವುದಿಲ್ಲ. ಆದರೆ ದೂರದಲ್ಲಿರುವವರು ಅವರನ್ನು ಪ್ರಭಾವಶಾಲಿಗಳೆಂದು ಹೇಳುತ್ತಾರೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಸಂಸ್ಥೆಯ ಅಧ್ಯಕ್ಷರಾಗಿ ತಮ್ಮ ಅಭಿಪ್ರಾಯ ಕೇಳುತ್ತಿಲ್ಲ. ಸಂಸ್ಥಾನದ ಪ್ರಜೆಗಳ ಪರವಾಗಿ ಹೇಳಿಬೇಕು ಎಂದು ಕೇಳುತ್ತೇನೆ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಯಾವ ಸಂಸ್ಥೆಯಾದರೂ ಕೂಡ ಅಲ್ಪಸ್ವಲ್ಪ ದೋಷ ದೋಷಗಳಿಲ್ಲದೆ ಇರುವುದಿಲ್ಲ. ಅದನ್ನು ತಿದ್ದಿಕೊಳ್ಳತಕ್ಕ ಕರ್ತವ್ಯ ನಮ್ಮದು. ತಿದ್ದಿಕೊಳ್ಳುವುದಕ್ಕೆ ಪ್ರಯತ್ನಪಡಬೇಕು. ಇಲ್ಲಿರತಕ್ಕ 208 ಜನ ಸದಸ್ಯರೂ ಕೂಡ ಆ ಸಮಿತಿಯ ಸದಸ್ಯರೇ ಇದ್ದಾರೆ. ತಮ್ಮ ಸಹಕಾರವಿದೆ, ತಮ್ಮ ಸಲಹೆಗಳೂ ಇದೆ. ಅದರಂತೆ ತಿದ್ದಿಕೊಳ್ಳೋಣ. ಮಾನ್ಯ ಸ್ನೇಹಿತರಾದ ಮಲ್ಲಾರಾಧ್ಯರಿಗೆ ಆ ವಿಚಾರ ಗೊತ್ತು. ಅವರಿಗೂ ನಮಗೂ ಬೇಕಾದಷ್ಟು ವ್ಯವಹಾರಗಳು ನಡೆದಿವೆ. ನಮ್ಮ ಸಂಸ್ಥಾನದಲ್ಲಿ ಸರ್ಕಾರದವರ ನೇತೃತ್ವದಲ್ಲಿ ನಡೆಯುತಕ್ಕ ಇಂಥ ಸಂಸ್ಥೆ ಜನರ ಕೈಯಲ್ಲಿರಬೇಕು ಎಂದು ಈ ಸಭೆಯಲ್ಲಿ ಒತ್ತಾಯಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಡಾ॥ ಬಿ. ಕೆ. ನಾಗೂರ್ (ಬಿಜಾಪುರ).—ಈ ತಿಂಗಳು 22ನೆಯ ತಾರೀಖು ಬಸವಜಯಂತಿ. ಬೇರೆ ಬೇರೆ ಭಾಗಗಳಿಂದ ನನಗೆ ಕಾಗದಗಳು ಬರುತ್ತಿವೆ. ಸರ್ಕಾರದವರು ಆ ದಿನ ರಜಾದಿನವೆಂದು ಮಾಡಬೇಕು ಎಂದು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನೀವೂ ಬರೆದು ಕೊಡಿ.

*ಶ್ರೀಮತಿ ಕೆ. ಎನ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಈ ವಿದ್ಯಾಭ್ಯಾಸದ ಬೇಡಿಕೆಯ ಮೇಲೆ ಮಾತನಾಡುವಾಗ ಇದಕ್ಕಾಗಿ ಹತ್ತು ಕೋಟಿ ರೂಪಾಯಿ ಖರ್ಚುಮಾಡುವುದು ಸರಿಯೇ, ನ್ಯಾಯವಾಗಿ ಈ ಹಣವನ್ನು ಖರ್ಚುಮಾಡುತ್ತಾರೆಯೇ ಅದು ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿದೆಯೇ ಎಂದು ತಮ್ಮ ಮುಖೇನ ಸರ್ಕಾರದವರನ್ನು ಕೇಳಬೇಕೆಂದು ನಾಲ್ಕು ಮಾತುಗಳನ್ನು ಆಡುತ್ತಿದ್ದೇನೆ. ಮೊದಲನೆಯದಾಗಿ ಹೋದವರ್ಷದ ಬಡ್ಜೆಟ್ ಅಧಿವೇಶನದಲ್ಲಿ ಮೈಸೂರು ಮಹಾರಾಣಿ ಕಾಲೇಜು ವಿಚಾರವಾಗಿ ಮತ್ತು ಅಥರ ಹಾಸ್ಟಲು ವಿಚಾರವಾಗಿ ನಮ್ಮಾರು ಅರ್ಧಗಂಟೆಕಾಲ ಮಾತನಾಡಿ ಅಲ್ಲಿನ ವ್ಯಸನಕರವಾದ ಪರಿಸ್ಥಿತಿಯನ್ನೆಲ್ಲ ವಿವರಿಸಿದಮೇಲೆ, ಚಿತ್ರಣ ಮಾಡಿದಮೇಲೆ ನಮ್ಮ ವಿದ್ಯಾ ಸಚಿವರು ಅಲ್ಲಿನ ಎಲ್ಲ ಸಂಗತಿ ಅವರ ಅವಗಾಹನೆಗೆ ಬಂದಿದೆ, ಅದನ್ನು ಕೂಡಲೇ ವಿಚಾರಮಾಡಿ ನಿಗಾ ಕೊಡುತ್ತೇವೆ ಎಂದು ಹೇಳಿದರು. ಆದರೆ ಈಗ ನನ್ನ ಒಂದೂವರೆ ವರ್ಷದ ಈ ಸಭೆಯಲ್ಲಿನ ಅನುಭವದ ಪ್ರಕಾರ ಬಹುಶಃ ನಾವು ಮಾಡಿದ ಭಾಷಣ, ನಾವು ಹೇಳುವ ಸಲಹೆ, ಮತ್ತು ನಾವು ಕೇಳಿಕೊಳ್ಳುವ ವಿನಂತಿ ಇವೆಲ್ಲವೂ ಪಾರನೆಯ ದಿವಸ ವೃತ್ತಪತ್ರಿಕೆಗಳಲ್ಲಿ ನಮ್ಮ ಭಾಷಣ ಬಂದಿದೆಯೇ ಎಂದು ನೋಡಿ ಓದಿಕೊಳ್ಳುವ ಸಲುವಾಗಿಯೇ ಹೊರತು ಮಂತ್ರಿಗಳಿಗೆ ಮತ್ತು ಸರ್ಕಾರಿ ಅಧಿಕಾರಿಗಳಿಗಲ್ಲವೆಂದು ನನಗೆ ಚೆನ್ನಾಗಿ ಗೊತ್ತಾಗುತ್ತದೆ. ಸರ್ಕಾರಕ್ಕೇನಾದರೂ ಲವಲೇಶವಾದರೂ ಸದಸ್ಯರು ಕೊಡುವ ಸಲಹೆಗಳನ್ನು ಅವರ ವಿನಂತಿಗಳನ್ನು ನಡೆಸಬೇಕು ಎನ್ನುವ ಪುನೋಭಾವ ವಿದ್ದರೆ, ತಮ್ಮ ಆರ್ಡರ್‌ಗಳು ಎಷ್ಟುಮಟ್ಟಿಗೆ execute ಆಗುತ್ತಿವೆ ಎನ್ನುವುದನ್ನು ಖಂಡಿತ ಪರಿಶೀಲನೆ ಮಾಡಿಕೊಳ್ಳುತ್ತಿದ್ದರು. ಮಹಾರಾಣಿ ಕಾಲೇಜಿನ ಎಸ್ಟಿ ಮೇರ್ಷ ಮೂರುತಿಂಗಳ ಹಿಂದೆ ರಿಜಿಸ್ಟ್ರಾರ್ ಅವರ ಆಫೀಸಿಗೆ ಹೋದದ್ದು ಅವರು ಒಂದು ರಾಜು ವಿಗೋಸ್ಕರ ಮೂರು ತಿಂಗಳಿನಿಂದಲೂ ಅಲ್ಲೇ ಬಿದ್ದಿದೆ; ಇನ್ನೂ ಬಂದಿಲ್ಲ. ಅದೇ ರೀತಿ ಮಹಾರಾಣಿ ಕಾಲೇಜ್ ಹಾಸ್ಟಲಿನ ಚೆಂದರುಗಳು ಚೀಫ್ ಇಂಜಿನಿಯರ ಆಫೀಸಿಗೆ ಕಳೆದ ಡಿಸೆಂಬರ್ ತಿಂಗಳಿನಲ್ಲಿ ಬಂದದ್ದು ಇನ್ನೂ ರಾಜುವಾಗಿ ವಾಪಸು ಹೋಗಿಲ್ಲ. ನಮ್ಮ ಸರ್ಕಾರ ಎಷ್ಟು ಜಾಗರೂಕತೆಯಿಂದ ಕೆಲಸ ಮಾಡುತ್ತಿದೆ ಎನ್ನುವ ವಿಚಾರ ಇದರಿಂದ ಅರ್ಥವಾಗುತ್ತದೆ. ಮಾತೆತ್ತಿದರೆ University syndicate is an autonomous body ಎಂದು ಹೇಳುತ್ತಾರೆ. ಹೆಂಗಸರ ವಿಚಾರವಾಗಿ ಏನೇನು ನಡೆಯುತ್ತಿದೆ, ಹೆಣ್ಣುಮಕ್ಕಳ ಕಾಲೇಜುಗಳಿಗೆ ಎಷ್ಟು ಗಮನ ಕೊಡುತ್ತಿದ್ದಾರೆ, ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕೆಂಬ ಅರಿವು ಇವರಿಗೇನಾದರೂ ಇದೆಯೇ! ಎಷ್ಟು ದಿವಸಗಳಿಂದ ಕೇಳುತ್ತಾ ಇದ್ದರೂ ಅಲ್ಲಿಗೆ laboratory equipment ಏನಾದರೂ ಓದಗಿಸಿದ್ದಾರೆಯೇ! ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ ನವರು advanced coursesಗೆ ಟೆಕ್ನಿಕಲ್ ಕಾಲೇಜುಗಳಿಗೆ ಬೇಕಾದ ಸಹಾಯ ಮಾಡುತ್ತಿದ್ದಾರೆ. ನಮ್ಮ ಸರ್ಕಾರದವರು Home Science ವಿಭಾಗಕ್ಕೆ ಬೇಕಾದ ಸಲಕರಣೆಗಳಿಗೆ ಸಹಾಯ ಮಾಡಿದ್ದರೆ ಜೀವ ವೆಂದು ಹೇಳುತ್ತಾರೆಯೇ! ಇಂಥವೆಲ್ಲ ಏಕೆ ಇವರ ನಿಗಾಕ್ಕೆ ಬರುವುವಿಲ್ಲ! ಯಾವ ಕೆಲಸವನ್ನು ಮಾಡಬೇಕಾದರೂ ಯೂನಿವರ್ಸಿಟಿ ಅಟಾನಮಸ್ ಬಾಡಿ ಎಂದು ಹೇಳುತ್ತಾರೆ. Home Science ವಿಭಾಗದಲ್ಲಿ ಟ್ರೈನಿಂಗ್ ಕೊಡುವ ಸಲುವಾಗಿ ಇಲ್ಲಿಂದ ಒಬ್ಬರನ್ನು ಅಮೆರಿಕಾಕ್ಕೆ ಕಳುಹಿಸಿದರು. ಅವರು ಅಲ್ಲಿಂದ ವಾಪಸು ಬಂದಮೇಲೆ ಹೈಸ್ಕೂಲ್ ಹೆಡ್ ಮಿಸ್ಟ್ರೆಸ್ ಆಗಿ ಹಾಕಿದರು. ಸರ್ಕಾರದವರ ರೀತಿನೀತಿಯೇ ಅರ್ಥವಾಗುವುದಿಲ್ಲ. ಈ ರೀತಿ ಹೆಣ್ಣುಮಕ್ಕಳ ವಿಷಯದಲ್ಲಿ ಅನಾದರಣೆ ಮಾಡುತ್ತಿರುವುದನ್ನು ನೋಡಿ ಸಂಕಟವಾಗುತ್ತದೆ. ಸಿಂಡಿಕೇಟಿನಲ್ಲಿ ಒಬ್ಬರನ್ನಾದರೂ ಸದಸ್ಯರನ್ನಾಗಿ ಮಾಡಬೇಕಾಗಿತ್ತು. ಇದರಿಂದ ಏನು ನಷ್ಟವಾಗುತ್ತಿತ್ತು? ಯಾವ ಇಲಾಖೆಗೆ ಹೋದರೂ, ಎಲ್ಲಿಗೆ ಹೋದರೂನಹ ಹೆಂಗಸರಿಗೆ ದೊಡ್ಡ ಗಂಡಾಂತರವಿದೆ.

ಹೆಣ್ಣುಮಕ್ಕಳು ಒಂದು ನರ್ಸರಿ ಸ್ಕೂಲನ್ನು ನಡೆಸಬೇಕಾದರೆ ಅವರಿಗೆ ಕಷ್ಟವಿದೆ, ಕಾಲೇಜು ನಡೆಸಬೇಕಾದರೆ ಅವರಿಗೆ ಕಷ್ಟವಿದೆ, ಯಾವ ಸಂಸ್ಥೆಯನ್ನು ನಡೆಸಬೇಕಾದರೂ ಕಷ್ಟವಿದೆ. ಇದಕ್ಕೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಮೈಸೂರಿನಲ್ಲಿ ಮಾತ್ರ ಮುಂಡಲ ನರ್ಸರಿಶಾಲೆ 22-23 ವರ್ಷಗಳಿಂದ ಇದೆ. ನರ್ಸರಿ ಸ್ಕೂಲು ಮೊದಲು ಪ್ರಾರಂಭವಾಗಿ ಈಗ ಅದರ ಜೊತೆಗೆ ಪ್ರೈಮರಿಸ್ಕೂಲು ಮತ್ತು ಮಿಡಲ್‌ಸ್ಕೂಲು, ಈ ಮೂರನ್ನೂ ಸಹ ನಡೆಸುತ್ತಿದ್ದಾರೆ. ಮೈಸೂರು ಮುನಿಸಿಪಾಲಿಟಿಯವರು ನೂರು ರೂಪಾಯಿಗಳ ಗ್ರ್ಯಾಂಟ್ ಕೊಡುತ್ತಿದ್ದಾರೆ. ಸರ್ಕಾರದಿಂದ ಮೂರು ದುಡ್ಡು ಸಹ ಸಹಾಯವಿಲ್ಲ. 1953ನೆಯ ಇಸವಿಯಲ್ಲಿ ನಮ್ಮಿಂದ ಈ ಶಾಲೆಗಳನ್ನು ನಡೆಸುವುದಕ್ಕಾಗುವುದಿಲ್ಲ. ಪೂರೈಸುವುದಕ್ಕಾಗುವುದಿಲ್ಲವೆಂದು ಅರ್ಜಿ ಹಾಕಿಕೊಂಡು procedure ಪ್ರಕಾರ D.E.O.ಗೆ apply ಮಾಡಿದೆವು. ಶಿಫಾರಸುಮಾಡಿ ಎಂದು ಕೇಳಿದೆವು. ಎಷ್ಟು ಕಾಗದಗಳನ್ನು ಬರೆದರೂ ಅವರು ಬಂದು ಶಾಲೆಯನ್ನು ನೋಡಲಲ್ಲ. ಈಗ್ಗೆ ಏಳೆಂಟು ತಿಂಗಳಹಿಂದೆ ಹಣಕಾಸಿನ ಮಂತ್ರಿಗಳು ಮೈಸೂರಿಗೆ ಬಂದಿದ್ದರು. ಅವರಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಲಾಗಿ, ಇಂಥ ಸಂಸ್ಥೆಗೆ ಸಹಾಯ ಮಾಡದೆ ಇದ್ದರೆ ಹೇಗೆ, ಬೇಕಾದಷ್ಟು ಮಾಡುತ್ತೇವೆ, ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ, ನೀವು ಸಹಾಯಕ್ಕೆ ಕೇಳಿ ಎಂದು ಹೇಳಿದರು. ಇಷ್ಟು ದೊಡ್ಡ ಭಾಷಣವನ್ನು ಕೇಳಿ ನಿಜವಾಗಿಯೂ ನಮಗೆ ಗ್ರ್ಯಾಂಟ್ ಬಂತು ಎಂದು ಭಾವಿಸಿ ನಾವು ಕಾಗದ ಬರೆದೆವು. ಅದಕ್ಕೆ D.E.O. ಶಿಫಾರಸು ಮಾಡಬೇಕಾಗಿತ್ತು. ಅವರಿಗೆ ಕಾಗದ ಬರೆದು ಶಿಫಾರಸು ಮಾಡಬೇಕೆಂದು ಕೇಳಿದರೆ ಪಾಪ ಹೆಂಗಸರು ಎಂದೋ ಏನೋ ಅಲ್ಲದ್ದ ಗುಮಾನ್ತರು ಅವರ ಕೈಗೆ ಕಾಗದವನ್ನೇ ಮುಟ್ಟಿನುತ್ತಿರಲಲ್ಲ. ಕೊನೆಗೆ ನಾನು D.E.O.ಗೆ ಫೋನ್ ಮಾಡಿದೆ. ಅವರು ಒಡನೆಯೇ ಬಂದು ಸ್ಕೂಲನ್ನು ನೋಡಿ ಶಿಫಾರ್ಸುಮಾಡಿ recognitionಗೆ ಕಳಿಸಿದರು. ರೆಕಗ್ನಿಷನ್ ಕೊಡಬೇಕೆಂದು D.D.P.I. ರವರನ್ನು ಕೇಳಿದ್ದಕ್ಕೆ ಅವರು ಒಂದು ವರ್ಷಕ್ಕೆ temporary recognition ಕೊಟ್ಟು ಅದರಮೇಲೆ ಎಲ್ಲ ಬಂದು ಬಿಡುತ್ತದೆ, ಗ್ರ್ಯಾಂಟ್ ತೆಗೆದುಕೊಳ್ಳಿ ಎಂದು ಹೇಳಿದರು. ಹೆಂಗಸರನ್ನು ಉದ್ಧಾರ ಮಾಡುತ್ತೇವೆ, ಅವರಿಗೆ ಉತ್ತೇಜನ ಕೊಡುತ್ತೇವೆ ಎಂದು ಬಾಯಲ್ಲ ಹೇಳುತ್ತ ಮಾಡುವ ಕೆಲಸವನ್ನು ನೋಡಿದರೆ ಒಂದು ಜೊರೂ ಸಹಾಯ ಮಾಡುತ್ತಿಲ್ಲ. ಚೆಂಪೂರರಿ ರೆಕಗ್ನಿಷನ್ ತೆಗೆದುಕೊಂಡು, ಕಾಗದ ಪತ್ರಗಳನ್ನೆಲ್ಲ ತೆಗೆದುಕೊಂಡು D.P.I. ಅವರ ಆಫೀಸಿಗೆ ಬಂದರೆ ಅವರು ಊರಿನಲ್ಲೂರಲಲ್ಲ. D.D.P.I. ರವರು ಎಲ್ಲ ಪರೀಕ್ಷೆಮಾಡಿ, ಪ್ರತಿಯೊಂದಕ್ಕೂ D.E.O. counter-sign ಮಾಡಿದ್ದಾರೆ, ಬೇಕಾದ ರಿಪೋರ್ಟು ಎಲ್ಲ ಇದೆ,

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

case work out ಮಾಡಿ, ಸ್ಯಾಂಕ್ಷನ್ ಆಗಬೇಕು ಎಂದು ಹೇಳಿದರು. ಅಲ್ಲಿ ಮಹಾನುಭಾವರು ಯಾರೋ ಒಬ್ಬರು ಅಕೌಂಟ್ಸ್ ಇಲಾಖೆಯವರು ಅವರು ಎಲ್ಲಿದ್ದರೋ, ಏನು ದುರ್ಬುದ್ಧಿ ಬಂತೋ, 'No Sir, I cannot sign this, ಇದು printed form ನಲ್ಲಿಲ್ಲ, ಟೈಪ್ ಮಾಡಿದ ಫಾರಂನಲ್ಲಿದೆ, ಇದನ್ನು ಪಾಸ್ ಮಾಡುವುದಕ್ಕಾಗುವುದಿಲ್ಲ' ಎಂದು ಹೇಳಿದರು. ನಮ್ಮ ಸಂಸ್ಥೆಯ ಸೆಕ್ರೆಟರಿಯವರು ಆಗ ಅಲ್ಲೇ ಇದ್ದರು. ನಾನು ಹೇಳುತ್ತಿರುವುದು ನಿಜವಾಗಿಯೂ ಬಹಳ ಸ್ವಲ್ಪ. ಅಲ್ಲಿ ನಡೆದುದನ್ನು ಕೇಳಿದರೆ ಒಂದು ಪುಸ್ತಕವೇ ಆಗಬಹುದು. ಅದನ್ನೆಲ್ಲ ಹೇಳಬಹುದೋ ಇಲ್ಲವೋ ಗೊತ್ತಿಲ್ಲ. ನಮ್ಮ ಸಂಸ್ಥೆಯ ಸೆಕ್ರೆಟರಿಯವರು ಅಲ್ಲಿ ಕುಳಿತಿದ್ದಾಗ, ಆಕೆಗೆ ಕನ್ನಡ ಅರ್ಥವಾಗುವುದಿಲ್ಲವೆಂದು ಕನ್ನಡದಲ್ಲಿ ಮಾತಾಡಿಕೊಂಡರಂತೆ. ಇದೊಂದು ದೆವ್ವ ಬಂದು ಕುಳಿತುಕೊಂಡಿದೆ, 'ಇದರಲ್ಲಿ ನಮಗೆ percentage ಹೋಯ್ತು, ಗ್ರಾಂಟ್ ಬರ್ ಇಷ್ಟು ನುಲಭದಲ್ಲಾದರೆ ಹೇಗೆ?' ಎಂಬುದಾಗಿ ಏನೇನೋ ಮಾತನಾಡಿಕೊಂಡರಂತೆ. D.P.I. ಆಫೀಸಿನಲ್ಲಿರುವ ಅಕೌಂಟ್ಸ್ ಇಲಾಖೆಯವರು ತಾವು ಡೈರೆಕ್ಟರ ಅಧೀನದಲ್ಲಲ್ಲ, ಕಂಟ್ರೋಲರ ಅಧೀನದಲ್ಲಿದ್ದೇವೆ, ಏನು ಮಾಡಿದರೂ ನಡೆಯುತ್ತದೆ ಎಂದು ತಿಳಿದುಕೊಂಡಿದ್ದಾರೆ. ಆ ಸಂಸ್ಥೆಯ ಸೆಕ್ರೆಟರಿಯವರು ಗ್ರಾಂಟನ್ನು ಸ್ಯಾಂಕ್ಷನ್ ಮಾಡಿಸಿಕೊಂಡು ಬರುವುದಕ್ಕೆ ಮೈಸೂರಿನಿಂದ ಬೆಂಗಳೂರಿಗೆ ಬಂದು, ಒಂದು ದಿವಸ ಉಪವಾಸವಿದ್ದು ಗ್ರಾಂಟ್ ತೆಗೆದುಕೊಂಡು ಬರುವುದಕ್ಕೆ ಆಗದೆ ಎಷ್ಟೋ ಕಷ್ಟ ಪಟ್ಟರು. ಸಾವಿರ ರೂಪಾಯಿ ಸಂಬಳ ಪಡೆಯುವ ಅಧಿಕಾರಿಗಳು ಏನು ಪ್ರಯತ್ನಮಾಡಿದರೂ ಗ್ರಾಂಟ್ ಮಂಜೂರು ಮಾಡಿಸುವುದಕ್ಕೆ ಆಗಲಿಲ್ಲ. ಈ ರೀತಿಯಾದರೆ institutions ಹೇಗೆ ನಡೆಸುವುದಕ್ಕಾಗುತ್ತದೆ? ಅದರಲ್ಲಿಯೂ ಹೆಣ್ಣುಮಕ್ಕಳು ಹೇಗೆ ನಡೆಸಬೇಕು? ಇಂಥ ಇನ್‌ಸ್ಟಿಟ್ಯೂಷನ್‌ಗಳನ್ನು ನಡೆಸಿಕೊಂಡು ಬರಬೇಕೆಂದು ಸರ್ಕಾರದವರು ಬೇಡಿಕೊಳ್ಳಬೇಕು. ಇಂಥ ಇನ್‌ಸ್ಟಿಟ್ಯೂಷನ್‌ಗಳನ್ನು ಮುಚ್ಚಿದೆವೆಂದರೆ ಆ ಪಾಪವೆಲ್ಲ ಸರ್ಕಾರಕ್ಕೆ ಸೇರಿದ್ದು ಎಂದು ಹೇಳಬೇಕಾಗಿದೆ.

ದೇಶದಲ್ಲಿ ಎಲ್ಲರನ್ನೂ ಸುಲಭವಾಗಿ ವಿದ್ಯಾವಂತರನ್ನಾಗಿ ಮಾಡಿಬಿಡಬೇಕು ಎಂದು ಬಾಯಲ್ಲಿ ಹೇಳಿದ ಮಾತ್ರದಿಂದ ಅದು ಸಾಧ್ಯವಾಗುವುದಿಲ್ಲ. ಎಷ್ಟು ಜನ graduates, undergraduates ಇದ್ದಾರೆ? ಎಲ್ಲರಿಗೂ ಸಹ 50 ರೂಪಾಯಿ ಗ್ರಾಂಟ್ ಕೊಡುತ್ತೇವೆಂದರೆ ನಾಲ್ಕು ನಾಲ್ಕು ಜನ ಸೇರಿಕೊಂಡು ಒಂದು ಸ್ಕೂಲನ್ನು ಸ್ಥಾಪನೆ ಮಾಡುತ್ತಾರೆ. ಸರ್ಕಾರದವರು ಒಂದು ಸ್ಟ್ಯಾಂಡರ್ಡ್ ಇಟ್ಟುಕೊಂಡು, ಅದರ ಪ್ರಕಾರ ಸ್ಕೂಲುಗಳನ್ನು ಪ್ರಾರಂಭಮಾಡಿ ಎಂದು ಹೇಳಿ ಅವರನ್ನು guide ಮಾಡುತ್ತ ಬಂದರೆ ಸ್ಕೂಲುಗಳು ಏಕೆ ಪ್ರಾರಂಭವಾಗುವುದಿಲ್ಲ? ಗಂಡ, ಹೆಂಡತಿ, ಅಣ್ಣ ತಮಂದಿರು ಸೇರಿಕೊಂಡು ಸ್ಕೂಲುಗಳನ್ನು ಸ್ಥಾಪನೆ ಮಾಡುತ್ತಾರೆ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯವಾಗುತ್ತದೆ. ಸರ್ಕಾರದವರು ಈ ರೀತಿಯ ಒಂದು ಯೋಜನೆಯನ್ನು ತರದೆ ಇದ್ದರೆ ಈ ವರ್ಷ ಹತ್ತುಕೋಟಿ ರೂಪಾಯಿ, ಬರುವ ವರ್ಷ ಹತ್ತುಕೋಟಿ ರೂಪಾಯಿ ಹೀಗೆ ಬಡ್ಜೆಟ್ಟಿನಲ್ಲಿ ಒದಗಿಸಿ ಕನಸಿನಲ್ಲಿ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡುತ್ತಿದ್ದೇವೆ ಎಂದು ಸಂತೋಷಪಡಬಹುದು. ಆದರೆ ನಿಜವಾಗಿಯೂ ಯಾರನ್ನೂ ವಿದ್ಯಾವಂತರನ್ನಾಗಿ ಮಾಡುವುದಿಲ್ಲ.

ಇನ್ನು ಕಿವುಡ, ಕುರುಡ ಮತ್ತು ಮೂಕರ ಪಾಠಶಾಲೆಯ ವಿಚಾರ. ಆ ದುರ್ದೈವದ ಮಕ್ಕಳಿಗೆ ಮಾಡುತ್ತಿರುವ ಮಹಾಪರಾಧವೆಷ್ಟೆಂಬುದನ್ನು ಹೇಗೆ ಹೇಳಬೇಕೋ—ಬಹಳ ಸಂಕಟವಾಗುತ್ತಿದೆ. ಏನು, ಹೆಲ್ಪ್ ಕೆಲರ್ ಬಂದಾಗ ಎಲ್ಲರೂ ಹೋಗಿ ನೋಡಿ ಹೊಗಳಿದ್ದೇ ಹೊಗಳಿದ್ದು. ನೋಡಿ, inspiration ಬರುವಹಾಗೆ ಮಾಡಿದ್ದೇನು? ಅದನ್ನು ಸ್ಥಾಪನೆ ಮಾಡಿ 25 ವರ್ಷ ಆಯಿತು. ದೊಡ್ಡದಾಗಿ ರಜತ ಮಹೋತ್ಸವವನ್ನೂ ಜರುಗಿಸಿದರಿ. ಅದರೆ ಆ ದುರದೃಷ್ಟ ಮಕ್ಕಳಿಗಾದ ಅನುಕೂಲವೇನು? ಅವರಿಗೆ ಕೊಟ್ಟಿರುವ ಅನುಕೂಲ ಸಾಕೇ? ಬಾಕಿ ಮಕ್ಕಳಿಗೆ ಪಾಠ ಕಲಿಸುವಂತೆ ಅವರಿಗೂ ಪಾಠ ಕಲಿಸಬಹುದೆ? ತಾವು ತಿಳಿದಿದ್ದೀರಾ? Teaching Aids ಇಟ್ಟುಕೊಂಡು ಕಲಿಸಿಕೊಡುವ ಅನುಭವವಿರುವವರಿಗೆ ಇದು ಸಾಧ್ಯವೇ ಹೊರತು ಬೇರೆಯವರಿಗೆ ಸಾಧ್ಯವೇ? ಅಲ್ಲಿ ಓದುವ ಮಕ್ಕಳಿಗೆ ಜೀವನ ಮಾಡುವುದಕ್ಕೆ ಏನಾದರೂ ಏರ್ಪಾಡು ಮಾಡಿದ್ದೀರಾ? ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ, ಆ ಮೂಗ, ಕಿವುಡ ಮಕ್ಕಳಿಗೆ ಕೆಲವು hearing guides, ಮೈಕ್ ಮುಂತಾದುವುಗಳನ್ನು ಕೊಟ್ಟು ಕೊಂಚ ಸಹಾಯಮಾಡಿದರೆ ಕಾಲಕ್ರಮೇಣ ಅವರ ಅವಯವಗಳೇ ಉಪಯೋಗಕ್ಕೆ ಬರುತ್ತವೆ ಎಂದು. ಇಂಥಾದ್ದು ನೀವು ಏರ್ಪಾಡುಮಾಡಿಕೊಡದಿದ್ದರೆ ಇನ್ಯಾರು ಮಾಡುತ್ತಾರೆ?

ಇನ್ನೊಂದು ವಿಷಯ. ಈ ವಿಚಾರದಲ್ಲಿ ಒಳ್ಳೆಯ ಪರಿಣತರಾದ Trained Expert ಬೇಕೆಂದು ಡಾ. ನಜೇಶ್ ಎಂಬವರನ್ನು ಸೀಮೆಗೆ ಕಳುಹಿಸಿ ತರಪೇತು ಕೊಟ್ಟರು. ಆದರೇನು! ಅವರು ವಾಪಸು ಬಂದ ಮೇಲೆ A.I.R.ಗೆ ತೆಗೆದುಕೊಂಡು ಹೋಗಿ ಅವರನ್ನು ಸೇರಿಸಿದಿರಿ. ಹೀಗಾದರೆ ನೀವು ಕೊಟ್ಟ ಟ್ರೈನಿಂಗ್‌ನಿಂದೇನು ಪ್ರಯೋಜನ? ಏಕೆ ಅವರನ್ನು ಕಳುಹಿಸಿದ್ದು ಎಂಬುದನ್ನು ಯೋಚಿಸಬೇಡವೇ! ಬಿ. ಎ. ಮಾಡಿಸುವುದು ಡಾಕ್ಟರ್‌ಆಗು ಎನ್ನುವುದು, ಬಿ. ಇ. ಮಾಡಿದವನನ್ನು ಹಿಪ್ಪನೇರಳೆ ಸಾಕು ಎಂದು ನೇಮಿಸುವುದು ಯಾವ ನೀತಿ? ಅಲ್ಲಿನ ಮಕ್ಕಳಿಗೆ ತಿಂಗಳಿಗೆ 12 ರೂಪಾಯಿನಂತೆ ಕೊಟ್ಟರೆ ಏನಾಯಿತು! ಅವರ ಊಟ ತಿಂಡಿಗೆ ಆಗುತ್ತದೆಯೇ! ಗಾಣಿಗಿತ್ತಿ ಅಯ್ಯೋ ಎನ್ನುವ ಹಾಗೇಕೆ ಮಾಡುತ್ತೀರಿ?

ಆ ಮೇಲೆ ಡಿಸ್ಟ್ರಿಕ್ಟ್ ಬೋರ್ಡ್ ಉಪಾಧ್ಯಾಯರುಗಳಿಗೆ ಸರ್ಕಾರಿ ಉಪಾಧ್ಯಾಯರುಗಳಿಗೆ ಕೊಡುವಂತೆ ಸಂಬಳ ಸಾರಿಗೆಗಳನ್ನು ಕೊಡದೆ ಇದ್ದರೆ, ಸುಮ್ಮನೆ 'if' and 'but' ಎಂದು ಕುಳಿತುಕೊಂಡರೆ, ಮುಂದೆ ಅಲ್ಲಿ ಆಗಬಹುದಾದ ಅನ್ಯಾಯಗಳಿಗೆ ನೀವೇ ಕಾರಣರಾಗುತ್ತೀರಿ. ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ವಿಚಾರ ಹೇಳುವುದಾದರೆ, ಅವರಲ್ಲಿ ಒಂದು ಕಾಸೂ ಇಲ್ಲ. ಹೀಗಿರುವಾಗ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಹೋಗಿ ಏನು ಮಾಡಬೇಕೋ ಗೊತ್ತಿಲ್ಲ.

ಈ ಇಲಾಖೆಯಲ್ಲಿ ಬೇಕೆಂದು Transfer ಮಾಡುವುದೂ ಹೆಚ್ಚು. ಗಂಡ ಎಲ್ಲಿರುತ್ತಾನೋ, ಹೆಂಡತಿಯೂ ಅಲ್ಲಿಯೇ ಇರುವಂತೆ ಸಾಧ್ಯವಾದಷ್ಟು ಮಟ್ಟಿಗೆ ಮಾಡಬೇಕೆಂದಿದ್ದರೂ, ಇದು ಬುಕ್ಕಿನಲ್ಲಿ ಮಾತ್ರವಿದೆ, ಯಾರೂ ಪಾಲಿಸುತ್ತಿಲ್ಲ. ಉದಾಹರಣೆಗೆ ಹೇಳುತ್ತೇನೆ. ಡೆಪ್ಯುಟಿ ಚೀಫ್ ಎಲೆಕ್ಟ್ರಿಕಲ್ ಎಂಜಿನಿಯರು ಬೆಂಗಳೂರಿನಲ್ಲಿದ್ದರೆ, ಆಕೆ ಹಾಸನದಲ್ಲಿರುತ್ತಾರೆ. ಎಂಜಿನಿಯರು

ಮೈಸೂರಿನಲ್ಲಿದ್ದಾಗ ಅವರನ್ನು ಬೆಂಗಳೂರಿಗೆ ಹಾಕಿರುತ್ತಾರೆ. ಮಕ್ಕಳು ಮರಿಗಳು ಬೋರ್ಡಿಂಗ್ ಹೋಂನಲ್ಲಿ ಎಲ್ಲಿಯೋ ಇರುತ್ತವೆ. ಪುಸ್ತಕದಲ್ಲಿರುವ ನಿಯಮಗಳನ್ನೆಲ್ಲಕೆ ಪಾಲಿಸುವುದಕ್ಕಾಗುವುದಿಲ್ಲವೋ ಗೊತ್ತಿಲ್ಲ. ಸಾಧ್ಯವಾದಷ್ಟುಮಟ್ಟಿಗೆ ಕಾರ್ಯಗತ ಮಾಡುತ್ತಾರೆಂದು ನಂಬಿಕೊನೆಯಲ್ಲಿಯಾದರೂ ನನಗೆ chance ಕೊಟ್ಟು, ಮೇಲೆ ಎರಡುನಿಮಿಷಗಳನ್ನು ಹೆಚ್ಚಿಗೆ ಮಾತನಾಡಲು ಅವಕಾಶವಿತ್ತಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ಈ ವರ್ಷವೇನೋ ಆಯಿತು, ಮುಂದಿನ ವರ್ಷಕ್ಕಾದರೂ ಈ ಹಣ ಕಡಮೆ ಮಾಡಿಕೊಳ್ಳಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ನಾಗೂರ್.—ಮಾನ್ಯ ಸಭಾಪತಿಗಳೇ, ಈಗಾಗಲೇ ಒಂದು ವಿನಂತಿ ಮಾಡಿಕೊಂಡಂತೆ ಇನ್ನೂ ಒಂದು ವಿನಂತಿ ಮಾಡಿಕೊಂಡು ನನ್ನ ಭಾಷಣವನ್ನು ಪ್ರಾರಂಭ ಮಾಡಬಯಸುತ್ತೇನೆ.

ನಾಳೆಯ 19ನೆಯ ತಾರೀಖು ಸೂರ್ಯಗ್ರಹಣದ ದಿನ. ಶಾಸ್ತ್ರರೀತಿ ನಾಳೆ ಆಕಾಲದಲ್ಲಿ ಯಾವ ಕೆಲಸವನ್ನೂ ನಡೆಸುವುದು ಸರಿಯಲ್ಲ. 1947ನೆಯ ಆಗಸ್ಟ್ 15ನೆಯ ತಾರೀಖಿನ ದಿವಸ ರಾತ್ರಿ 12 ಘಂಟೆಯ ಹೊತ್ತಿನಲ್ಲಿ ನಾವು ಸ್ವರಾಜ್ಯ ತೆಗೆದುಕೊಂಡೆವು. ಹಗಲಲ್ಲೇ ಸ್ವರಾಜ್ಯ ಸ್ವೀಕಾರ ಮಾಡಬಹುದಾಗಿತ್ತು. ಆದರೆ ನೆಹರೂರವರ ಅಭಿಪ್ರಾಯದಲ್ಲಿ ಶಾಸ್ತ್ರಕ್ಕೂ ಮನ್ನಣೆ ಕೊಡಬೇಕಾದದ್ದು ಯುಕ್ತವೆಂದು ಹೇಳಿ, ಶಾಸ್ತ್ರದ ಪ್ರಕಾರ ಅಂದು ಅಮಾವಾಸ್ಯೆರಾತ್ರಿ 12 ಘಂಟೆಗೆ ಸ್ವೀಕಾರ ಮಾಡಿದರು. ಅದೇ ಪ್ರಕಾರ ಶಾಸ್ತ್ರರೀತ್ಯಾ ಸೂರ್ಯ ಗ್ರಹಣ ಬಹಳ ಕೆಟ್ಟದ್ದು. ಅದರ ಪೀಡೆ ನಮಗೆ ಬೇಡ. ಅಂದು 19ನೆಯ ತಾರೀಖು ಈ ಸಭೆಗೆ ರಜಾ ಕೊಡಬೇಕೆಂದು ವಿನಂತಿ ಮಾಡಿಕೊಳ್ಳತ್ತೇನೆ. ಆ ಪೀಡೆಯನ್ನು ನಾವು ಹೋಗಲಾಡಿಸಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಬೆಂಗಳೂರು ದಕ್ಷಿಣ).—ಗ್ರಹಣ ಬಂದರೆ ನಿಮಗೇನಾದರೂ ಗ್ರಹಣ ಹಿಡಿಯುತ್ತದೆಯೋ?

ಶ್ರೀ ಬಿ. ಕೆ. ನಾಗೂರ್.—ನನಗಲ್ಲಾ, ನಮ್ಮೆಲ್ಲರಿಗೂ ಹಿಡಿಯಬಹುದು. ಈಗ ಅದರ ಚರ್ಚೆಗೆ ಕಾಲಾವಕಾಶವಿಲ್ಲ. ಆ ಮೇಲೆ 22ನೆಯ ತಾರೀಖು ಬಸವ ಜಯಂತಿ ದಿನ. ಅಂದೂ ರಜ ಕೊಡಬೇಕು.

ಇಷ್ಟು ವಿನಂತಿಮಾಡಿಕೊಂಡು ನಾನು ಇನ್ನು ವಿದ್ಯಾಭ್ಯಾಸಖಾತೆಗೆ ಸಂಬಂಧಪಟ್ಟ ಡಿಮ್ಯಾಂಡಿನ ಮೇಲೆ ಮಾತನಾಡಬಯಸುತ್ತೇನೆ. ಈ ವರ್ಷ 10,78,00,000 ರೂಪಾಯಿಗಳು ಈ ಖಾತೆಗಾಗಿ ಕೊಟ್ಟಿದಾರೆ ಈ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಬೇರೆ ಯಾವ ಮಂತ್ರಿಗಳಿಲ್ಲದಿದ್ದರೂ ಶಿಕ್ಷಣ ಖಾತೆಯ ಮಂತ್ರಿಗಳು ಇಲ್ಲಿ ಕುಳಿತಿದ್ದರೆ ಬಹಳ ಸಂತೋಷ. ಕೊನೆಗೆ ಅವರೂ ಎದ್ದುಹೋಗಿದ್ದರೂ ಪರವಾಗಿಲ್ಲ. ನಾವೇನೂ ಮಾಡಲಾರೆವು ಎಂದು ಹೇಳುತ್ತಾ ವಿದ್ಯಾಭ್ಯಾಸ ಖಾತೆಯ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಹೇಳುತ್ತೇನೆ.

ಮೊದಲನೆಯದಾಗಿ ಶಿಕ್ಷಕರ ತರಬೇತಿ ಕೇಂದ್ರಗಳ ವಿಚಾರ. ತುಮಕೂರು ಜಿಲ್ಲೆಯಲ್ಲಿನ ಬೆಳ್ಳಾರ ಶಿಕ್ಷಕರ ತರಬೇತಿ ಕೇಂದ್ರದ ವಸತಿ ಸೌಕರ್ಯಕ್ಕಾಗಿ 50,000 ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಆದರೆ ಗುಲ್ಬರ್ಗ ಶಿಕ್ಷಕರ ತರಬೇತಿ ಕೇಂದ್ರದ ನಲುವಾಗಿ 25,000 ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಅದರಂತೆಯೇ ಶಿವಮೊಗ್ಗದ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರದ ಸುಧಾರಣೆಗಾಗಿ 1,25,000 ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಗುಲ್ಬರ್ಗದ ಮಾಧ್ಯಮಿಕ ತರಬೇತಿ ಕೇಂದ್ರದ ಸುಧಾರಣೆಗಾಗಿ ಕೇವಲ 50,000 ರೂಪಾಯಿಗಳನ್ನು ಒದಗಿಸಿದ್ದೀರಿ. ಮತ್ತು ಶಿವಮೊಗ್ಗದ ಕೇಂದ್ರಕ್ಕೆ ಫರ್ನಿಚರ್ ನಲುವಾಗಿ 10,000 ರೂಪಾಯಿಗಳನ್ನೂ, ಮೋಟರ ನಲುವಾಗಿ 20,000 ರೂಪಾಯಿಗಳನ್ನು, ಕೊಟ್ಟಿರುವಾಗ ಗುಲ್ಬರ್ಗ ಕಾಲೇಜುಗಳಲ್ಲಿ ಕ್ಲಾಸು ನಡೆಸಲು ಸ್ಥಳವೇ ಇಲ್ಲದಿದಾಗ್ಯೂ ಕೇವಲ 50 ಸಾವಿರ ರೂಪಾಯಿಗಳನ್ನು ಒದಗಿಸಿದ್ದೀರಲ್ಲಾ. ಈ ರೀತಿ ಏಕೆಮಾಡುತ್ತಿದ್ದೀರಿ! ಕಣ್ಣುಗಳು ಎರಡೂ ನಮ್ಮವೇ. ಒಂದು ಕಣ್ಣಿನಲ್ಲಿ ಸುಣ್ಣ ಹಾಕುತ್ತೀರಿ! ಇನ್ನೊಂದು ಕಣ್ಣಿನಲ್ಲಿ ತಣ್ಣಗಾಗುವ ಔಷಧಿ ಹಾಕುತ್ತೀರಿ!

ಶ್ರೀ ವಿ. ವೆಂಕಟಪ್ಪ.—ಎಲ್ಲಕ್ಕೂ ಒಂದು ಸೇರು ಬೆಣ್ಣೆಯೆ?

ಶ್ರೀ ಬಿ. ಕೆ. ನಾಗೂರ್.—ಬೆಣ್ಣೆ ಇಲ್ಲಾ ಸ್ವಾಮಿ, ಸುಣ್ಣಹಾಕುತ್ತಿದ್ದೀರಿ. ಇನ್ನೊಂದು ವಿಚಾರ, ಸ್ವಾಮಿ. ಶಿಕ್ಷಣ ಶಾಖೆಯ ಅಧಿಕಾರಿಗಳಿಗೆ ಮೈಸೂರು ರಾಜ್ಯದ ವಿಸ್ತಾರ ಕೇವಲ ಹತ್ತು ಜಿಲ್ಲೆಗಳಂತಿದೆ. ಉಳಿಕೆ ಜಿಲ್ಲೆ ಅವರ ಕಣ್ಣಿಗೆ ಕಾಣುವುದಿಲ್ಲವೇನೋ. ಎರಡನೆಯ ಯೋಜನೆಯ ಬಗ್ಗೆ ಹೇಳುವಾಗ ಮೈಸೂರಿನ ಹತ್ತು ಜಿಲ್ಲೆ ಗಳಲ್ಲಿ ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ಹೊರತು ಉಳಿದ ಎಲ್ಲ ಜಿಲ್ಲೆಗಳಲ್ಲಿ ಶಿಕ್ಷಕರ ತರಬೇತಿಯ ಕೇಂದ್ರಗಳಿವೆಯೆಂದು ಹೇಳಲಾಗಿದೆ. ಹಾಸನದಲ್ಲಿ ಒಂದು ಕೇಂದ್ರ ತೆರೆಯುವ ಯೋಚನೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ, ಶಿಕ್ಷಕರ ತರಬೇತಿ ಕೇಂದ್ರಗಳಿಲ್ಲದ ರಾಯಚೂರು ಹಾಗೂ ಬೀದರ ಜಿಲ್ಲೆಗಳೂ ಸಹ ಇವೆಯೆಂಬುದನ್ನು ಶಿಕ್ಷಣ ಶಾಖೆಯವರು ಮರೆಯಬಾರದು. ಇಂಥ ಮರೆಯುವಿಕೆಯಿಂದ ಜನತೆಗೆ ಅನ್ಯಾಯವಾಗುತ್ತದೆ. ಮೈಸೂರಿನವರಿಗೆ ನ್ಯಾಯ ಧಾರವಾಡದವರಿಗೆ ಅನ್ಯಾಯ.

ದೊಡ್ಡಬಳ್ಳಾಪುರದ ಪದವೀಧರರ ಮೂಲ ಶಿಕ್ಷಣ ಕಾಲೇಜಿನ ಸುಧಾರಣೆಯ ಬಗ್ಗೆ 12,37,000 ವೆಚ್ಚ ಮಾಡುವ ಯೋಜನೆ ಮಾಡಲಾಗಿದೆಯೆಂದು ಹೇಳಿದ್ದೀರಿ. ಈ ಕಾಲೇಜಿಗೆ ಇಷ್ಟು ಹಣ ಏಕೆ ಬೇಕೋ ಗೊತ್ತಿಲ್ಲ. ಏನೇ ಇರಲಿ ಧಾರವಾಡದ ಪದವೀಧರರ ಮೂಲ ಶಿಕ್ಷಣ ಕಾಲೇಜಿನ ಸುಧಾರಣೆಯ ಬಗ್ಗೆ ಒಂದು ಬಿಡಿ ಕಾಸನ್ನೂ ಯೋಜನೆಯಲ್ಲಿ ಕಾಣಿಸಿಲ್ಲ. ಈ ತಾರತಮ್ಯವ್ಯೇಕೋ ಗೊತ್ತಿಲ್ಲ. ಶಿಕ್ಷಣ ಶಾಖೆಯವರಿಗೆ ಹಳೆಯ ಮೈಸೂರಿನ ಹತ್ತು ಜಿಲ್ಲೆಗಳನ್ನು ಬಿಟ್ಟರೆ ಉಳಿದ ಜಿಲ್ಲೆಗಳು ಕಾಣಿಸುತ್ತವೆಯೋ ಇಲ್ಲವೋ ಎಂಬುದು ಸಂಶಯ ಬರುತ್ತದೆ.

ನಾನು ಹೋದವರ್ಷ ಈ ರಾಜ್ಯದ ವಿವಿಧ ಪ್ರದೇಶಗಳ ಶಾರಾಕಾರ ಕಾಲೇಜುಗಳಲ್ಲಿ ಫೀ ಆಚರಣೆಯಲ್ಲಿ ಹೆಚ್ಚುಕಡಮೆಯಿದೆ ಎಂದು ಸರ್ಕಾರದ ಲಕ್ಷ್ಯಕ್ಕೆ ತಂದಿದ್ದೆ. ಆದರೆ ಸರ್ಕಾರ ಈ ಬಗ್ಗೆ ವಿಚಾರ ಮಾಡಿದಂತೆ ಕಾಣುವುದಿಲ್ಲ. ಧಾರವಾಡದ ಕಾಲೇಜಿನಲ್ಲಿ ಕಲಿಯುವ ಹುಡುಗನು ವರ್ಷಕ್ಕೆ 300 ರೂಪಾಯಿ ಕೊಡುತ್ತಾನೆ. ಬೆಂಗಳೂರಿನಲ್ಲಿ ಕಲಿಯುವ ಹುಡುಗನು ವರ್ಷಕ್ಕೆ 120 ರೂಪಾಯಿ ಕೊಡುತ್ತಾನೆ. ಇದು ನ್ಯಾಯಸಮ್ಮತವಲ್ಲ. ರಾಜ್ಯದ ಬಾಲಕರು ಎಲ್ಲರೂ ಆಷ್ಟೆ ಸಮದೃಷ್ಟಿಯಿಂದ ಅವರನ್ನು ಕಾಣಬೇಕು. ಸರ್ಕಾರ ಈ ಬಗ್ಗೆ ಇಷ್ಟು ಕಾಲವಿಳಂಬ

(ಶ್ರೀ ಬಿ. ಕೆ ನಾಗೂರ್)

ಮಾಡಕೂಡದು. ಹೊಸವರ್ಷದಿಂದ ಇಡೀ ರಾಜ್ಯದಲ್ಲಿ ಒಂದೇ ಬಗೆಯ ಫೀ ಆಚರಣೆಯಾಗುವಂತೆ ಏರ್ಪಾಡು ಮಾಡತಕ್ಕದ್ದು ಯುಕ್ತ. ಇಲ್ಲಿ ನಾನು ಒಂದು ವಿಷಯ ಸರ್ಕಾರದ ಗಮನಕ್ಕೆ ತರಬಯುಸುತ್ತೇನೆ. ಹೋದ ವರ್ಷ ಹಳೆಯ ಮೈಸೂರಿನ ಕಾಲೇಜುಗಳಲ್ಲಿ ಕೇವಲ 10-15 ರೂಪಾಯಿ ಫೀ ಹೆಚ್ಚಿಸಲು ವಿಶ್ವವಿದ್ಯಾನಿಲಯ ಆಜ್ಞೆ ಮಾಡಿತು. ಆಗ ಬೆಂಗಳೂರು ವಿದ್ಯಾರ್ಥಿಗಳು ಮಂತ್ರಿಗಳ ಕಾರುಗಳಿಗೆ ಕಲ್ಲು ಒಗೆಯುವವರೆಗೆ ಎಲ್ಲ ಕೆಲಸಗಳನ್ನೂ ಮಾಡಿದರು. ಆದರೆ, ಈ ವಿದ್ಯಾರ್ಥಿಗಳಿಗಿಂತಲೂ ಎರಡು ಪಟ್ಟು-ಮೂರು ಪಟ್ಟು ಫೀ ಕೊಡುತ್ತಿರುವ ಬೊಂಬಾಯಿ ಹಾಗೂ ಮದ್ರಾಸ್ ಪ್ರದೇಶದ ವಿದ್ಯಾರ್ಥಿಗಳು ಇದುವರೆಗೂ ತಾಳ್ಮೆಯಿಂದ ಹಾಗೂ ಶಿಸ್ತಿನಿಂದ ವರ್ತಿಸಿದ್ದಾರೆ. ಇದನ್ನು ತಾವು ತಪ್ಪು ತಿಳಿದುಕೊಂಡು ಅವರು 300 ರೂಪಾಯಿ ಕೊಡಲೇ ಬೇಕು, ಬೆಂಗಳೂರಿನ ವಿದ್ಯಾರ್ಥಿಗಳು ಮಂತ್ರಿಗಳ ಮೇಲೇ ಕಲ್ಲು ಹೊಡೆದದ್ದರಿಂದ 120 ರೂಪಾಯಿಗಳು ಮಾತ್ರ ಇರುವಂತೆ ಮಾಡಿದ್ದು ಸರಿಯಲ್ಲ. ಈ ದೃಷ್ಟಿಯಿಂದ ಈ ವಿಷಯವನ್ನು ತಾವು ಸಂಪೂರ್ಣ ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ಬರೀ ಇಲ್ಲಿನವರು ಕಲ್ಲು ಒಗೆಯುತ್ತಾರೆಂದು ತಿಳಿಯ ಬೇಡಿ. ಉತ್ತರ ಕರ್ನಾಟಕದ ವಿದ್ಯಾರ್ಥಿಗಳಿಗೂ ಕಲ್ಲು ಒಗೆಯಲಕ್ಕೆ ಬರುತ್ತದೆ ತಾವು ಅತ್ತ ಬಂದರೆ. ಆದರೆ ಅಂಥದಕ್ಕೆ ಅವಕಾಶ ಕೊಡ ಬೇಡಿ. ವಿದ್ಯಾರ್ಥಿ ದೆಶೆಯಲ್ಲಿ ಈ ರೀತಿಯಾದರೆ ಮುಂದೆ ಇದೇ ಒಂದು ಪಾಠವಾಗುತ್ತದೆ ಅವರಿಗೆ. ಈ ದೃಷ್ಟಿಯಿಂದ ಈ ವ್ಯತ್ಯಾಸವನ್ನು ಹೋಗಲಾಡಿಸ ಬೇಕೆಂದು ನಾನು ಹೇಳುತ್ತೇನೆ.

ಕಾಲೇಜುಗಳ ಸುಧಾರಣೆ: ಗುಲ್ಬರ್ಗ, ಧಾರವಾಡ, ಬೆಳಗಾಂ, ಮಂಗಳೂರು, ಮಡಿಕೇರಿ ಕಾಲೇಜುಗಳ ಪ್ರಗತಿಗಾಗಿ ಹಣವನ್ನೇ ತೆಗೆದಿಡದಿರುವುದು ಶಿಕ್ಷಣ ಶಾಖೆಯ ಅನಾದರಣೆಯನ್ನು ಸೂಚಿಸುತ್ತದೆ. ಬಹುಶಃ ಶಿಕ್ಷಣ ಶಾಖೆಗೆ ಆ ಕಾಲೇಜುಗಳು ಪ್ರಗತಿ ಹೊಂದುವುದು ಬೇಕಾಗಿಯೇ ಇಲ್ಲವೆಂದು ಕಾಣುತ್ತದೆ. ಆದರೆ ಹಳೆಯ ಮೈಸೂರಿನ ಕಾಲೇಜುಗಳ ಪ್ರಗತಿಗಾಗಿ ಸರ್ಕಾರವು ಹಣವನ್ನು ಕೊಡಮಾಡಿದೆ. ಈ ಸಂಗತಿಯು ಶಿಕ್ಷಣ ಶಾಖೆಯ ಸಣ್ಣ ಮನಸ್ಸನ್ನು ವ್ಯಕ್ತ ಪಡಿಸುತ್ತದೆ.

ಶಿಕ್ಷಣ ಶಾಖೆಗೆ ಕೇವಲ ಮೈಸೂರು ವಿಶ್ವವಿದ್ಯಾನಿಲಯವೊಂದೇ ಕಾಣಿಸುತ್ತದೆ. ಕರ್ನಾಟಕ ವಿಶ್ವವಿದ್ಯಾನಿಲಯ ಕಾಣಿಸುವುದೇ ಇಲ್ಲ. ವಿಶ್ವವಿದ್ಯಾನಿಲಯಗಳ ಬಗ್ಗೆ ವಿವರಣೆ ಕೊಡುವಾಗ ಕೇವಲ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಏನು ಮಾಡುತ್ತದೆ ಎಂಬುದನ್ನಷ್ಟೇ ಹೇಳಲಾಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯದ ಬಗ್ಗೆಯೂ ಒಂದೆರಡು ಮಾತುಗಳನ್ನು ತಿಳಿಸಿದ್ದರೆ ಏನು ಪ್ರಮಾದವಾಗುತ್ತಿತ್ತು?

ಹುಬ್ಬಳ್ಳಿಯ private ಇಂಜಿನಿಯರಿಂಗ್ ಕಾಲೇಜಿನ ಅಭಿವೃದ್ಧಿಗಾಗಿ ಯೋಜನೆಯಲ್ಲಿ ಒಂದು ಬಿಡಿಕಾಸೂ ತೆಗೆದಿರಿಸಿಲ್ಲ. ಆದರೆ ಅದೇ ಬೆಂಗಳೂರು ಬಿ. ಎಂ. ಎಸ್. ಇಂಜಿನಿಯರಿಂಗ್ ಕಾಲೇಜ್ ಹಾಗೂ ಮೈಸೂರಿನ ಇಂಜಿನಿಯರಿಂಗ್ ಕಾಲೇಜುಗಳ ಅಭಿವೃದ್ಧಿಗಾಗಿ ಐದು ಲಕ್ಷ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಈ ವ್ಯತ್ಯಾಸವೇಕೆ?

ಶ್ರೀ ವಿ. ವೆಂಕಟಪ್ಪ.—ಗ್ರಾಂಟ್ ಇಟ್ಟಿರುವದರ ಮೇಲೆ, ತೃಪ್ತಿಯಾಗುವಷ್ಟು ಕೊಟ್ಟಿದ್ದೇವೆ. ಬಿಲ್ಡಿಂಗ್ ಗೋಸ್ಕರ ಐದು ಲಕ್ಷ ರೂಪಾಯಿ ಕೊಟ್ಟಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಕಾಲೇಜುಗಳಿವೆ ಎನ್ನುವುದನ್ನು ನೋಡಬೇಕು. ಗೊತ್ತಿಲ್ಲದೆ ಹಾಗೆ ಹೇಳಿಬಿಟ್ಟರೆ ಸರಿಯೇ?

ಶ್ರೀ ಬಿ. ಕೆ. ನಾಗೂರ್.—ಗೊತ್ತಿದ್ದೂ – ತಿಳಿದು ಕೊಂಡೇ ಮಾತನಾಡುತ್ತೇನೆ. ವ್ಯತ್ಯಾಸ ಮಾಡಿದ್ದೀರಿ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಕಾಲೇಜುಗಳಿವೆ? ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಎಷ್ಟಿವೆ? ಮಂತ್ರಿಗಳನ್ನು ಟೀಕೆ ಮಾಡಬೇಕೆಂಬುದು ಉದ್ದೇಶವಲ್ಲ. ಸಮಗ್ರವಾದ ಒಂದು ನಾಡು ಇದೆ. ಭೇದ ಭಾವನೆಯಾಗಬಾರದು ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ. ಇನ್ನಾವ ಕಾರಣವೂ ಇಲ್ಲ.

ಶ್ರೀ ವಿ. ವೆಂಕಟಪ್ಪ.—ಭೇದ ಭಾವನೆ ಇದೆ ಎಂದು ತಿಳಿದುಕೊಂಡಿರುವುದು ತಪ್ಪು. ಎಲ್ಲೆಲ್ಲಿ ಎಷ್ಟು ಅಗತ್ಯವೋ, ಅಷ್ಟನ್ನು provide ಮಾಡುತ್ತಿದ್ದೇವೆ. ನಮ್ಮನೆ ಭೇದ ಭಾವನೆ ಇದೆಯೆಂದು ಹೇಳಿಬಿಟ್ಟರೆ ಸರಿಯಲ್ಲ.

ಅಧ್ಯಕ್ಷರು.—ತಾವು ಬಡ್ಜೆಟ್ಟನ್ನು ದೀರ್ಘವಾಗಿ ಪರಿಶೀಲಿಸಿದರೆ, ಚೆನ್ನಾಗಿ ಅರ್ಥವಾಗುತ್ತದೆ. ಆ ಯೂನಿವರ್ಸಿಟಿಗೂ, ಈ ಯೂನಿವರ್ಸಿಟಿಗೂ ವ್ಯತ್ಯಾಸ ಮಾಡುತ್ತಾರೆಂದು ಹೇಳಿ, ಜನರ ಮೇಲೆ ಬೇರೆ ಕಲ್ಪನೆ ಯಾಗುವಹಾಗೆ ಹೇಳಬಾರದು, ಚೆನ್ನಾಗಿ ಬಡ್ಜೆಟ್ ಓದಿಕೊಂಡು ಬಂದರೆ ಅರ್ಥವಾಗುತ್ತದೆ.

ಶ್ರೀ ಬಿ. ಕೆ. ನಾಗೂರ್.—ಕಾಂಗ್ರೆಸ್ಸಿನವರಂತೆ, ಓದಿಕೊಳ್ಳದೆ ಮಾತನಾಡುವ ಚಟ ನನಗೆ ಇಲ್ಲ. ಜನರಮೇಲೆ ತಪ್ಪು ಕಲ್ಪನೆ ಮಾಡಲು ಇದರಲ್ಲಿ ನನ್ನ ಸ್ವಾರ್ಥವಿಲ್ಲ. ಮಂತ್ರಿಗಳೇ ತಿಳಿದುಕೊಂಡು ಹೇಳಲಿ. ಮಂತ್ರಿಗಳು ಜವಾಬು ಕೊಡುವಾಗ ಸಮಜಾಯಿಷಿ ಹೇಳಬಹುದು. ನನಗೆ ಇರುವ ಅಲ್ಪ ಅವಕಾಶದಲ್ಲಿ ಅವರು ಕಾಲ ತೆಗೆದುಕೊಂಡರೆ ನಾನು ಏನು ಮಾತನಾಡುವುದು? ಸದ್ಯ ಮಂತ್ರಿಗಳಿಗೆ ಮಧ್ಯ ಮಾತನಾಡಲು ನಾನು ಅವಕಾಶ ಕೊಡಲಾರೆ.

ಪಠ್ಯ ಪುಸ್ತಕಗಳ ಬಗ್ಗೆ ಯೋಗ್ಯ ವಿಚಾರ ಮಾಡಬೇಕು. ಶಾಲೆಗಳಲ್ಲಿ ಬಾಲಕರು ಓದತಕ್ಕ ಪಠ್ಯ ಪುಸ್ತಕಗಳ ಬಗ್ಗೆ ಸರ್ಕಾರಕ್ಕೆ ನಿಶ್ಚಿತ ಧೋರಣೆ ಇಲ್ಲದೆ ಇದ್ದುದು ವಿಷಾದಕರ. ಹಳೆಯ ಮೈಸೂರಿನಲ್ಲಿ ಕೇವಲ ಶಿಕ್ಷಣ ಶಾಖೆಯ ಸರ್ಕಾರೀ ನೌಕರರ ಲಾಭಕ್ಕಾಗಿ ಪಠ್ಯ ಪುಸ್ತಕಗಳನ್ನು ಶಿಫಾರಸು ಮಾಡಲಾಗುತ್ತಿತ್ತು. ಮುಂಬೈ ಮತ್ತು ಮದ್ರಾಸ್ ಭಾಗಗಳಲ್ಲಿ ಈ ಪದ್ಧತಿ ಇರಲಿಲ್ಲ. ಅಲ್ಲಿ ಶಿಕ್ಷಣದ ಪ್ರಗತಿಯು ಸಾರ್ವಜನಿಕರ ಪ್ರೋತ್ಸಾಹದಿಂದ ಬೆಳೆದು ಬಂದಿದೆ. ಸರ್ಕಾರೀ ನೌಕರರು ಬರೆದ ಪುಸ್ತಕಗಳಷ್ಟೇ ಪಠ್ಯ ಪುಸ್ತಕಗಳಾಗಲು ಯೋಗ್ಯವೆಂಬ ತಪ್ಪು ಭಾವನೆ ಆ ಭಾಗದ ಶಿಕ್ಷಣ ತಜ್ಞರಲ್ಲಿಲ್ಲ. ಶಿಕ್ಷಣ ರಂಗದಲ್ಲಿ ತಮ್ಮ ಜೀವನವನ್ನೇ ಕಳೆದ ಅನುಭವಸ್ಥರು ಬರೆದ ಇಲ್ಲವೇ ಬರೆಯತಕ್ಕ ಉತ್ತಮ ಕೃತಿಗಳನ್ನೇ ಬಾಲಕರ ಪಠ್ಯ ಪುಸ್ತಕಗಳನ್ನಾಗಿ ಆಯ್ದುಕೊಳ್ಳಬೇಕು.

ಮೂರು ವರ್ಷದ ಬುದ್ಧಿ ನೂರುವರ್ಷದ ತನಕ ಎಂಬ ಗಾದೆ ಇದೆ. ಒಬ್ಬ ಮನುಷ್ಯ ಒಂದು ಹೆಣ್ಣಕದ್ದಾಗ, ಮಾನ್ತರ್ ಅವನನ್ನು ಸನ್ಯಾಗರ್ದ ಹಾದಿಯಲ್ಲಿ ಎಳೆದು, ಆ ಕಳ್ಳತನವನ್ನು ಅವನು ಒಪ್ಪಿಕೊಳ್ಳುವಂತೆಮಾಡಿ ಅವನನ್ನು ಸನ್ಯಾಗರ್ದ ಹಾದಿಯಲ್ಲಿ ಎಳೆದು ಉಚ್ಚಮಟ್ಟಕ್ಕೆ ಹಾಕುತ್ತಾನೆ, ಅನ್ನುವಂಥದು ತಿಳಿಯತಕ್ಕಂಥ ಮಾತು. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮತ್ತೇನೂ ಇಲ್ಲ, ಬರೀ ಹಳೆಯ ಪುಸ್ತಕಗಳನ್ನು ಇಡುತ್ತಾ ಹೋದರೆ, ನಮ್ಮ ವಿದ್ಯಾರ್ಥಿಗಳ ಬುದ್ಧಿ

ಎಷ್ಟರಮಟ್ಟಿಗೆ ಸುಧಾರಿಸುತ್ತದೆ? ಇದನ್ನು ಕನ್ನಡ ಶಾಲಾ ಮಾಸ್ತರುಗಳ ಬಗ್ಗೆ ಹೆಚ್ಚು ಅಭಿಮಾನವಿರಬೇಕೆಂಬ ಉದ್ದೇಶದಿಂದ ಹೇಳುತ್ತಿದ್ದೇನೆ. ನಮ್ಮ ಮಂತ್ರಿಗಳು ಕನ್ನಡ ಮಾತನಾಡುವ ಜನಗಳು. ನಮ್ಮ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರೂ ಕೂಡ ಕನ್ನಡ ಮಾಸ್ತರ ಕೆಳಗೆ ಮೊದಲು ಓದಿ, B A., LL.B, ಹೊಂದಿದ್ದಾರೆ. ಕನ್ನಡ ಕಲಿಯುವ ಮಕ್ಕಳ ಜ್ಞಾನದ ದೃಷ್ಟಿಯಿಂದ, ಅವರನ್ನು ಸನ್ಮಾರ್ಗಕ್ಕೆ ಎಳೆಯುವ ದೃಷ್ಟಿಯಿಂದ, ಈ ಕನ್ನಡ ಶಾಲಾ ಸ್ಕೂಲ್ ಮಾಸ್ತರ್ ಪಗಾರ ಹೆಚ್ಚಬೇಕು. ಅವರಿಗೆ ನೂರು ರೂಪಾಯಿಗೆ ಕಡಿಮೆ ಇರಬಾರದೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಈಗ ಅವರಿಗಿರುವ ಪಗಾರ ಕಡಮೆ, ಎಂ. ಎಲ್. ಎ. ಗಳಿಗೆ ಕೊಡತಕ್ಕಂಥ ಅಲೋಯನ್ಸ್‌ನು ನೂರು ರೂಪಾಯಿಗೆ ಇಳಿಸಿದರೂ ಪರವಾಗಿಲ್ಲ; ಮಂತ್ರಿಗಳ 900 ರೂಪಾಯಿ ಸಂಬಳದಲ್ಲಿ ನೂರು ರೂಪಾಯಿ ಕಡಿಮೆ ಮಾಡಿದರೂ ಪರವಾಗಿಲ್ಲ; ಈ ಸ್ಕೂಲ್ ಮಾಸ್ತರರ ಸಂಬಳ ಹೆಚ್ಚಬೇಕು. 100 ರೂಪಾಯಿ ಮಾಡಲಕ್ಕೇಬೇಕು. ಈ ಕನ್ನಡ ಶಾಲೆಯ ಮಾಸ್ತರನ್ನು ಕಡೆಗಣಿಸಿದರೆ, ಭಾವೀ ರಾಜ್ಯವನ್ನು ಕಟ್ಟತಕ್ಕಂಥ ನಾಗರಿಕರ ಸ್ಥಿತಿಯನ್ನು ಕಡೆಗಣ್ಣಿನಿಂದ ನೋಡಿದ ಹಾಗಾಗುತ್ತದೆ. ಕನ್ನಡ ಮಾಸ್ತರರ ಸಲುವಾಗಿ ಹೆಚ್ಚು ಹಣ ಕೊಡುವ ವ್ಯವಸ್ಥೆ ಮಾಡಬೇಕು. ಪ್ರತಿಯೊಂದು ಖಾತೆಯಲ್ಲಿಯೂ ಲಂಚ ಕೋರತನವಿದೆಯೆಂದು ಹೋದ ಸಲದ ಅದಿವೇಶನದಲ್ಲಿ ಟೀಕೆಗಳು ಬಂದುವು. ಆದರೆ ಕನ್ನಡ ಮಾಸ್ತರುಗಳ ಮೇಲೆ ಅಂಥ ಆರೋಪಗಳು ಬಂದಿಲ್ಲ. ಸ್ಕೂಲ್ ಮಾಸ್ತರುಗಳಲ್ಲಿ ಗಂಡ ಹೆಂಡಿರನ್ನು ಒಂದೇ ಸ್ಥಳದಲ್ಲಿ ಇಡುವುದಕ್ಕೆ ಬಿಡುವುದಿಲ್ಲ, ಗಂಡಹೆಂಡಿರಿಬ್ಬರೂ ಒತ್ತಟ್ಟಿಗೆ ಇರಬೇಕಾದರೆ ಸಾಲಮಾಡಿ ಚೇರ್‌ಮನ್ ಅವರಿಗೆ ಲಂಚ ಕೊಡಬೇಕು. ಸಂಬಳದಿಂದ ಲಂಚ ಕೊಡುವುದಕ್ಕಾಗುವುದಿಲ್ಲ. ಇಂಥ ಪರಿಸ್ಥಿತಿಯನ್ನು ತಪ್ಪಿಸಿ, ಗಂಡಹೆಂಡಿರು ಸ್ಕೂಲ್ ಮಾಸ್ತರಾಗಿರುವವರನ್ನು ಒಂದೇ ಸ್ಥಳದಲ್ಲಿರಲು ಏರ್ಪಾಡು ಮಾಡಿದರೆ, ಲಂಚಕ್ಕೆ ಅವಕಾಶವಿರುವುದಿಲ್ಲ. ಇನ್ನೊಂದು ಸಾರಿ ಈ ಮಾಸ್ತರುಗಳ ಬಗ್ಗೆ ಹೆಚ್ಚಿಗೆ ನಿಗಾ ವಹಿಸಬೇಕೆಂದು ಕೇಳಿಕೊಂಡು, ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕೆ, ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ರಾಚಯ್ಯ.—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಮುಂದಿಟ್ಟ ರತಕ್ಕಂಥ ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟ ಈ ಡಿಮ್ಯಾಂಡಿನ ಮನವಿಯನ್ನು ಅನುಮೋದಿಸುತ್ತ, ಕಾಲ ಬಹಳ ಕಡಮೆಯಾಗಿರುವುದರಿಂದ ನಾನು ಹೇಳಬೇಕೆಂದಿರುವ ವಿಷಯಗಳನ್ನೆಲ್ಲಾ ಹೇಳದೆ, ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ.

1956ನೆಯ ಇನಪಿಯ ಯೂನಿವರ್ಸಿಟಿಯ ಒಂದು ಕಾಯಿದೆಯ ಪ್ರಕಾರ, 1 ನೇ ಜನವರಿ 1957 ರಿಂದ ಮೈಸೂರು ವಿಶ್ವವಿದ್ಯಾನಿಲಯ ಒಂದು ಸ್ವಯಂ ಆಡಳಿತ ಅಧಿಕಾರವನ್ನು ಪಡೆದುಕೊಂಡಿದೆ. ಅಲ್ಲಿಂದೀಚೆಗೆ ಆ ರತಕ್ಕಂಥ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಲು ಇಚ್ಛೈಪಡುತ್ತೇನೆ.

ಈಗಾಗಲೇ ಮಾತನಾಡಿದ ಮಾನ್ಯ ಹಿರಿಯರೂ ಮತ್ತು ಅನುಭವಿಗಳೂ ಆದಂಥ ಶ್ರೀ ಮರ್ಲಾರಾಧ್ಯರು ವಿಶ್ವವಿದ್ಯಾನಿಲಯದ ವಿಷಯದಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ ಅವರು ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ನಾವು ಯಾವ ರೀತಿ ಮುಂದಿನ ಬದಲಾವಣೆಗಳನ್ನು ಮಾಡಬೇಕಾಗಿದೆ, ಆ ಬದಲಾವಣೆಗಳಿಗೆ ಕಾನೂನನ್ನು ಅಳವಡಿಸಿಕೊಂಡು ಅನೇಕ ಆರ್ಡಿನೆನ್ಸ್, ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಮಾಡಬೇಕಾಗಿದೆ, ಮತ್ತು ಎಷ್ಟರಮಟ್ಟಿಗೆ ವಿಶ್ವ ವಿದ್ಯಾನಿಲಯದ ಮುಂದಿನ ರಚನೆ (structure) ಇರಬೇಕು ಎನ್ನುವುದರ ಮೇಲೆ ಮಾತನಾಡಿದ್ದಾರೆ. ಅವರು ಮಾತನಾಡುವಾಗ ಮೈಸೂರು ವಿಶ್ವವಿದ್ಯಾನಿಲಯ ಬಹಳ ಹಳೆಯ ವಿಶ್ವವಿದ್ಯಾನಿಲಯ, ಕರ್ಣಾಟಕ ವಿಶ್ವವಿದ್ಯಾನಿಲಯ ಕೇವಲ ಸುಮಾರು ಹತ್ತು, ವರ್ಷಗಳ ಹಿಂದೆ ಸ್ಥಾಪಿತವಾದುದು ಎಂದು ಹೇಳಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೆಚ್ಚು ಕಾಲೇಜುಗಳನ್ನು ಸೇರಿಸಲಾಯಿತು, ಕರ್ಣಾಟಕ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಅದರ ಮೂರನೆಯ ಒಂದು ಭಾಗದಷ್ಟು ಕಾಲೇಜುಗಳಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಮಟ್ಟಿಗೆ ಹೇಳುವುದಾದರೆ, ಯೂನಿವರ್ಸಿಟಿ ಆಕ್ಟ್ 36 ನೆಯ ಸೆಕ್ಷನ್ ಪ್ರಕಾರ ಪ್ರತಿ ವರ್ಷ ಅದಕ್ಕೆ ಕೊಡಬೇಕಾದ ಗ್ರಾಂಟನ್ನು ನಿಗದಿ ಮಾಡಿದ್ದಾರೆ, ಮೂರು ವರ್ಷದ ಸರಾಸರಿ ತೆಗೆದು ಕೊಂಡು, ಅದಕ್ಕೆ 44 ಲಕ್ಷ ರೂಪಾಯಿಗಳನ್ನು ಕೊಡ ಬೇಕೆಂದು ಮಾಡಿದ್ದಾರೆ. ಕಳೆದ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಕಾಲೇಜುಗಳನ್ನ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಒಳಪಡಿಸಿದ ಮೇಲೆ ಅವುಗಳ ಖರ್ಚು ಕೂಡ ಮೈಸೂರು ವಿಶ್ವವಿದ್ಯಾನಿಲಯದ ಮೇಲೆ ಬಿದ್ದುದರಿಂದ ಹತ್ತು ಲಕ್ಷ ರೂಪಾಯಿಗಳನ್ನು ನಪ್ಪಿಮೆಂಟರಿ ಗ್ರಾಂಟ್ ಆಗಿ ಕೊಟ್ಟರು. ವಿಶ್ವವಿದ್ಯಾನಿಲಯದಲ್ಲಿರತಕ್ಕಂಥ ಉಪಾಧ್ಯಾಯರುಗಳ ಸಂಬಳ ಸಾರಿಗೆಗಳನ್ನು ಪುನರ್ವ್ಯವಸ್ಥೆಗೊಳಿಸುವುದಕ್ಕಾಗಿ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿರತಕ್ಕಂಥ ಉಪಾಧ್ಯಾಯರುಗಳ ಭತ್ಯದ ವಿಷಯದಲ್ಲಿ, ಸಂಬಳ ಸಾರಿಗೆಗಳನ್ನು ಸಕಾಲದಲ್ಲಿ, ಸಾಕಷ್ಟು ಪರಿಮಿತಿಯಲ್ಲಿ ಮತ್ತು ತೃಪ್ತಿಕರವಾದ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದಾರೆ. ಆದರೂ ಕೂಡ ಬಹಳ ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಿರುವಂಥ ಅನೇಕ ಹಿರಿಯ ಉಪಾಧ್ಯಾಯರುಗಳಿಗೆ ಸ್ಕೇಲ್ಸ್ ರಿವಿಷನ್‌ನಿಂದ ಅನುಕೂಲತೆ ಆಗಿಲ್ಲ. ಅಂಥಾ ನಂದರ್ಭದಲ್ಲೂ ಕೂಡ ನಾವು ಅವರಿಗೆ ತಕ್ಕ ಹಾಗೆ ಒಂದು ಪುನರ್ವಿಮರ್ಶೆ ಮಾಡಬೇಕು ಎಂದರೆ ನಮಗೆ ಹಣಕಾಸಿನ ಅಡ್ಡಿ ಬಂದಿದೆ ಎಂದು ವಿಶ್ವವಿದ್ಯಾನಿಲಯದವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರಿ ಗ್ರಾಂಟಿನಿಂದಲೇ ವಿಶ್ವವಿದ್ಯಾನಿಲಯ ನಡೆಯಬೇಕಾಗಿದೆ, ಅಥವಾ ಯೂನಿವರ್ಸಿಟಿ ಗ್ರಾಂಟಿನಿಂದ ಏನು ಒಂದು ಸಹಾಯವನ್ನು ವಿಶ್ವವಿದ್ಯಾನಿಲಯಕ್ಕೆ ಕೊಡಬಹುದೋ ಅದರಿಂದ ನಡೆಸುತ್ತಿದ್ದಾರೆ. ನಮ್ಮ ಒಟ್ಟು ಮೈಸೂರು ವಿಶ್ವವಿದ್ಯಾನಿಲಯದ ಖರ್ಚು ನೋಡುವುದಾದರೆ ಒಂದು ವರ್ಷಕ್ಕೆ 1,17,00,000 ಚಿಲ್ಲರೆ ರೂಪಾಯಿಗಳು ಬೇಕು. ಅದರಲ್ಲಿ ಫೀಜಿನಿಂದ ಸುಮಾರು 12 ಲಕ್ಷ ರೂಪಾಯಿಗಳು ಮಾತ್ರ ಬರುತ್ತದೆ. ಮೆಡಿಕಲ್ ಎಗ್ಜಾಮಿನೇಷನ್‌ನಿಂದ ಒಂಭತ್ತು ಸಾವಿರ ರೂಪಾಯಿ ಬರುತ್ತದೆ. ಮತ್ತು ವಿಶ್ವವಿದ್ಯಾನಿಲಯದ ಎಗ್ಜಾಮಿನೇಷನ್‌ನಿಂದ 12 ಲಕ್ಷ ರೂಪಾಯಿ ಬರುತ್ತದೆ. ಎಂದರೆ ಒಟ್ಟು ಬರತಕ್ಕ ಆದಾಯ, ಫೀಜು ವಗೈರೆ ಕೇವಲ 36 ಲಕ್ಷ ರೂಪಾಯಿಗಳು. ಮಿಕ್ಕ ಹಣಕ್ಕೆ ಕೂಡ ಸರ್ಕಾರವನ್ನಾಗಲಿ, ಕೇಂದ್ರ ಸರ್ಕಾರವನ್ನಾಗಲಿ ಅವಲಂಬಿಸಿರುವುದರಿಂದ ಈ ಬಗ್ಗೆ

(ಶ್ರೀ ಬಿ. ರಾಚಯ್ಯ)

The term of the Teachers' Training College at Mangalore is being extended from year to year. There is a sort of uncertainty in the continuance of the College. It will be better if the College is permanently recognised. Apart from this, it is housed in a temporary shed which is unsuitable. The College needs a pucca building. In other Training Colleges of the State there are two Professors whereas unfortunately in the Mangalore Training College, there is only one Professor. I wish this College is also provided with another Professor. I learn that the Government has nationalised text-books for the first three standards. In doing so, the Government proposes to prescribe the text-books of the old Mysore State for the entire State. This step is considered by responsible persons who are working in the Education Department as being detrimental to students of South Kanara. It is said that the first reader of the former Mysore State contains about 1020 words out of which 585 words are quite foreign to pupils of South Kanara. It is further said that most of the words are Sanskritised. They have to study words which they are not used to. So I request the Government not to impose the text-books on the students of South Kanara and to permit the existing text books to continue. I thank you for the opportunity you have given to me to speak.

ಅಧ್ಯಕ್ಷರು.—ಇಪ್ಪು ಜನರೆಲ್ಲರಿಗೂ ಮಾತನಾಡುವು ದಕ್ಕೆ ಅವಕಾಶ ಕೊಡುವುದು ಸಾಧ್ಯವಾಗದ ಮಾತು. ಈಗ ಮಾನ್ಯ ಮಂತ್ರಿಗಳು ತಮಗೆಷ್ಟು ಕಾಲಬೇಕೆಂದು ಹೇಳಲಿ.

ಶ್ರೀ ವಿ. ವೆಂಕಟಪ್ಪ.— ನುಮಾರು ಒಂದು ಘಂಟೆ ಬೇಕಾಗುತ್ತದೆ.

ಅಧ್ಯಕ್ಷರು.—ಈಗ ಈ ಪಟ್ಟಿಯಲ್ಲಿ ಎನದು ಮೂರು ಹೆನರುಗಳು ಮಾತ್ರ ಉಳಿದಿವೆ. ಅವರಿಗೆ ಐದು-ಐದು

ನಿಮಿಷದಂತೆ ಅವಕಾಶ ಕೊಡುತ್ತೇನೆ. ಮಂತ್ರಿಗಳು 45 ನಿಮಿಷಗಳಲ್ಲಿ ಮುಗಿಸಲಿ.

ಶ್ರೀ ಟಿ. ಕೆ. ಕಂಬಳಿ (ಕುಂದುಗೋಳ).—ಅಧ್ಯಕ್ಷರೇ, ವಿದ್ಯಾಭ್ಯಾಸದ ನಲುವಾಗಿ ಹತ್ತು ಕೋಟಿ ಚಿಲ್ಲರೆ ರೂಪಾಯಿಗಳನ್ನು ಒದಗಿಸಿದೆ. ಈ ಡಿಮ್ಯಾಂಡನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ನಮ್ಮ ಈಗಿನ ಹೊಸ ಮೈಸೂರು ರಾಜ್ಯ ಐದು ಭಾಗಗಳು ಕೂಡಿದ್ದಾಗಿದೆ. ಐದು ಭಾಗದ ಜನರು, ಬೇರೆ ಬೇರೆ ಪ್ರದೇಶದವರು, ಬೇರೆ ಬೇರೆ ತೆರದವರು ಒಂದಾಗಿದ್ದೇವೆ. ಈ ಐದು ರಾಜ್ಯಗಳಲ್ಲಿ ಬೊಂಬಾಯಿ ಕರ್ನಾಟಕದಿಂದ ಬಂದ ಭಾಗ ಹೆಚ್ಚಿನದಾಗಿದೆ.

ವಿದ್ಯಾಭ್ಯಾಸದ ಖಾತೆ ಬಹಳ ಮಹತ್ವದ್ದು. ಇದನ್ನು ಎಲ್ಲ ಕಡೆಯೂ ಈಗಿರುವಂತೆಯೇ ಬಿಟ್ಟರೆ ಏನೂ ಆಗುವುದಿಲ್ಲ. ಆದ್ದರಿಂದ ಏಕರೂಪತೆ, ಸಮಾನತೆ ಬರಬೇಕಾದರೆ ಆದಷ್ಟು ಜಾಗ್ರತೆ ಇದರ ವಿಚಾರದಲ್ಲಿ ಸೂಕ್ಷ್ಮ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಭಾಷೆ ಬರಹಗಳಲ್ಲಿ ಒಂದೊಂದು ಭಾಗದಲ್ಲೂ ವ್ಯತ್ಯಾಸವಿದೆ. ಇದು ಹೋಗಬೇಕಾದರೆ, ಒಂದೊಂದಕ್ಕೆ ಇರುವ ವ್ಯತ್ಯಾಸ ಕಡಮೆ ಯಾಗ ಬೇಕಾಧರೆ, ಪಠ್ಯ ಪುಸ್ತಕಗಳನ್ನು ಎಲ್ಲರೂ ಕೂಡಿ ಮಾಡಿದರೆ ಬೇಗ ಒಂದಾಗುವುದಕ್ಕೆ ಅವಕಾಶವಾಗುತ್ತದೆ.

ಇದು ಒಂದು; ಬೊಂಬಾಯಿ ಕರ್ನಾಟಕದ್ದು ಒಂದು ಹೆಚ್ಚಿನದೆಂದರೆ ಅಲ್ಲಿ ಸ್ಕೂಲು ಕಟ್ಟಡಗಳ ವಿಷಯ, ಒಂದು ರೀತಿ ಇತ್ತು. ಸ್ಕೂಲ್ ಬೋರ್ಡ್ ಎಂಬುದಿದೆ. ಆ ಬೋರ್ಡು ಸ್ಕೂಲಿನ ಎಲ್ಲಾ ಕೆಲಸವನ್ನೂ ವಹಿಸಿ ಕೆಲಸಮಾಡುತ್ತದೆ. ಬೊಂಬಾಯಿ ಕರ್ನಾಟಕದಲ್ಲಿ ಇವುಗಳು, ಸ್ಕೂಲು ಬಿಲ್ಡಿಂಗ್ ನಲುವಾಗಿ 5—6 ಲಕ್ಷ ರೂಪಾಯಿಗಳನ್ನು ಜಮಾಮಾಡಿದ್ದವು. ಹೋದ ವರ್ಷ ಕೂಡ ಈ ವಿಷಯವನ್ನು ನಾನು ಪ್ರಸ್ತಾಪಮಾಡಿದ್ದೆ. ಮಾನ್ಯ ಮಂತ್ರಿಗಳೂ ಈ ವಿಚಾರವನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದರು. ಈ ಸಾರಿ ಬೇರೆ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನು 10—11 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಆ ಬಿಲ್ಡಿಂಗ್‌ಗಳು ಪೂರ್ತಿಯಾಗುತ್ತವೆ. ಈಗ ಅಲ್ಲಿ ಕೆಲವು ಸ್ಕೂಲು ಕಟ್ಟಡಗಳು ಹೀನ ಸ್ಥಿತಿಯಲ್ಲಿವೆ. ಬೊಂಬಾಯಿ ಕರ್ನಾಟಕದಿಂದ ಜಮಾ ಆದ ಈ ದುಡ್ಡಿನಿಂದ ಈ ಕೆಲಸವನ್ನು ನಿರ್ವಹಿಸಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಮಾನಮೇಷ ನೋಡದೆ ಯಾವುದೇ ಡಿಪಾರ್ಟ್‌ಮೆಂಟಿನಿಂದಲಾದರೂ ಸರಿಯೇ ಹಣ ತೆಗೆದುಕೊಂಡು ಇನ್ನೂ 10—11 ಲಕ್ಷ ರೂಪಾಯಿಗಳನ್ನು ಒದಗಿಸಿಕೊಂಡು ಈ ಕಟ್ಟಡಗಳ ಕೆಲಸವನ್ನು ಮುಗಿಸಬೇಕೆಂದು ಹೇಳುತ್ತೇನೆ.

7 P.M.

ಒಂದು ವಿಷಯವನ್ನು ನಮ್ಮ ಮಾನ್ಯ ಸದಸ್ಯರು ಹೇಳಿದರು. ಒಂದನೇ ಫೆಬ್ರವರಿ 1957 ರೊಳಗೆ ಯಾರು ಕಟ್ಟಡದ ನಲುವಾಗಿ ರಕಂ ಜಮೇ ಮಾಡಿ ಮುಗಿಸಿರುತ್ತಾರೋ, ಆ ಕೆಲಸವನ್ನು ಕೂಡಲೇ ಮುಗಿಸಬೇಕೆಂದು ನನ್ನ ಅಭಿಪ್ರಾಯ.

ಅಲ್ಲಿ ಒಂದು ಪದ್ಧತಿ ಹಾಗಿದೆ; ಇಲ್ಲಿ ಒಂದು ಪದ್ಧತಿ ಬೇಗಿದೆ. ಒಂದು ಪ್ರೈಮರಿ ಸ್ಕೂಲನಲ್ಲಿ 5-6-7 ನೇ ಇಯತ್ತೆಗಳಿಗೆ ಒಂದೇ ಫೀ ಹಾಕಿದ್ದಾರೆ. ಅವನ್ನು ಕೂಡಲೇ ಕಡಮೆ ಮಾಡಬೇಕು, ಎಂದು ನಮ್ಮ ಸರಕಾರಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ.

ನಮ್ಮ ಸ್ಕೂಲು ಬೋರ್ಡುಗಳ ಸ್ಕೂಲುಗಳಲ್ಲಿ ಬಹಳ ಅನ್ಯಾಯವಾಗುತ್ತಿದೆ. ಗಂಡ ಹೆಂಡಿರು ಇಬ್ಬರೂ ಉದ್ಯೋಗಸ್ಥರಾಗಿದ್ದರೆ, ಅವರಿಬ್ಬರನ್ನೂ ಒಂದೇ ಸ್ಥಳದಲ್ಲಿ ಇಡುವುದಿಲ್ಲ ಎಂದು ಕೆಲವು ಸದಸ್ಯರು ಹೇಳಿದರು, ಹೀಗಾಗುವುದಿಲ್ಲ ಈ ವಿಷಯದಲ್ಲಿ ಗವರ್ನ್‌ಮೆಂಟ್ ರೂಲ್ ಇದೆ. ಅವರಿಬ್ಬರೂ ಒಂದೇ ಸ್ಥಳದಲ್ಲಿ ಇರಬೇಕು ಎಂದಿರುತ್ತದೆ. ಅವರೇ ಒಲ್ಲೆ ಎಂದರೆ, ಆಗ ಬೇರೆ ಸ್ಥಳಗಳಿಗೆ ವರ್ಗ ಮಾಡಬಹುದು.

ಕೊನೆಯದಾಗಿ ಕನ್ನಡ ರಾಜ್ಯಕ್ಕೆ ಒಂದು ಕನ್ನಡ ಟೈಪ್‌ರೈಟರ್ ಅತ್ಯಗತ್ಯ. ಇದು ಹೊಸ ರಾಜ್ಯವಾದ ಆರು ತಿಂಗಳೊಳಗೆ ಆಗುತ್ತದೆ ಎಂದು ತಿಳಿದುಕೊಂಡಿದ್ದೆವು. ಆದರೆ ಅದು ಇವತ್ತಿಗೂ ಆಗಿಲ್ಲ. ಕನ್ನಡ ನಾಡಿನಲ್ಲಿ ಸೇರಿರುವ ಐದು ರಾಜ್ಯಗಳೂ ಸಮರಸವಾಗಿ, ಒಂದೇ ರೀತಿಯಾಗಬೇಕಾದರೆ, ಆದಷ್ಟು ಬೇಗ ಕನ್ನಡ ಟೈಪ್‌ರೈಟರನ್ನು ಮಾಡಿ ಬಳಕೆಗೆ ತರಬೇಕು.

[Sri L. B. BIRJE (Khanapur) spoke in Marathi.]

*Sri C. M. ARUMUGHAM.—You are quite aware of the parliamentary procedure. The Speaker of Parliament uses his discretion in selecting members to speak and also allotting time. Here I find some persons consult you and prepare the list and the Speaker follows that list. I do accept if you do not want me to speak on the Demand. But I refuse to accept the ground that my name is not in the list. Who authorised these persons to prepare the list? Indirectlyit forces me to join the P.S.P. party.

Mr. SPEAKER.—I understand your difficulty. I appreciate also the difficulty under which you are labouring. I have requested the Congress Party and the P.S.P. and other Opposition groups and individuals to give me a list and I expected the Opposition Party whip to go round and find out the views of Independent members also. He has submitted a list to me not only today but also for the last two days he is submitting the list and I am follwing that. I have not the slightest intention of by-passing any independent member. I would like to give a chance, but then the Hon'ble Member did not insist for a chance. That is why I did not give him a chance. Otherwise, I would have given him a chance. So, I would request him not to precipitate matters today. Tomorrow I will give him a chance.

Sri C. M. ARUMUGHAM.—From the beginning I was standing but I have never been given a chance.

Mr. SPEAKER.—You don't understand my difficulty. If I do that, I will not be able to take the responsibility because every member will stand up and try to have a chance. Then I will not be able to control the debate. When I ask the Opposition Party, I mean the whole of the Opposition. I have found that whenever occasion arose and when the party whip asked you to walk out, you walked with the other people of the Opposition Party. That is why I thought that in this matter also, he would go round and consult you and give me the list which would be agreeable to the whole of the Opposition.

ಶ್ರೀ ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಈ ದಿವಸ ನಡೆದಿರುತ್ತ ಚರ್ಚೆಯಲ್ಲಿ ಮಾತನಾಡಿರತಕ್ಕಂಥ ಎಲ್ಲಾ ಮಾನ್ಯ ಸದಸ್ಯರ ಎಲ್ಲ ವಿಷಯವನ್ನೂ ಕುರಿತು ನಾನು ಉತ್ತರ ಹೇಳುವುದಕ್ಕೆ ಸಾಧ್ಯವಾಗುತ್ತದೆ, ಎಂದು ಕೊಂಡಿಲ್ಲ ಸಾಮಾನ್ಯವಾಗಿ ಒಬ್ಬರು ಹೇಳಿದಂಥ ವಿಷಯದ ಮೇಲೆ ಉತ್ತರ ಹೇಳಿದರೆ ಅದರ ಸಂಬಂಧ ಇತರರು ಹೇಳುವುದಕ್ಕೆ ಉತ್ತರ ಹೇಳಿದಂತಾಗುತ್ತದೆ. ಆದ್ದರಿಂದ ಎಲ್ಲ ಸದಸ್ಯರೂ ಹೇಳಿರುವ ವಿಷಯಗಳನ್ನು ಕುರಿತು ನಾನು ಉತ್ತರಗಳನ್ನು ಹೇಳುವುದಕ್ಕೆ ಪ್ರಯತ್ನ ಪಡುವುದು ಸರಿ ಹೋಗಲಾರದು. ಮತ್ತು ಕಾಲ ಬಹಳ ಆಗಿರುವುದರಿಂದ ಸದಸ್ಯರುಗಳೂ ಕೂಡ ಅದನ್ನು ಅಪೇಕ್ಷಿಸುತ್ತಾರೆಂದು ನಾನು ಹೇಳಲಾರೆ. ಈಗ ಸದಸ್ಯರುಗಳು ಏನು ಸೂಚನೆಗಳನ್ನು ಕೊಟ್ಟಿದ್ದಾರೋ ಎಲ್ಲಾ ರಿಪೋರ್ಟ್ ಆಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಎಲ್ಲರೂ ಅದನ್ನು ಪರಿಶೀಲನೆ ಮಾಡಿ ಮುಂದಿನ ವರ್ಷ ಈಗ ಸದಸ್ಯರುಗಳು ಕೊಟ್ಟಿರುವಂಥ ಸಲಹೆಗಳಿಗೆ ಏನು ಕಾರ್ಯವನ್ನು ಕೈಗೊಂಡಿದ್ದಾರೆ ಎನ್ನುವುದನ್ನು ಸೂಚಿಸುವುದಕ್ಕೆ ಏರ್ಪಾಡು ಮಾಡಬೇಕು ಎಂದು ಕೊಂಡಿದ್ದಾರೆ. ಆದ್ದರಿಂದ ಅವರು ಹೇಳಿದಂಥ ಸೂಚನೆಯನ್ನು ಡಿಪಾರ್ಟ್‌ಮೆಂಟಿನವರು ಗಮನಕ್ಕೆ ತೆಗೆದುಕೊಂಡಿದ್ದಾರೆಯೇ ಇಲ್ಲವೇ ಎನ್ನುವುದಕ್ಕೆ ಸಾಕಾದಷ್ಟು ಭರವಸೆ ಆಗುತ್ತದೆ. ಆಗ ಅದಕ್ಕೆ ಏನು ಕಾರ್ಯವನ್ನು ಕೈಗೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಆದ್ದರಿಂದ ಹೆಚ್ಚಿಗೆ ಏನೂ ಇಲ್ಲ. ನಮ್ಮ ಸುಂತಾ ಕರ್ ಮತ್ತು ಇತರ ಮಾರಾಠಿ ಸದಸ್ಯರಿಗೆ ಮನಸ್ಸಿನಲ್ಲಿ ಯಾವೊಂದು ಬೇಧ ಉಂಟಾಗಿದೆಯೇ ಅದಕ್ಕೆ ಕಾರಣವೇನು ಎಂಬುದು ನನಗೆ ಗೊತ್ತಿಲ್ಲ.

ಮೈನಾರಿಟಿಗಳಿಗೆ ಸಂಬಂಧಪಟ್ಟಂತೆ ಅವರ ಯೋಗ ಕ್ಷೇಮ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯವೆಂದು ವಿಧಾಯಕವಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಆ ವಿಷಯದಲ್ಲೇನೂ ನ್ಯೂನತೆ ನಡೆದಿದೆ ಎಂಬುದು ನನಗೆ ಗೊತ್ತಾಗಿಲ್ಲ. ಈಗ 22 ಸಾವಿರ ಪ್ರೈಮರಿ ಸ್ಕೂಲುಗಳ ಪೈಕಿ ಎರಡು ಸಾವಿರ ಉರ್ದು ಸ್ಕೂಲುಗಳಿವೆ, 700 ಮರಾಠಿ ಸ್ಕೂಲುಗಳಿವೆ, ಇತರ ಸ್ಕೂಲುಗಳು 300 ಇವೆ. ಹೀಗೆ ಸುಮಾರು 3,000 ಪ್ರೈಮರಿ ಸ್ಕೂಲುಗಳು ಮೈನಾರಿಟಿಗೆ ಸಂಬಂಧಪಟ್ಟಂತೆ ಏರ್ಪಾಡಾಗಿವೆ. ಸ್ಕೂಲುಗಳನ್ನು ಕೊಡಬೇಕೆಂದು ಎಲ್ಲಿ ಕೇಳುತ್ತಾರೋ ಅಲ್ಲಿ ಸಾಮಾನ್ಯವಾಗಿ ಕೊಡುತ್ತೇವೆ. ನುಮಾರು 30-40 ವಿದ್ಯಾರ್ಥಿಗಳಿದ್ದು ಸ್ಕೂಲು ಕೊಡಬೇಕೆಂದು ಕೇಳಿದರೆ ಕೊಡಲಿಲ್ಲವೆಂದು ಹೇಳಿದರೆ ಜವಾಬು ಕೊಡಬಹುದು. ನುಮ್ಮನೆ ಮರಾಠಿಯವರನ್ನು ಮರೆತರೆಂದು ಹೇಳಿದರೆ ನಮಗೇನೂ ಮಾಡುವುದಕ್ಕೆ ತೋರುವುದಿಲ್ಲ. ಇರುವ ಸ್ಕೂಲುಗಳಲ್ಲಿ ಯಾವುದನ್ನೂ ಮುಚ್ಚಿಲ್ಲ. ಅಲ್ಲದೆ ಯಾವ ಉಪಾಧ್ಯಾಯರುಗಳಿಗೂ ತೊಂದರೆಯಾಗುವಂತೆ ಮಾಡಿಲ್ಲ. ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಉಪಾಧ್ಯಾಯರು ಮತ್ತು ಹುಡುಗರ ರೇಷಿಯೋ ಹೇಗಿದೆಯೆಂಬುದನ್ನು ಹೇಳಿದೆ. 43 ಕನ್ನಡ, 44 ಮರಾಠಿ ಹೀಗಿರುವುದರಿಂದ ಬಹಳ ವ್ಯತ್ಯಾಸವಿದೆಯೆಂದು ಸದಸ್ಯರು ಹೇಳುವುದು ಸರಿಯಾದ ಮಾತಲ್ಲ ಎಂದು ಇಲ್ಲಿ ನಾನು ಹೇಳದೆ ತೀರದು.

ಇನ್ನು ಅವರಿಗೆ ಯಾವ ತೊಂದರೆಯಾಗಿದೆಯೆಂದು ನೋಡೋಣ. ಕೋಲಾರ ಡಿಸ್ಟ್ರಿಕ್ಟಿಗೆ ತೆಲುಗು ಸ್ಕೂಲು ಕೊಡಬೇಕೆಂದು ಮಾನ್ಯ ಮಿತ್ರರು ಹೇಳಿದರು. ಕೋಲಾರ ಡಿಸ್ಟ್ರಿಕ್ಟಿನವರು ಅನೇಕ ವರ್ಷಗಳಿಂದ ಶಾಸನ ಸಭೆಗಳಲ್ಲಿದ್ದಾರೆ. ಅನೇಕ ಸ್ಕೂಲುಗಳನ್ನು ಬೇಕಾದ ಕಡೆಗೆ ಕೊಟ್ಟಿದೆ. ಕೋಲಾರದ ಜನ ಕನ್ನಡ ದೇಶದಲ್ಲಿದ್ದಾರೆ. ಅವರು ಕನ್ನಡ ಕಲಿಯಲು ಬಯಸುತ್ತಾರೆ. ಅನೇಕರು ತೆಲುಗು ಸ್ಕೂಲು ಬೇಡವೆಂದು ಹೇಳುತ್ತಾರೆ. ಅವರು ಕೇಳಿ ಕೊಡದಿದ್ದರೆ ನಮ್ಮದು ತಪ್ಪು. ನುಮ್ಮನೆ ತೆಲುಗು ಮಾತನಾಡುವವರಿದ್ದಾರೆ ಆದ್ದರಿಂದ ಅಲ್ಲಿಗೆ ತೆಲುಗು ಸ್ಕೂಲು ಕೊಡಬೇಕೆಂದು ಹೇಳಿದರೆ ಹೇಗೆ? ಅವರಾಗಿ ಕೇಳಿದರೆ ಕೊಡಬಹುದು, ಕನ್ನಡ ದೇಶದಲ್ಲಿರುವ ಕೋಲಾರ ಜಿಲ್ಲೆಯವರು ರಾಜ್ಯ ಭಾಷೆಯಾದ ಕನ್ನಡ ಕಲಿತು ಕೊಳ್ಳಬೇಕೆಂದು ಆಸಕ್ತಿಯುಳ್ಳವರಾಗಿದ್ದಾರೆ. ಮನೆಯಲ್ಲಿ ತಾಯಿಭಾಷೆ, ಹೊರಗಡೆ ಕೆಲಸ ಕಾರ್ಯದಲ್ಲಿ ವ್ಯವಹಾರದಲ್ಲಿ ಕನ್ನಡ ಉಪಯೋಗಿಸುತ್ತಾರೆ. ಕನ್ನಡ ಕಲಿತು ಕೊಳ್ಳುವುದಾಗಿ ಹೇಳುವಾಗ ಬೇಡಿ ಎಂದು ಹೇಳುವ ಪರಿಸ್ಥಿತಿಯೇನೂ ಇಲ್ಲ.

ಶ್ರೀ ಕಂಚ್ಯೆಯವರು ಸ್ಕೂಲು ಬೋರ್ಡ್ ಮೆಂಬರ್ಸ್ ಥೇರ್ಮನ್ನರು ಸ್ಕೂಲು ಕಟ್ಟಡಗಳಿಗಾಗಿ 11 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳಿದರು. ಜನರು ಅವರ ಭಾಗ ಕೊಟ್ಟಿರುವುದು 11 ಲಕ್ಷ ರೂಪಾಯಿಗಳು. ಈಗ ರೈಪ್ ಆಗಿರುವುದೆಷ್ಟು ಎಂದು ಲೆಕ್ಕ ಕೊಟ್ಟಿದ್ದಾರೆ. ಆದಕ್ಕೆ ನುಮಾರು ನಾಲ್ಕು ಲಕ್ಷ ಐದು ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ. ರೈಪ್ ಆಗದಿರುವುದಕ್ಕೆ ಪೂರ್ಣವಾಗಿ ಅಲಾಟ್ ಮಾಡುವುದು ಅನಗತ್ಯ. ಆದ್ದರಿಂದ ಹಣ ಸಾಲದೆ ಹೋಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಈಗ ಕೊಟ್ಟಿರುವ ಹಣವನ್ನೇ ಅನೇಕ ನಂದರ್ಭಗಳಲ್ಲಿ ಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗಿಲ್ಲ. ಆದ್ದರಿಂದ ಹಣ ಒದಗಿಸಿಲ್ಲವೆಂದು ಹೇಳುವುದು ಸರಿಯಲ್ಲ. ರೈಪ್ ಕೇನನ್ ಎಷ್ಟಿದ್ದುವೋ ಅಷ್ಟಕ್ಕೆ ಹಣ ಒದಗಿಸಿದ್ದೇವೆ. ಇನ್ನೂ ಅವಶ್ಯಕತೆ ಕಂಡು ಬರುವುದಾದರೆ ಒದಗಿನುವುದರಲ್ಲಿ ಅಭ್ಯಂತರವಿಲ್ಲ.

ಶ್ರೀಮತಿ ನಾಗರತ್ನಮ್ಮನವರು ಮೈನೂರಿನಲ್ಲಿ ಕೆಲವು ತೊಂದರೆಗಳಿವೆಯೆಂದು ಹೇಳಿದ್ದನ್ನು ನಾನು ನೋಡಿದ್ದೇನೆ. ಮೈನೂರು ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರಿಗೆ ಹಾಸ್ಟಲ್ ಅನುಕೂಲ ಸಾಕಾದಷ್ಟಿಲ್ಲವೆಂದು ಹೇಳಿದರು. ಅಷ್ಟೇ ಅಲ್ಲ, ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಲಯದ ಪರಿಸ್ಥಿತಿಯನ್ನೂ ನಾನು ನೋಡಿದ್ದೇನೆ. ಕೆಲವು ಕಷ್ಟಗಳಿವೆ. ವಿದ್ಯಾರ್ಥಿಗಳಿಗೆ ಇರುವ ತೊಂದರೆಯನ್ನು ಆದಷ್ಟು ಬೇಗ ಹೋಗಲಾಡಿಸಬೇಕೆಂದು ಹೋಗಿ ನೋಡಿದೆ. ಆ ದಿವಸ

ಶ್ರೀಮತಿ ನಾಗರತ್ನಮ್ಮನವರು ಅಲ್ಲಿ ಇರಲಿಲ್ಲ. ವೈಸ್ ಛಾನ್ಸಲರ್ ಮತ್ತು ಸಂಬಂಧ ಪಟ್ಟ ಎಲ್ಲಾ ಅಧಿಕಾರಿಗಳನ್ನೂ ಕರೆದುಕೊಂಡು ಹೋಗಿ ಏನು ಮಾಡಬೇಕೆಂದು ನೋಡಿ ಪರಿಶೀಲಿಸಿದೆ. ಸಾಧ್ಯವಾದರೆ ಬೇರೆ ಕಟ್ಟಡ ಕೊಡಿಸ ಬೇಕೆಂದು ಎಲ್ಲೆಲ್ಲಿ ಕಟ್ಟಡ ಏದೆಯೋ ಅಲ್ಲೆಲ್ಲಾ ಹೋಗಿ ನೋಡಿದ್ದಾಯಿತು. ಮಾಡರ್ಕ ಹೋಟಲು ಸರ್ಕಾರಿ ಕಟ್ಟಡ, ಸಾಧ್ಯವಾದರೆ ಈ ವರ್ಷ ಅದನ್ನು ವಹಿಸಿಕೊಂಡು ಕಾಲೇಜು ವಿದ್ಯಾರ್ಥಿಗಳಿಗೆ ವಸತಿಗೆ ಅವಕಾಶ ಮಾಡೋಣ, ವಿದ್ಯಾರ್ಥಿ ನಿಲಯಕ್ಕೆ ಅಲ್ಲ ಅವಕಾಶ ಮಾಡೋಣ ಎಂದು ಪ್ರಯತ್ನಪಟ್ಟೆವು. ಆದರೆ ಅದನ್ನು ಕಾಂಟ್ರಾಕ್ಟ್ ಕೊಟ್ಟಿದ್ದರು. ಆ ವಿಚಾರ ಗೊತ್ತಿಲ್ಲದೆ ಪರಿಶೀಲನೆ ರಾಯ್ತು. ಆ ಮೇರೆ ಕಾಂಟ್ರಾಕ್ಟ್ ಕೊಟ್ಟಿದ್ದರೆ ಅದನ್ನು ಕ್ಯಾನ್ಸಲ್ ಮಾಡುವುದು ಕಷ್ಟವೆಂದು ಕಂಡು ಬಂತು. ಆದ್ದರಿಂದ ಆ ಕಟ್ಟಡದಲ್ಲಿ ಕೂಡ ಅವಕಾಶ ಮಾಡುವುದಕ್ಕಾಗಲಿಲ್ಲ.

ಮತ್ತೆ ಕೆಲವು ವಿಚಾರ ಅವರು ಹೇಳಿದರು. ಮಿಡ್ಲ್ ಸ್ಕೂಲು, ನರ್ಸರಿ ಸ್ಕೂಲು, ಪ್ರೈಮರಿ ಸ್ಕೂಲು ನಡೆಸುತ್ತಿದ್ದೇವೆ, ಅದರ ಗ್ರಾಂಟಿನ ವಿಷಯದಲ್ಲಿ ಮೂರು-ನಾಲ್ಕು ವರ್ಷ ತೊಂದರೆಯಾಗಿ ಈ ವರ್ಷ ಕೊಡುವುದರಲ್ಲಿದ್ದಾಗ ಒಂದು ತೊಂದರೆ ಯಾಯಿತು, ಯಾರೋ ಒಬ್ಬ ಗುಮಾಸ್ತೆ ಚೈಪ್ಹ್ಯಾಪೇಪರಿನಲ್ಲಿ ಫಾರಂ ಭರ್ತಿ ಮಾಡಿ ಕಳುಹಿಸಿದ್ದಾರೆ, ಪ್ರಿಂಟೆಂಡ್ ಫಾರಂನಲ್ಲಿ ಫಿಲಪ್‌ಮಾಡಿ ಕಳುಹಿಸಿಲ್ಲ, ಆದ್ದರಿಂದ ಕೊಡುವುದಕ್ಕಾಗುವುದಿಲ್ಲ ಎಂದು ಹಿಂದಕ್ಕೆ ಕಳುಹಿಸಿದ್ದಾರೆ ಎಂದು ಹೇಳಿದರು. ಇದು ಸ್ವಲ್ಪ ವಿಚಿತ್ರವಾಗಿ ಕಾಣುತ್ತದೆ.

Sri KUNDUR RUDRAPPA (Chennagiri).— On a point of information, Sir. ಸ್ಕೂಲು ಕಟ್ಟಡ ಕಟ್ಟುವುದು ನಿಗದಿಯಾಗಿದೆಯೆಂದು ಹೇಳಿದರು. 23ನೆಯ ನವೆಂಬರ್ 1949ರಲ್ಲಿ ಏಳು ಸಾವಿರ ರೂಪಾಯಿಗಳನ್ನ ತಾಲ್ಲೂಕ್ ಬೈಜರಿಗೆ ಡಿಪಾಜಿಟ್ ಮಾಡಿದೆ. ಕಗ್ಗಿಪುರ ಮತ್ತು ಕಗ್ಗಿಕೆರೆ, ಚೆನ್ನಗಿರಿ ತಾಲ್ಲೂಕಿನಲ್ಲಿ ಸ್ಕೂಲು ಕಟ್ಟಡಕ್ಕಾಗಿ ಹಣ ಡಿಪಾಜಿಟ್ ಮಾಡಿ ಹತ್ತು ವರ್ಷವಾಗಿದೆ. ಇನ್ನೂ ಕೆಲಸ ಕೈಕೊಂಡಿಲ್ಲ. ಕೇಳಿದರೆ ಅಂಡರ್ ಕರೆನ್ಸಿಯಿಂದ್ ಎಂದು ಹೇಳುತ್ತಾರೆ. ಎಷ್ಟು ವರ್ಷವಾದರೂ ಕಾರ್ಯಕ್ರಮ ಕೈಕೊಳ್ಳದಿದ್ದರೆ ಹಳ್ಳಿಯ ಮಕ್ಕಳು ಉದ್ಧಾರವಾಗುವುದು ಹೇಗೆ?

ಶ್ರೀ ವಿ. ವೆಂಕಟಪ್ಪ—ಮಾನ್ಯ ಸದಸ್ಯರು ಗಮನಕ್ಕೆ ತಂದಿರುವುದನ್ನು ವಿಚಾರ ಮಾಡುತ್ತೇನೆ. ಯಾರು ಯಾರು ಎಷ್ಟೆಷ್ಟು ಕೊಟ್ಟಿದ್ದಾರೆಂದು ಪಟ್ಟಿ ಮಾಡಿಲ್ಲ. ಈ ವರ್ಷ ಪೂರ್ಣವಾಗಿ ಪಟ್ಟಿಮಾಡುತ್ತೇವೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಈಗಿರುವ ಲೆಕ್ಕದ ಪ್ರಕಾರ, ನಮಗೆ ಸಿಕ್ಕಿರುವ ಸಮಾಚಾರದ ಪ್ರಕಾರ 392 ಹಳ್ಳಿಯವರು ಹಣ ಕೊಟ್ಟಿದ್ದಾರೆ. ಅದು ಸುಮಾರು 3,98,612 ರೂಪಾಯಿಗಳಷ್ಟಿದೆ. ಅದರ ಸಂಬಂಧದಲ್ಲಿ 50 ಕಟ್ಟಡಗಳು ಕಂಪ್ಲೀಟ್ ಆಗಿವೆ, 104 ಕಟ್ಟಡಗಳ ಕೆಲಸ ಕೈಕೊಂಡಿದ್ದರಲ್ಲಿ 50 ಕಟ್ಟಡಗಳ ಕೆಲಸ ಪೂರ್ಣವಾಗಿದೆ. 238 ಕಟ್ಟಡಗಳ ಕೆಲಸ ಕೈಕೊಳ್ಳಬೇಕಾಗಿದೆ. ಈಗ ಸಿಕ್ಕಿರುವ ಲೆಕ್ಕದ ಪ್ರಕಾರ ಇಷ್ಟು ಆಗಬೇಕಾಗಿದೆ. ಶ್ರೀ ಕುಂದೂರು ರುದ್ರಪ್ಪನವರು ಹೇಳಿರುವುದೂ ಇದರಲ್ಲಿ ಸೇರಿದೆ. ಆ ವಿಚಾರದಲ್ಲಿ ಬರೆದಿದ್ದರು. ವಿಚಾರಮಾಡಿ ಆ ಕೆಲಸ ತೆಗೆದುಕೊಳ್ಳಬೇಕಾಗಿದೆಯೆಂದು ಈಗಾಗಲೆ ತಿಳಿಸಿದ್ದೇವೆ. ಬಹುಶಃ ಅವರಿಗೆ ಗೊತ್ತಿರಲಾರದು. ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದಿದ್ದೇವೆ.

ಇನ್ನು ಡೆಫ್ ಅಂಡ್ ಡಂಬ್ ಸ್ಕೂಲಿಗೆ ಇದುವರೆಗೆ 8 ರೂಪಾಯಿಗಳನ್ನು ಮಾತ್ರ ಊಟವಸತಿಗಾಗಿ ಕೊಡುತ್ತಿದ್ದೆವು. ಈ ವರ್ಷ 12 ರೂಪಾಯಿಗಳನ್ನು ಮಾಡಿದ್ದೇವೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ಏನೂ ಮಾಡಿಲ್ಲವೆಂದು ಹೇಳಿದರೆ ಅದು ಹೇಗೆ? ಒಂದೇಸಾರಿ ಎಲ್ಲವನ್ನೂ ಹೇಗೆ ಏರ್ಪಾಡು ಮಾಡುವುದಕ್ಕೆ ಸಾಧ್ಯ? ನನಗಂತೂ ಅರ್ಥವಾಗುವುದಿಲ್ಲ. ಎಷ್ಟಷ್ಟರಮಟ್ಟಿಗೆ ಹಣ ಒದಗುತ್ತದೋ ಅಷ್ಟಷ್ಟರಮಟ್ಟಿಗೆಸೌಲಭ್ಯಗಳನ್ನು ಏರ್ಪಾಡು ಮಾಡಿದ್ದೇವೆ. ಅದಕ್ಕೆ ಬೇಕಾಗುವಷ್ಟು ಹಣವಿದ್ದರೆ, ಅನುಕೂಲಗಳೇನು ಬೇಕೋ ಅವನ್ನು ಮಾಡುತ್ತೇವೆ. ಕೆಲವರು ತಜ್ಞರಾದವರನ್ನು ಇನ್ನೂ ಹೆಚ್ಚಿನ ಶಿಕ್ಷಣವನ್ನು ಪಡೆಯುವುದಕ್ಕೆ ಕಳುಹಿಸುತ್ತಾರೆಂದು ಹೇಳಿದರು. ಅದು ಎಷ್ಟರಮಟ್ಟಿಗೆ ನಿಜವೋ ನನಗೆ ಗೊತ್ತಿಲ್ಲ. ಯಾವುದೋ ವಿಷಯದಲ್ಲಿ ತಜ್ಞರಾಗಿ ಬಂದಿದ್ದವರನ್ನು ಬೇರೆ ಕಡೆಗೆ ಕಳುಹಿಸಿದ್ದಾರೆಂದು ಹೇಳಿದರೆ, ಅದರಿಂದ ಅಷ್ಟೇನೂ ಹೆಚ್ಚಿಗೆ ತೊಂದರೆಯಾಗಿರಲಾರದು. ಅದನ್ನು ಪರಿಶೀಲನೆ ಮಾಡುತ್ತೇನೆ. ಆದರೆ ಏನು ವಿದ್ಯಾಭ್ಯಾಸಮಾಡಿ ಸುತ್ತಿದ್ದಾರೆಂಬುದನ್ನು ನಾನು ಹೋಗಿನೋಡಿದ್ದೇನೆ. ಇನ್ನೊಬ್ಬ ತಜ್ಞರು ಹೆಚ್ಚಾಗಿದ್ದರೆ ಅವರನ್ನು ಬೇರೆ ಕಡೆಗೆ ಕಳುಹಿಸುವುದು ಅಕ್ಷೇಪಣೆ ಎಂದು ನಾನು ಹೇಳಲಾರೆ.

ಶ್ರೀಮಾನ್ ಮಲ್ಲಾರಾಧ್ಯರು ಇಂಟರ್‌ಮೀಡಿಯಟ್ ಕಾಲೇಜುಗಳನ್ನು ಅಪ್-ಗ್ರೇಡ್ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂಬುದಾಗಿ ಕೇಳಿದ್ದಾರೆ. ಅದಿನ್ನೂ ತೀರ್ಮಾನವಾಗಬೇಕಾಗಿದೆ. ಯಾವಾಗಲೂ ಇಂಟರ್‌ಮೀಡಿಯೇಟ್ ಕಾಲೇಜುಗಳನ್ನು ಒಂದೇಸಾರಿ ಪರಿವರ್ತನೆ ಮಾಡುವುದು ಎಷ್ಟುಕಷ್ಟವೆಂದೆ ಎಂಬುದು ಸದಸ್ಯರಿಗೆ ಗೊತ್ತಿದೆ, ಅದಕ್ಕಾಗಿ ಎಷ್ಟು ಹಣಬೇಕಾಗಿದೆ ಎಂಬುದೂ ಸಹ ಗೊತ್ತಿದೆ, ಟೆಕ್ನಿಕಲ್ ಕಮಿಟಿಯವರು ಒಂದು ನಲಹೆ ಮಾಡಿದ್ದಾರೆ, ಎರಡು (full-fledged) ಕಾಲೇಜಿದ್ದರೆ ಒಂದು ಇಂಟರ್ ಮೀಡಿಯೆಟ್ ಕಾಲೇಜನ್ನು ಅಪ್-ಗ್ರೇಡ್ ಮಾಡಬೇಕೆಂದು, ಅದರ ಪ್ರಕಾರ ನಡೆಯಬೇಕಾಗಿದೆ.

ಶ್ರೀ ವೈ. ವೀರಪ್ಪ— ಎರಡು ಎಲ್ಲಿದ್ದರೆ?

ಶ್ರೀ ವಿ. ವೆಂಕಟಪ್ಪ—ಎರಡು ಡಿಗ್ರಿ ಕೋರ್ಸು ಇರುವ ಕಾಲೇಜಿಗೆ ಒಂದು ಕಾಲೇಜನ್ನು ಅಪ್‌ಗ್ರೇಡು ಮಾಡಬೇಕು. ಹಿಂದಿನವರ್ಷ ಎರಡು ವರ್ಷಗಳೆಂದು ಇದ್ದುದನ್ನು ಈಗ ಮೂರು ವರ್ಷಗಳೆಂದು ಮಾಡಿದೆ. ಎರಡಕ್ಕೆ ಒಂದು ಎಂದು ಪ್ರೊಪೋರ್‌ಷನ್ ಮಾಡಿದ್ದಾರೆ. ಇಂತಹಕಡೆ, ಅಂತಹ ಕಡೆ ಎಂದೇನೂ ಹೇಳಲಿಲ್ಲ.

ಆಮೇಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಕಾಲದಲ್ಲಿ ಸರ್ಕಾರದವರು ಯಾವ ಪಟ್ಟಿಯನ್ನೂ ಕಳುಹಿಸಬಾರದು ಎಂದು ಕೆಲವು ಸದಸ್ಯರು ಸಲಹೆಮಾಡಿದರು. ಅದು ಏಕೆ ಸದಸ್ಯರಿಗೆ ಅಂತಹ ಭಾವನೆ ಬಂತೋ ನನಗೆ ತಿಳಿಯಲಿಲ್ಲ. ಆ ಪ್ರಶ್ನೆ ತೀರ್ಮಾನಮಾಡುವ ಸಮಯದಲ್ಲಿ ಸರ್ಕಾರದವರು ಯಾವ ಪಟ್ಟಿಯನ್ನೂ ಕಳುಹಿಸಬೇಕೆಂಬುದು ಅವರ ಉದ್ದೇಶವಲ್ಲ. ಅವರ ಅಧಿಕಾರ ವ್ಯಾಪ್ತಿಯೊಳಗೆ ಸರ್ಕಾರ ಕೈ ಹಾಕಬೇಕೆಂದು ಇಷ್ಟವಿಲ್ಲ. ಈಗ ಒಂದು ತರಹ ರೂಲ್ಸ್ ಇದೆ. ಅದರ ಪ್ರಕಾರ ಆಯಾ ಕಾಲೇಜಿನ ಪ್ರಿನ್ಸಿಪಾಲ್ ಮತ್ತು ಪ್ರೊಫೆಸರುಗಳು ಇಬ್ಬರೂ ಸೇರಿ ಅದನ್ನು ತೀರ್ಮಾನಮಾಡುತ್ತಾರೆ. ಒಂದುವೇಳೆ ಪಟ್ಟಿಕಳುಹಿಸಿದ್ದರೂ, ಅದು ಬಿ.ಡಿ.ಟಿ. ಕಾಲೇಜಿಗೆ ಆಯಿತು. ಗೌರ್ಮೆಂಟ್ ಕಾಲೇಜುಗಳ ವಿಷಯದಲ್ಲಿ ಯೂನಿವರ್ಸಿಟಿ ವೈಸ್ ಛಾನ್ಸಲರ್ ಸರ್ಕಾರಕ್ಕೆ ಪಟ್ಟಿ ಕಳುಹಿಸಿಕೊಟ್ಟರು. ಸರ್ಕಾರದ

(ಶ್ರೀ ವಿ. ವೆಂಕಟಪ್ಪ)

ವರು ಅದನ್ನು ಪರಿಶೀಲಿಸಿದಮೇಲೆ ಚಾನ್ಸಲರ್ ಅವರಿಗೆ ಕಳುಹಿಸಿ ಕೊಟ್ಟರು. ಆಗಕೆಲವು ಹುಡುಗರು ಈ ಕಾಲೇಜಿಗೆ ಸೇರಿದ್ದಾರೆ, ಕಾಲೇಜಿನಲ್ಲಿ ಸೀಟುಗಳು ಬಹಳ ಖಾಲಿಯಾಗಿವೆ ಎಂದು ಹೇಳಿದಮೇಲೆ 17 ವಿದ್ಯಾರ್ಥಿಗಳು ಬೇರೆ ಕಾಲೇಜಿಗೆ ಹೋಗಿ ಸೇರಿದ್ದಾರೆಂದು ತಿಳಿದು ಬಂತು. ನಮ್ಮಲ್ಲಿ ಬಂದಿದ್ದ ಕೆಲವು ಹೆಸರುಗಳನ್ನು ವೈಸ್ ಚಾನ್ಸಲರಿಗೆ ಕಳುಹಿಸಿ ಕೊಚ್ಚೆವು. ಕಮಿಟಿಯವರು ಅವನ್ನು ತೀರ್ಮಾನಿಸಬೇಕು. ಆಮೇಲೆ ಕಡಮೆಯಾದಂಥ 28 ಸ್ಥಾನಗಳಿಗೆ ಸರ್ಕಾರದವರು ಕಳುಹಿಸಿದಂಥ ಪಟ್ಟಿಯ ಹೆಸರುಗಳಲ್ಲಿ ನಾಲ್ಕಾರು ಹೆಸರುಗಳು ಸೇರಿರಬೇಕು, ಸರ್ಕಾರದವರು ಪಟ್ಟಿ ಕಳುಹಿಸಿದ್ದರಲ್ಲಿ ಕಮಿಟಿಯವರು ಫಿಲಪ್ ಮಾಡಿದ್ದು ಒಂದು ವಿಷಯದಲ್ಲಿ ಸರಿಎಂದು ನಾನು ಹೇಳುತ್ತೇನೆ.

Sri J. B. MALLARADHYA.—There is that notorious case, in the language of Sri Suntankar, of a candidate who was sent by Government was admitted to the Medical College as late as 1st November 1957.

In fact that University has made that allegation against Government. It has appeared very prominently in papers. It has laid the blame at the door of the Government.

Sri R. M. PATIL (Minister for Public Health).—Which college?

Sri J. B. MALLARADHYA.—The University has made that allegation specifically. To all professional and technical colleges Government are in the habit of sending their own candidates. Seats are reserved for them.

Sri R. M. PATIL.—I shall answer tomorrow.

ಶ್ರೀ ಬಿ. ರಾಚಯ್ಯ.—ಈಗ ನಾಲ್ಕೈದು ಪ್ರಾಂತಗಳು ಇಲ್ಲಿ ಸೇರಿರುವುದರಿಂದ ಕೆಲವು ಕಡೆ ಉತ್ತರ ಕರ್ಣಾಟಕದವರು ಮತ್ತು ದಕ್ಷಿಣ ಕರ್ಣಾಟಕದವರು ತಮ್ಮ ಪ್ರಾಂತದವರಿಗೆ ಮೆಡಿಕಲ್ ಕಾಲೇಜಿನಲ್ಲಿ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಲಿಲ್ಲವೆಂದು ಆರೋಪಣೆ ಮಾಡಿದ್ದಾರೆ. ಅದಕ್ಕಾಗಿ ಸರ್ಕಾರದವರು ಅವರಿಗೂ ಪ್ರಾತಿನಿಧ್ಯ ಕೊಡಬೇಕೆಂದು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಕಮಿಟಿಯವರು ಏನಾದರೂ ತೀರ್ಮಾನಮಾಡಿದ್ದಾರೆಯೇ?

ಶ್ರೀ ವಿ. ವೆಂಕಟಪ್ಪ.—ಈ ವರ್ಷಸ್ವಲ್ಪ ನಿಧಾನವಾಯಿತು. ಏಕೆಂದರೆ ಹೊರಗಡೆಯಿಂದ ಕೆಲವು ವಿದ್ಯಾರ್ಥಿಗಳು ಬರಬೇಕಾಗಿತ್ತು. ಆದ್ದರಿಂದ ಕಾಲೇಜಿಗೆ ಸರ್ಕಾರದವರು ಸೀಟುಗಳನ್ನು ಭರ್ತಿಮಾಡುವ ಹವ್ಯಾಸವನ್ನು ಇಟ್ಟುಕೊಂಡಿಲ್ಲ.

ಇನ್ನು ಉಪಾಧ್ಯಾಯರನ್ನು ರಿಜ್ಯೆರ್ ಮಾಡುವ ವಿಷಯದಲ್ಲಿ ಸಾಕಷ್ಟು ತರಪೇತಾದ ಜನ ಇಲ್ಲದಿದ್ದರೂ, ಅವರನ್ನು ಮುಂಚಿತವಾಗಿ ರಿಜ್ಯೆರ್ ಮಾಡಿದರೆ ಅವರು 58 ವರ್ಷದವರೆಗೂ ಇರಬಹುದು ಎಂದು ಹೇಳಲಾಗಿತ್ತು. ಅಂಥವರನ್ನು ರಿಜ್ಯೆರ್ ಮಾಡುವಂಥಾದ್ದು ಅದು ಸ್ವಲ್ಪ ಮಟ್ಟಿಗೆ ಕಾನೂನು ಬದ್ಧವಾಗಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ ಅದನ್ನು ಪರಿಶೀಲನೆಮಾಡಿನೋಡಿದ್ದೇವೆ. ಈಗಾಗಲೇ ಅನೇಕ ಉಪಾಧ್ಯಾಯರಗಳನ್ನು ತರಪೇತು ಮಾಡುವುದಕ್ಕೆ ಬೇಕಾದಷ್ಟು ಏರ್ಪಾಡುಮಾಡಿದೆ. ಸರಕಾರದ ಅನುಕೂಲ ಯಾವುದನ್ನೂ ಪಡೆಯದೆ ತಾವಾಗಿಯೇ ತರಪೇತಾದ ಜನರು ಬೇಕಾದಷ್ಟಿದ್ದಾರೆ. ಅದರಲ್ಲೂ ಮದ್ರಾಸ್ ಕರ್ಣಾಟಕದಲ್ಲಿ ನಂಗಳೂರಿಗೆ ನಾನು ಹೋದಾಗ ಕೆಲಸವಿಲ್ಲದೆ ಇರುವವರು ಸುಮಾರು 1600 ಜನರು ಇದ್ದರು. ನಾವು ಆ ರೀತಿಮಾಡಿರ ತಕ್ಕಂಥಾದ್ದು ಯಾವದ್ಯಷ್ಟಿಯಿಂದ ಎಂದರೆ ಹೊಸದಾಗಿ ಕೆಲಸಕ್ಕೆ ಬರುವವರಿಗೆ ಜಾಗ ಸಿಕ್ಕಬೇಕು; ಹಳಬರನ್ನು ಹೆಚ್ಚು ವರ್ಷಗಳು ಇಟ್ಟುಕೊಂಡರೆ ನಿರುದ್ಯೋಗದ ಕೂಗು ಬರುತ್ತದೆ ಎಂಬ ದೃಷ್ಟಿಯಿಂದ ಮಾಡಿದ್ದು, ಎಕ್ಸ್‌ಟೆಷ್ಷನ್ ಕೊಟ್ಟಿರುವವರನ್ನು ಇವತ್ತಿನ ದಿವಸ ತೆಗೆದುಹಾಕಿಲ್ಲ, ಅದರಲ್ಲಿ ಸರ್ವೀಸ್‌ಎಕ್ಸ್‌ಟೆಷ್ಷನ್ ಕೊಡಬೇಕೆಂದಿದ್ದುದನ್ನು ಕೆಲವರಿಗೆ ಕೆಲವು ನಿರ್ದಿಷ್ಟ ಗಳಲ್ಲಿಮಾತ್ರ ಮೂರು ವರ್ಷಗಳವರೆಗೂ ಎಕ್ಸ್‌ಟೆಷ್ಷನ್ ಕೊಟ್ಟಿದ್ದಾರೆ. ಶ್ರೀಪ್ರಾ ಮಲ್ಲಾರಾಧ್ಯರು ಹೇಳಿದಹಾಗೆ, ಚಿತ್ರದುರ್ಗದಲ್ಲಿ ಯಾರಿಗೂ ದೊರೆಯಲಿಲ್ಲ. ಅಲ್ಲಿ ಏನೋ ಅಚಾತುರ್ಯ ನಡೆದು ಅಲ್ಲಿನ ಡಿಸ್ಟ್ರಿಕ್ಟ್ ಎಜುಕೇಷ್ಷ ಆಫೀಸರ್ ಕೆಲವು ಕೇಸುಗಳನ್ನು ಸರಿಯಾಗಿ ಪರಿಶೀಲನೆಮಾಡಿ ಸಕಾಲದಲ್ಲಿ ಮೇಲಧಿಕಾರಿಗಳಿಗೆ ಕಳುಹಿಸದೇ ಇದ್ದುದರಿಂದ ಅದರಿಂದ ತೊಂದರೆಯಾಗಿದೆ. ಅದನ್ನು ವಿಮರ್ಶೆಮಾಡತಕ್ಕದ್ದನ್ನೂ ಮತ್ತು ಆ ರೀತಿ ನಂಬಿಂಧಪಟ್ಟ ಅಧಿಕಾರಿಗಳು ತಪ್ಪುಮಾಡಿದ್ದಕ್ಕೆ ಏನುಮಾಡಬೇಕೆಂಬುದನ್ನೂ ಯೋಚನೆ ಮಾಡಬೇಕಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಆ ಕಾರಣ ಏನಾದರೂ ಮಾಡಿ.

ಶ್ರೀ ವಿ. ವೆಂಕಟಪ್ಪ.—ನೋಡೋಣ. ಅದು ನೋಡಬೇಕಾದದ್ದೇ. ಆದ್ದರಿಂದ ನಿಜವಾಗಿಯೂ ಅನ್ಯಾಯವಾಗಿದ್ದರೆ ಅಂಥಾ ಉಪಾಧ್ಯಾಯರುಗಳ ವಿಷಯವನ್ನು ಪರಿಶೀಲನೆಮಾಡಿ ಸರಿಮಾಡಬೇಕಾದದ್ದು ಅಗತ್ಯ. ಎಲ್ಲಾ ಕಡೆಯೂ ಉಪಾಧ್ಯಾಯರುಗಳಿಗೆ ಮನೆಗಳನ್ನು ಕಟ್ಟಿಸುವುದಕ್ಕೆ ಏನಾದರೂ ಒಂದು ಏರ್ಪಾಡು ಮಾಡಬೇಕೆಂದು ಮಲ್ಲಾರಾಧ್ಯರು ಹೇಳಿದರು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಎಲ್ಲಾ ಕಡೆಯೂ ಅಲ್ಲ, ಕೇಳಿದ ಕಡೆ.

ಶ್ರೀ ವಿ. ವೆಂಕಟಪ್ಪ.—ಎಲ್ಲಾ ಕಡೆಯೂ ಸ್ಕೂಲುಗಳನ್ನು ಕೊಟ್ಟರೂ ಕೂಡ ಅಲ್ಲಿ ಮನೆಗಳು ಸಿಕ್ಕುವುದು ಕಷ್ಟ. ಅದರಲ್ಲಿ ಅನುಮಾನವಿಲ್ಲ. ಪಟ್ಟಣದಲ್ಲಿ ಆದರೆ ಬಾಡಿಗೆ ಮನೆ ಸಿಕ್ಕುತ್ತದೆ. ಹಳ್ಳಿಗಳಲ್ಲಿ ಸಿಕ್ಕುವುದಿಲ್ಲ. ಆದರೆ ಎಲ್ಲರಿಗೂ ಮನೆ ಕಟ್ಟಿಸಿಕೊಟ್ಟು ಅಲ್ಲಿಗೆ ಹೋಗಿ ಎಂದು ಹೇಳಬೇಕೆಂದರೆ ಅದು ಈಗ ಸದ್ಯದಲ್ಲಿ ಆಗತಕ್ಕ ಕೆಲಸವಲ್ಲ.

Sri J. B. MALLARADHYA.—Even where N.G.O.'s are allotted buildings, the School Master is neglected. I do not want every village to provide the School Master with a building, but where low-income-group houses are built, the teacher's case should not be neglected. That is my point.

ಶ್ರೀ ವಿ. ವೆಂಕಟಪ್ಪ.—ಯಾವುದಾದರೂ ಒಂದು ಪ್ರಮಾಣದಲ್ಲಿ ಏನಾದರೂ ಒಂದು ಅನುಕೂಲ ಮಾಡಬೇಕೆಂದು ಅವರು ಹೇಳಿದರು. ಡೆಪ್ಯೂಟಿ ಕಮೀಷನ

ರಿಗೆ ಆ ಕೆಲಸ ವಹಿಸಿರುವುದರಿಂದ ಬಹುಶಃ ಉಪಾಧ್ಯಾಯರುಗಳನ್ನು ಅವರು ಸ್ವಲ್ಪ ಕಡೆಗಣ್ಣಿನಿಂದ ನೋಡುತ್ತಾರೆ ಎಂದು ಅಭಿಪ್ರಾಯ ಇದೆ. ಪ್ರಯತ್ನ ಮಾಡಿ ಎಲ್ಲೆಲ್ಲಿ ಸರ್ಕಾರದವರು ಅಧಿಕಾರಿಗಳಿಗೆ ಮನೆಗಳನ್ನು ಕಟ್ಟಿಕೊಡುತ್ತಾರೋ ಅದರಲ್ಲಿ ಸ್ವಲ್ಪ ಭಾಗದ ಹಣವನ್ನು ಉಪಾಧ್ಯಾಯರುಗಳಿಗೆ ಮನೆಕಟ್ಟಿಸಿಕೊಡಲು ಉಪಯೋಗಿಸುವಂತೆ ಮಾಡಲು ಯೋಚನೆ ಮಾಡಬೇಕಾಗುತ್ತದೆ.

ಟಿಕ್ನಿಕಲ್ ಎಜ್ಯುಕೇಷ್ಣಗೆ ಎಲ್ಲಾಕಡೆಯೂ ಒಂದೇ ರೀತಿ ನಡೆಸುವುದಕ್ಕೆ ಏರ್ಪಾಡು ಮಾಡಲು ಒಂದು ಕಮಿಟಿ ಏರ್ಪಾಡು ಮಾಡಬೇಕೆಂದು ಸೂಚನೆ ಮಾಡಿದ್ದಾರೆ. ಈಗಾಗಲೇ ಟೆಕ್ನಿಕಲ್ ಎಜ್ಯುಕೇಷ್ಣ ಬೋರ್ಡ್ ಸ್ಥಾಪನೆ ಆಗಿದೆ. ಅವರು ಏನು ಮಾಡಬೇಕೆಂಬುದನ್ನು ಪರಿಶೀಲನೆ ಮಾಡುತ್ತಾ ಇದ್ದಾರೆ.

ಪೊಕೇಷನಲ್ ಗೈಡೆನ್ಸ್ ಬ್ಯೂರೋ ಆಗಬೇಕೆಂದು ಮಲ್ಲಾರಾಧ್ಯರು ಹೇಳಿದರು. ಅದನ್ನು ಪರಿಶೀಲನೆ ಮಾಡಿದ್ದಾರೆ. ಎಷ್ಟುಮಟ್ಟಿಗೆ ಸಾಧ್ಯವಾಗುತ್ತದೆಯೋ ನೋಡಬೇಕು. ಆ ರೀತಿ ಯಾವ ಯಾವ ಕೋರ್ಸಿಗೆ ಯಾವ ಯಾವ ಹುಡುಗರನ್ನು ಕಳುಹಿಸಬೇಕೆಂಬುದನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಇಲ್ಲವೇ ಎನ್ನುವುದರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ. ಆದ್ದರಿಂದ ಅದು ಎಷ್ಟುಮಟ್ಟಿಗೆ ಫಲಕಾರಿಯಾಗುತ್ತದೆ ಎಷ್ಟುಮಟ್ಟಿಗೆ ಮಾಡಬೇಕೆನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗಿದೆ.

ಹಣ ಇಷ್ಟೊಂದು ಒದಗಿಸಿದರೂ ಕೂಡ ಅನೇಕ ಸಂದರ್ಭದಲ್ಲಿ ಖರ್ಚು ಮಾಡುವುದಿಲ್ಲ. ಖರ್ಚು ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತಾರೆ. ಇದರಲ್ಲಿರತಕ್ಕ ಕಷ್ಟ ಅನೇಕರಿಗೆ ಗೊತ್ತಿಲ್ಲ. ಇತ್ತೀಚೆಗೆ ಅದರಲ್ಲೂ ಪ್ರೈಮರೀ ಸ್ಕೂಲು ಕಟ್ಟಡದಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಮಾಡಿರುವುದರಿಂದ ಆದಷ್ಟು ಹಣ ಖರ್ಚು ಮಾಡಬೇಕೆಂದು ಮಾಡಿದ್ದೇವೆ. ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನವರಿಂದ ಸ್ವಲ್ಪ ನಿಧಾನವಾಗುತ್ತಿದೆ. ತ್ವರಿತವಾಗಿ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಚೀಫ್ ಇಂಜನಿಯರು, ಎಜ್ಯುಕೇಷ್ಣ ಸೆಕ್ರೆಟರಿ, ಪಿ. ಡಬ್ಲ್ಯು. ಡಿ. ಸೆಕ್ರೆಟರಿ ಮತ್ತು ಫೈನಾನ್ಷಿಯಲ್ ಸೆಕ್ರೆಟರಿ ಅವರು ಸೇರಿ ಸ್ಪಷ್ಟವಾದ ಒಂದು ತೀರ್ಮಾನಕ್ಕೆ ಬರಬೇಕು. ಈ ರೀತಿ ಆದರೆ ಜಾಗ್ರತೆ ಈ ಕೆಲಸಗಳನ್ನು ಮಾಡುವುದಕ್ಕೆ ಆಗುತ್ತದೆ ಎಂದು ತೀರ್ಮಾನ ಮಾಡಿಕೊಂಡು ಇದ್ದೇವೆ. ಆದ್ದರಿಂದ ಎಷ್ಟು ಹಣವನ್ನು ಒದಗಿಸಿದ್ದೇವೆಯೋ ಅಷ್ಟು ಹಣವನ್ನು ಖರ್ಚು ಮಾಡಬೇಕೆಂದು ಉದ್ದೇಶವೇ ಹೊರತು ಅದನ್ನು ಉಳಿಸಿ ಅದರಿಂದ ಜನಗಳಿಗೆ ತೊಂದರೆ ಮಾಡಬೇಕೆಂದು ಉದ್ದೇಶವಿಲ್ಲ. ಎಷ್ಟುಮಟ್ಟಿಗೆ ಸಾಧ್ಯವೋ ಅಷ್ಟುಮಟ್ಟಿಗೆ ಖರ್ಚು ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಸ್ಕೌಟ್ ಮತ್ತು ಗೈಡ್ ಮೂವ್‌ಮೆಂಟಿಗೆ ಸಾಕಾದಷ್ಟು ಹಣ ಒದಗಿಸಿಲ್ಲ, ಬಹಳ ಕಾಲದಿಂದ ಅದನ್ನು ಒತ್ತಾಯ ಮಾಡುತ್ತಾ ಇದ್ದೇವೆ. ಎಸ್.ಸಿ.ಸಿ. ಮತ್ತು ಎ.ಸಿ.ಸಿ.ಗೆ ಹೆಚ್ಚು ಹಣ ಒದಗಿಸಲಾಗಿದೆ ಅದು ಇತ್ತೀಚೆಗೆ ಬಂದಂಥಾದ್ದು ಎಂದು ಹೇಳಿದ್ದಾರೆ. ಹಿಂದೆ ಒಂದು ಸಲ ನಾನು ಹೇಳಿದೆ. ನಾಲ್ಕು ಆರು ಸಂಸ್ಥೆಗಳಿರುವುದರಿಂದ ಏನಾದರೂ ಒಂದು ವ್ಯವಸ್ಥೆ ಮಾಡಿ.

Sri L. B. BIRJE.—The A.C.C. teachers have not been given any allowance for the last two years.

ಶ್ರೀ ಎ. ವೆಂಕಟಪ್ಪ.—ಶ್ರೀ ಮಲ್ಲಾರಾಧ್ಯರು ವಿದ್ಯಾರ್ಥಿಗಳ ವಿಷಯದಲ್ಲಿ ಒಂದು ಶಿನ್ನು ಬರ ಬೇಕಾದರೆ ಅಂಥ ಸಂಸ್ಥೆಗಳು ಇರಬೇಕೆಂದು ಹೇಳುತ್ತಾರೆ, ಅದು ಅಗತ್ಯ ಎಂದು ಹೇಳಬೇಕಾಗಿದೆ. ಎಸ್. ಸಿ. ಸಿ. ಮತ್ತು ಎ.ಸಿ.ಸಿ.ಗೆ ಇಂಡಿಯಾ ಸರ್ಕಾರದವರು ಬಹುಭಾಗ ಹಣವನ್ನು ಕೊಡುತ್ತಾರೆ, ಆದ್ದರಿಂದ ಇದಕ್ಕೆ ಹೆಚ್ಚು ಹಣ ಖರ್ಚು ಮಾಡುವುದಕ್ಕೆ ಅವಕಾಶವಿದೆ ಎಂದು ಕಾಣುತ್ತಾ ಇದೆ.

Sri J. B. MALLARADHYA.—I have got 8 more districts now, but still you ask me to carry on with the same amount as before.

ಶ್ರೀ ಎ. ವೆಂಕಟಪ್ಪ.—ಹೊಸ ಮೈಸೂರು ಆದ ಮೇಲೆ ಬೇರೆ ಕಡೆಗಳಲ್ಲಿ ಇದಕ್ಕೆ ಸಾಕಾದಷ್ಟು ಹಣ ಒದಗಿಸಿಲ್ಲ ಎಂದು ಹೇಳುತ್ತಾರೆ. ಅಲ್ಲಿ ಬೇರೆ ಪರಿಸ್ಥಿತಿ ಇದೆ. ಆದ್ದರಿಂದ ಅದನ್ನು ಸೇರಿಸಿಲ್ಲ. ಸ್ಕೌಟ್ಸ್‌ಗೆ ಸಾಕಾದಷ್ಟು ಹಣ ಒದಗಿಸಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ಒಂದು ಲಕ್ಷ ರೂಪಾಯಿ ಬೇರೆ ಕಡೆ ಒದಗಿಸಿದೆ ಎಂದು ಆಗಲೇ ಹೇಳಿದೆ. ಫ್ಲೇಗ್‌ಕ್ರಾಂಡಿಗೆ ಹಣ ಒದಗಿಸಿಲ್ಲ ಎಂದು ಹೇಳಿದರು. ಹೋದ ಸಲ ಒದಗಿಸಿದ್ದ ಹಣ ಅಲ್ಲಂಥೆ . . . .

ಶ್ರೀ ಜೆ. ಬಿ. ಮಲ್ಲಾರಾಧ್ಯ.—74 ಸಾವಿರ ರೂಪಾಯಿ ಒದಗಿಸಿತು; ಈಸಲ ಒಂದು ಕಾಸೂ ಇಲ್ಲ.

ಶ್ರೀ ಎ. ವೆಂಕಟಪ್ಪ.—ಈ ಸಲ ಒದಗಿಸಿಲ್ಲ; ಅಗತ್ಯ ಬಿದ್ದರೆ ಬೇರೆ ಕಡೆಯಿಂದ ಹಣ ಒದಗಿಸುವುದಕ್ಕೆ ಸಾಧ್ಯವಿದೆ. ಅಲ್ಲದೆ ಸ್ಪೋರ್ಟ್ಸ್ ಫಂಡ್ ಎಂದು ಹೇಳಿ ಅನೇಕ ಸ್ಕೂಲುಗಳಲ್ಲಿ ಅವರಿಗೆ ಕೊಟ್ಟಿರುವ ಹಣ ಖರ್ಚಾಗದೇ ಹಾಗೆಯೇ ನಿಂತು ಹೋಗಿದೆ. ಅಂಥಹಣವನ್ನು ಇದಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ, ಸಾಧ್ಯವಾಗುತ್ತದೆಯೇ ಹೇಗೆ ಎಂದು ಯೋಚನೆ ಮಾಡುತ್ತಾ ಇದ್ದೇವೆ. ಅನೇಕ ಸಂದರ್ಭಗಳಲ್ಲಿ ಅಗತ್ಯವಾದ ಸ್ಪೋರ್ಟ್ಸ್ ಮೆಟೀರಿಯಲ್ಸ್ ಒದಗಿಸಿಕೊಳ್ಳುವುದಕ್ಕೆ ಪರ್ಮಿಷ್ಣ ಕೊಟ್ಟಿದ್ದೇವೆ. ಬಹಳ ದಿವಸಗಳಿಂದ ಪರ್ಮಿಷ್ಣ ಕೊಟ್ಟಿಲ್ಲದೆ ಇದ್ದುದರಿಂದ ಈ ರೀತಿ ಹಣ ಉಳಿಯಬೇಕಾಗಿ ಬಂತು. ಬೆಂಗಳೂರಿನಲ್ಲಿ ಬ್ಯಾಸ್ಕೆಟ್‌ಬಾಲ್ ಮತ್ತು ಕ್ರಿಕೆಟ್ ಸ್ಪೋರ್ಟ್ಸ್‌ಗೆ ಸ್ಥಳಬೇಕೆಂದು ಕೇಳಿದ್ದಾರೆ. ಅದಕ್ಕೆ ಎಲ್ಲ ಸ್ಥಳ ಇದೆ ಎನ್ನುವುದನ್ನು ಪತ್ತೆ ಹಚ್ಚಿ . . . .

ಶ್ರೀ ವೈ. ವೀರಪ್ಪ.—ನುಭಾಷ್ ನಗರದಲ್ಲಿ ಕೊಡಬೇಕೆಂದು ಅರ್ಜಿ ಹಾಕಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸರಿಯಾದ ಜಾಗ ಚೀಫ್ ಮಿನಿಸ್ಟರ್‌ಅವರಿಗೂ ಮತ್ತು ತಮಗೂ ಸೂಚಿಸಿದ್ದೇವೆ. ಮಹಾತ್ಮಗಾಂಧಿರೋಡ್‌ನಲ್ಲಿ next to the place where you propose to build the Cancer Institute. I hear that the programme to build the Cancer Institute there is dropped because of the unsuitability of the place for that.

Sri R. M. PATIL.—Your information is not correct. The Cancer Institute is to be established there and it will be established.

Sri J. B. MALLARADHYA.—Even if the Hospital comes there, you will find in us very good neighbours.

ಶ್ರೀ ಜಿ. ವೆಂಕಜೇಗೌಡ (ಪ್ರಾಳ್ಯಂ).—ಫಿಸಿಕಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ತೆಗೆಯಬೇಕು.

ಶ್ರೀ ವಿ. ವೆಂಕಟಪ್ಪ.— ಹೌದು, ಅದಕ್ಕೆ ಒಂದು ಏರ್ಪಾಡು ಮಾಡಬೇಕೆಂದು ಇದ್ದೇವೆ. ಸಾಧ್ಯವಾದರೆ ಕೆಲವು ಕಡೆ ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಕೊಂಡಿದ್ದೇವೆ. ಪ್ರೈಮರಿ ಸ್ಕೂಲುಗಳಿಗೆ ಸಾಕಾದಷ್ಟು ಎಕ್ಸ್‌ಪೆಂಟ್ ಇಲ್ಲ ಎಂದು ಹೇಳಿದ್ದಾರೆ. ಇದು ಬಹಳ ದಿವಸದಿಂದ ಇರುವ ಕೊರತೆ, ಒಂದೇಸಲ ಎಲ್ಲಾ ಕಡೆಯೂ ಎಲ್ಲಾ ಅನುಕೂಲಗಳನ್ನೂ ಮಾಡಿಕೊಡುವುದಕ್ಕಾಗುವುದಿಲ್ಲ. ಯಾವ ಸ್ಕೂಲನ್ನು ಹೊಸದಾಗಿ ಸ್ಥಾಪನೆ ಮಾಡುತ್ತೇವೋ ಆ ಸ್ಕೂಲಿಗೆ ಅಗತ್ಯವಾಗಿ ಏನು ಬೇಕೋ ಅದನ್ನು ಆಗಲೇ ಮಂಜೂರುಮಾಡುವ ಏರ್ಪಾಡು ಇದೆ. ಬೇಸಿಕ್ ಸ್ಕೂಲುಗಳು ಎಷ್ಟೋ ಇವೆ. ಅದಕ್ಕೂ ಕೂಡ ಪ್ರಾರಂಭ ಮಾಡುವಾಗಲೇ ಏನು ಅನುಕೂಲ ಬೇಕೋ ಅದನ್ನು ಮಾಡಿಕೊಡುವ ಏರ್ಪಾಡು ಇದೆ. ಬೇಸಿಕ್ ಎಜ್ಯುಕೇಷನ್ ವಿಷಯದಲ್ಲಿ ಸಾಕಾದಷ್ಟು ತರಬೇತಾದ ಉಪಾಧ್ಯಾಯರುಗಳು ಇಲ್ಲ ಎಂಬುದು ನಿಮಗೆ ಗೊತ್ತಿದೆ.

ಆದರೆ ಇವು ನಮ್ಮ ಹಳೆಯ ಮೈಸೂರಿನಲ್ಲಿ ಬರಿ ಹೆಸರಿಗೆ ಮಾತ್ರ ಇರುತ್ತವೆಂದು ಹೇಳಿದರೆ ತಪ್ಪಾಗಲಾರದು. ಅಷ್ಟೇನೂ ಸಮರ್ಪಕವಾಗಿ ಇಲ್ಲಿ ನಡೆಯುತ್ತಿಲ್ಲ. ಆದರೆ ಈ ವಿದ್ಯಾಭ್ಯಾಸ ಕ್ರಮ ಬೊಂಬಾಯಿ ಕರ್ನಾಟಕದಲ್ಲಿ ಬಹುಮಟ್ಟಿಗೆ ಚೆನ್ನಾಗಿ ನಡೆಯುತ್ತಿದೆ. ಕೊಡಗು ಜಿಲ್ಲೆಯಲ್ಲೂ ಕೂಡ ಚೆನ್ನಾಗಿ ನಡೆಯುತ್ತಿದೆ. ಇನ್ನು ಈ ಸ್ಕೂಲು ಕಟ್ಟಡಗಳ ವಿಚಾರದಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿರತಕ್ಕವರಿಗೆ ಹೇಗೆ ಅನುಕೂಲ ಮಾಡಿಕೊಡುತ್ತಿದ್ದೀರೋ ಹಾಗೇ ನಮಗೂ ಅನುಕೂಲ ಮಾಡಿ ಕೊಡಬೇಕೆಂದು ಕೆಲವರು ಕೇಳಿಕೊಂಡಿದ್ದಾರೆ.

ಈ ಬಗ್ಗೆ ಬೊಂಬಾಯಿ ಕರ್ನಾಟಕ ಪ್ರಾಂತ್ಯದಲ್ಲಿ ಚೆನ್ನಾಗಿ ತರಬೇತು ಪಡೆದಿದ್ದವರೊಬ್ಬ ಅಧಿಕಾರಿಗಳನ್ನು ಈ ಪ್ರಾಂತಕ್ಕೆ ವರ್ಗಾಯಿಸಿ ಅವರ ಮೂಲಕ ಉಪಾಧ್ಯಾಯರುಗಳಿಗೆ ತಕ್ಕ ಶಿಕ್ಷಣ ತರಬೇತುಗಳನ್ನು ಕೊಡಿಸಿ ಇಲ್ಲಿ ಈ ಕಾರ್ಯವನ್ನು ಚೆನ್ನಾಗಿ ನಡೆಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇಂಥ ಒಂದು ಏರ್ಪಾಡನ್ನು ನಾವು ಈಗ ಹಳೆಯ ಮೈಸೂರಿನಲ್ಲಿ ಜಾರಿಗೆ ತರಬೇಕೆಂದು ಮಾಡಿದ್ದೇವೆ. ಇನ್ನು ಕಟ್ಟಡಗಳ ವಿಚಾರವನ್ನು ಅನೇಕರು ಹೇಳಿದ್ದಾರೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ದಿವಸ ಅನೇಕ ವಿದ್ಯಾ ಸಂಸ್ಥೆಗಳಿರುತ್ತವೆ. ಆ ಕಟ್ಟಡಗಳ ಬಗ್ಗೆ ಸರ್ಕಾರದವರು ಒಂದು ಕಾಸನ್ನೂ ಕೊಟ್ಟಿಲ್ಲ. ಎಲ್ಲ ಕಡೆಗಳಲ್ಲೂ ಆ ಕಟ್ಟಡಗಳನ್ನೆಲ್ಲ ಅಲ್ಲಿರತಕ್ಕ ಜನಗಳೇ ಕಟ್ಟಿಸಿಕೊಟ್ಟಿದ್ದಾರೆ. ಬೊಂಬಾಯಿ ಕರ್ನಾಟಕದ ಪರಿಸ್ಥಿತಿ ಈ ದಿವಸ ಹೇಗಿರುತ್ತೆಂಬ ವಿಚಾರ ತಮಗೆಲ್ಲರಿಗೂ ಗೊತ್ತಿದೆ. ಆದರೆ ಈಗಿನಹೊಸ ಪದ್ಧತಿ ಪ್ರಕಾರ ಯಾರನ್ನೂ ಈ ಕಟ್ಟಡದ ಬಗ್ಗೆ ನಿರ್ಬಂಧ ಮಾಡಬೇಕಾಗಿಲ್ಲವೆಂದು ನಾವು ತಿಳಿಸಿದ್ದೇವೆ. 1942ನೆಯ ಇಸವಿಯಿಂದ ಹಣ ಡಿಪಾಜಿಟ್ ಮಾಡಿ ಕಟ್ಟಡ ಕೇಳಿಕೊಳ್ಳುತ್ತಿದ್ದವರಿಗೆ ಇನ್ನೂ ಕಟ್ಟಡಗಳನ್ನ ಕೊಟ್ಟಿಲ್ಲವೆಂದು ಕೆಲವರು ತಿಳಿಸಿದರು. ಹಾಗೆ ಸಾರ್ವಜನಿಕರ ಅಷ್ಟು ಹಣವನ್ನು ಸರ್ಕಾರದವರು ಇಷ್ಟು ಕಾಲ ಇಟ್ಟುಕ್ಕೊಂಡಿದು ದಕ್ಕಾಗಿ ಅವರು ಈಗ ಎಷ್ಟು ಹಣವನ್ನು ಡಿಪಾಜಿಟ್ ಮಾಡಿರುತ್ತಾರೋ ಅಷ್ಟನ್ನೇ ತೆಗೆದುಕೊಂಡು ಬಾಕಿ ಹಣವನ್ನ ಸರ್ಕಾರದವರೇ ಹಾಕಿ ಅಂಥ ಕಡೆಗಳಲ್ಲೆಲ್ಲಾ ಕಟ್ಟಡ ಕಲ್ಪಿಸಿ ಪೂರ್ತಿಮಾಡಿಕೊಡತಕ್ಕಂಥ ಏರ್ಪಾಡನ್ನೀಗ ನಾವು ಮಾಡಿದ್ದೇವೆ.

ಇನ್ನು ಆ ಮಲ್ಟಿಪರ್ಪಸ್ ಸ್ಕೂಲುಗಳ ವಿಚಾರವೂ ಹಾಗೆ ಇದೆ. ಈ ವಿಚಾರದಲ್ಲೂ ಹಾಗೆಯೇ ಮಾಡಬೇಕೆಂದು ನಾವು ಏರ್ಪಾಡನ್ನು ಮಾಡಿಕೊಂಡಿದ್ದೇವೆ. ಈ ಮಲ್ಟಿಪರ್ಪಸ್ ಶಾಲೆಗಳನ್ನೇ ಆಗಲಿ ಅಥವಾ ಬೇರೆ ಯಾವ ಶಾಲೆಗಳನ್ನೇ ಆಗಲಿ ಪೊದಲು ಆ ಶಾಲೆಗಳಿಗೆ ಬೇಕಾಗಿರುವಂಥ ಉಪಕರಣಗಳು ಸಲಕರಣೆಗಳೂ ಏನೇನು ಇರುತ್ತವೋ ಅವುಗಳನ್ನೂ ಮತ್ತು ಆ ಬಗ್ಗೆ ಬೇಕಾಗಿರುವಂಥ ಕಟ್ಟಡ ಇವುಗಳನ್ನೆಲ್ಲ ಒದಗಿಸಿ ಕೊಂಡನಂತರವೇ ಈ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ತಿಳಿಸಿದ್ದೇವೆ. ಇದಕ್ಕೆಲ್ಲ ಮೊದಲು ತರಹೇತಾದಂಥ ಜನಗಳು ಬೇಕು. ನಾನಾಗಲೇ ಹೇಳಿದಂತೆ ಕಟ್ಟಡಗಳು ಬೇಕು. ಆ ಸಾಮಾನುಗಳನ್ನಿಡುವುದಕ್ಕೆ ಬೇರೆ ಸ್ಥಳ ಸೌಕರ್ಯಬೇಕು. ಆದರೆ ಇವಿಷ್ಟೂ ಆಗದೆ ಇರತಕ್ಕದ್ದು ನಿಜವಾಗಿಯೂ ಒಂದು ವಿಪಾದಕರವಾದ ಸಂಗತಿ ಆದರೆ ಈ ದಿವಸ ಗುಲ್ಬರ್ಗದಲ್ಲಿ ಹೆಸರಿಗೆ ಮಾತ್ರ ಇಂಥ ಒಂದು ಸ್ಕೂಲಿದ್ದು ಅವರಿಗೆ ಈ ದಿವಸ ಅಲ್ಲಿರತಕ್ಕಪದಾರ್ಥಗಳನ್ನು ಕೂಡ ಉಪಯೋಗಮಾಡಿಕೊಳ್ಳಲು ಒಂದು ಅವಕಾಶ ಸಿಕ್ಕದಿರುವುದು ಸರಿಯಲ್ಲ. ಈ ವಿಚಾರದಲ್ಲಿ ನಾವೊಬ್ಬರೇ ತಪ್ಪು ಮಾಡಿಲ್ಲ. ಅವರೂ ಸಹ ತಪ್ಪುಮಾಡಿದ್ದಾರೆಂದು ಕಾಣುತ್ತಿದೆ.

ಇನ್ನು ಶಾಲೆಗಳಲ್ಲಿ ಮಧ್ಯಾಹ್ನದ ಉಪಾಹಾರಕ್ಕಾಗಿ ಒಂದು ಏರ್ಪಾಡನ್ನು ಮಾಡಿದ್ದೇವೆ. ಈ ಬಾಬಿಗೆ ನಾವು ಈ ಸಾಲಿನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿರುವುದೇ ಅಲ್ಲದೆ ಈ ದಿವಸ ಆ ಕೊಡಗಿನಲ್ಲಿ ಏನು ಒಂದು ವ್ಯವಸ್ಥೆ ನಡೆದುಕೊಂಡು ಬರುತ್ತಿದೆಯೋ ಆ ಮಾದರಿಯಲ್ಲಿ ಬಾಕಿ ಕಡೆಗಳಿಗೂ ಅದನ್ನು ಒದಗಿಸಿ ಕೊಡಬೇಕೆಂದು ಕೇಳಿದ್ದಾರೆ. ಹಾಗೆ ಉಪಾಧ್ಯಾಯರಿಗೂ ಮತ್ತು ಹುಡುಗರಿಗೂ ಒಂದು ಅನುಕೂಲವಾಗಿ ರತಕ್ಕಂಥ ವ್ಯವಸ್ಥೆಯನ್ನು ಜಾರಿಗೆ ತರಲು ಎಷ್ಟರ ಮಟ್ಟಿಗೆ ಸಾಧ್ಯವಿದೆಯೆಂಬುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ.

ಇನ್ನು ಕೆಲವು ಸ್ಕೂಲುಗಳಲ್ಲಿ ಈ ಫ್ಯೆನಾಟ್ಸ್‌ನ ಬಗ್ಗೆ ಅನುಕೂಲಗಳನ್ನೊದಗಿಸಿ ಕೊಡಬೇಕೆಂದು ಕೇಳಿದ್ದಾರೆ. ಆ ಬಗ್ಗೆ ಶ್ರೀ ಮಲ್ಲಾರಾಧ್ಯರು ಕೆಲವು ವಿಷಯ ತಿಳಿಸಿದ್ದಾರೆ. ಈಗ ಈ ಸ್ಕೂಲುಗಳೂ ಕೆಲವು ಕಡೆ ಇವೆ. ಆದರೆ ಅವುಗಳೆಲ್ಲ ಒಂದು ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡುತ್ತಿವೆಯೆಂದು ಹೇಳುವುದಕ್ಕಾಗುವುದಿಲ್ಲ. ಈ ಕುಂದು ಕೊರತೆಗಳೆಲ್ಲ ಒಂದು ದಿನದಲ್ಲಿ ಆದವುಗಳಲ್ಲ. ಇವುಗಳನ್ನು ಒಂದೇ ಸಲಕ್ಕೆ ಕ್ರಮಪಡಿಸುವುದಕ್ಕೂ ಸಾಧ್ಯವಿಲ್ಲ. ಕ್ರಮಕ್ರಮವಾಗಿ ಇವುಗಳನ್ನು ನುವ್ಯವಸ್ಥಿತಿಗೆ ತರಬೇಕಾಗಿದೆ.

ಇನ್ನು ನರ್ಸರಿ ಸ್ಕೂಲುಗಳನ್ನು ಎಲ್ಲ ಕಡೆಗಳಲ್ಲೂ ತೆರೆಯಲು ಏರ್ಪಾಡನ್ನು ಮಾಡಬೇಕೆಂಬ ಭಾವನೆ ಸರ್ಕಾರದವರಿಗೂ ಇದೆ. ಆದರೆ ಈ ದಿವಸ ಈ ಸ್ಕೂಲುಗಳು ಯಾವಯಾವ ಕಡೆಗಳಲ್ಲಿ ಯಾವ್ಯಾವ ರೀತಿಯಲ್ಲಿರುತ್ತದೆಂಬುದನ್ನು ಪರಿಶೀಲನೆ ಮಾಡಿದಲ್ಲಿ ಒಂದೊಂದು ಪ್ರದೇಶದಲ್ಲಿ ಇವು ಒಂದೊಂದು ರೀತಿಯಲ್ಲಿರುತ್ತವೆ. ಈ ಬಗ್ಗೆ ಉಪಾಧ್ಯಾಯರುಗಳಿಗೆಲ್ಲ ಒಂದೇ ಮಾದರಿ ತರಬೇತನ್ನು ಯಾವ ರೀತಿ ಕೊಡಲು ಸಾಧ್ಯ ಎಂಬುದನ್ನು ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ಏರ್ಪಾಡು ಮಾಡಿದೆ. ಆ ಸಮಿತಿಗೆ ಶ್ರೀ ಜೆ. ಬಿ. ಮಲ್ಲಾರಾಧ್ಯರೇ ಅಧ್ಯಕ್ಷರಾಗಿದ್ದಾರೆ. ಈ ಕಾರ್ಯವನ್ನು ಎಲ್ಲ ಕಡೆಗಳಲ್ಲೂ ಒಂದೇ ಮಾದರಿಯಲ್ಲಿ ನಡೆಸಲಕ್ಕೆ ಸಾಧ್ಯವಿದೆಯೇ ಎಂಬುದನ್ನೂ ಕೂಡ ನಾವಿನ್ನೂ ಆಲೋಚನೆಮಾಡುತ್ತಿದ್ದೇವೆ. ಇನ್ನು ನಮಗೆ ವಿದ್ಯಾದಾನ ಭೂದಾನ ಚಳವಳಿಯಲ್ಲಿ ಇಲ್ಲಿಯವರೆಗೆ 31 ಸಾವಿರ ಎಕರೆ ಜಮೀನು ನಮ್ಮ ಕೈಗೆ ಬಂದಿದೆ. ಈ ಪೈಕಿ ಈ ವರ್ಷ ಸುಮಾರು 15 ಸಾವಿರ ಎಕರೆಗಳು ಸ್ವಾಧೀನಕ್ಕೆ ಬಂದಿರುವುದಾಗಿ ವರದಿ ಬಂದಿದೆ. ಇವರಲ್ಲಿ ಒಂಭತ್ತು ಸಾವಿರ ಎಕರೆಗಳಲ್ಲಿ

ವ್ಯವಸಾಯ ಮಾಡಲಾಗುತ್ತಿದೆ. 20ಸಾವಿರ ರೂಪಾಯಿಗಳ ಉತ್ಪತ್ತಿ ಈ ಬಾಬಿನಲ್ಲಿ ಬಂದಿದೆ. 500 ಪಲ್ಲದವನ ಉತ್ಪತ್ತಿಯಾಗಿದೆ. ಈ ಬಗ್ಗೆ ನಾವೇನು ಖರ್ಚುಮಾಡಿದ್ದೆವೋ ಅದನ್ನೆಲ್ಲ ಹಿಂದಕ್ಕೆ ಕೊಡಬೇಕೆಂದು ನಿಯಮವಿದೆ. ಐದು ಸಾವಿರ ರೂಪಾಯಿಗಳು ಖರ್ಚಾದ್ದರಲ್ಲಿ ಮೂರು ಸಾವಿರ ಮಾತ್ರ ಈಗ ಹಿಂದಕ್ಕೆ ಬಂದಿದೆ. ಆದರೆ ಈ ವಿಚಾರದಲ್ಲಿ ಈ ದಿವನ ಎಲ್ಲೋ ಒಂದು ಕಡೆ ಭೂಮಿ ಇದ್ದು, ಎಲ್ಲೋ ಒಂದು ಕಡೆ ಸ್ಕೂಲಿದ್ದರೆ ಇದರಿಂದ ಏನು ಪ್ರಯೋಜವಾಗುತ್ತದೆಯೆ ಶ್ರೀ ಮಲ್ಲಾರಾಧ್ಯರವರು ಕೇಳಿದ್ದಾರೆ. ಹೌದು. ಆ ವಿಚಾರದಲ್ಲೇನೂ ಭಿನ್ನಾಭಿಪ್ರಾಯವೇ ಇಲ್ಲ. ಆದರೆ ಎಲ್ಲೆಲ್ಲಿ ಸ್ಕೂಲುಗಳೂ ಮತ್ತು ಈ ಜಮೀನುಗಳೂ ಅಕ್ಕಪಕ್ಕದಲ್ಲೇ ಹೊಂದಾವಣಿಕೆಯಾಗಲು ಅನುಕೂಲವಿರುವುದೋ ಅಂಥ ಕಡೆಗಳಲ್ಲಿ ಮಾತ್ರ ಸಾಧ್ಯವಿರುವಷ್ಟು ಸ್ಕೂಲುಗಳನ್ನು ಆ ಹಳ್ಳಿ ಜನರಿಗೆ ಒದಗಿಸಲು ಪ್ರಯತ್ನವನ್ನು ಮಾಡಬೇಕೆಂದಿದ್ದೇವೆ. ಹೀಗೆ ಮಾಡದೆ ಹೋದರೆ ಈ ಬೇಸಿಕ್ ಎಜ್ಯುಕೇಷನ್ನಿನಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ದಿವನ ಈ ಬಾಬಿನಿಂದ ಬರತಕ್ಕ ಉತ್ಪತ್ತಿಯಲ್ಲಿ ಕೊಂಚ ಭಾಗವನ್ನು ಆ ಮಧ್ಯಾಹ್ನದ ಊಟಕ್ಕೆ ಹುಡುಗರಿಗೂ ಕೆಲವು ಉಪಾಧ್ಯಾಯರಿಗೂ ಅನುಕೂಲಮಾಡಬೇಕೆಂಬ ಉದ್ದೇಶವಿದೆ. ಈಗಿರತಕ್ಕನರ್ಕಾರಿ ಆರ್ಡರಿನಲ್ಲೂ ಹಾಗೆಯೇ ಇದೆ. ಇನ್ನೂ ನಮ್ಮ ಸ್ವಾಧೀನಕ್ಕೆ ಬಾರದೆ ಇರುವ ಜಮೀನು ಯಾರು ಕೊಟ್ಟಿದ್ದಾರೆ ಎಲ್ಲಿವೆ ಎನ್ನುವುದೊಂದೂ ಗೊತ್ತೇ ಆಗುತ್ತಿಲ್ಲ. ಆ ಕಷ್ಟವೂ ಇದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕೆಲವರು ನರ್ಕಾರಿ ಗೋಮಾಳವನ್ನೇ ಈ ಸ್ಕೂಲುಗಳಿಗೆ ದಾನವಾಗಿ ಬರೆದುಕೊಟ್ಟಿದ್ದಾರೆಂಬ ವದಂತಿ ನಿಜವೇ?

ಶ್ರೀ ವಿ. ವೆಂಕಟಪ್ಪ.—ಹೌದು ಅಂಥಾದ್ದು ಕೆಲವು ನಿದರ್ಶನಗಳಿರಬೇಕು. ಆದರೆ ಇನ್ನೂ ಕೆಲವು ಜಮೀನುಗಳ ವಿಚಾರದಲ್ಲಿ ಬರೆದುಕೊಟ್ಟಿರತಕ್ಕವನೊಬ್ಬ, ಆ ಜಮೀನು ಮಾಲಿಕ ಮತ್ತೊಬ್ಬ, ಅದರ ಫಲವನ್ನು ಅನುಭವಿಸುತ್ತಿರುವವನು ಇನ್ನೊಬ್ಬ. ಹೀಗೆಲ್ಲಾ ಇದೆ.

ಇನ್ನು ಶ್ರೀ ಕೌಜಲ್ಗಿಯವರು ಬೊಂಬಾಯಿನಲ್ಲಿ S.S.C. ಪರೀಕ್ಷೆ ಹುಡುಗರು ಹೋಗಿರತಕ್ಕ ವಿಚಾರ ಪ್ರಸ್ತಾಪಮಾಡಿರುತ್ತಾರೆ. ಅಲ್ಲದೆ ಆ ಪರೀಕ್ಷೆಯು ನಡೆಸಲ್ಪಡತಕ್ಕ ಕಾಲದಲ್ಲಿ ಅಲ್ಲಿ ಸಾಕಷ್ಟು ಬಿಗಿ ಇರಲಿಲ್ಲವೆಂದು ಒಂದು ಆಪಾದನೆ ಕೂಡ ಮಾಡಿದ್ದಾರೆ. ಆದರೆ ಅಲ್ಲಿ ನಮ್ಮ ಮೈಸೂರು ನರ್ಕಾರದ ಪರವಾಗಿಯೇ ಪರೀಕ್ಷೆ ನಡೆಸಬೇಕೆಂದು ಏರ್ಪಾಡನ್ನು ಮಾಡಲಾಗಿತ್ತು. ಆದರೆ ಆ ಪರೀಕ್ಷೆಗೆ ಕುಳಿತಿದ್ದಂಥ ವಿದ್ಯಾರ್ಥಿಗಳು ಇಲ್ಲಿಯ ನರ್ಕಾರಕ್ಕೂ ಮತ್ತು ಕೇಂದ್ರ ನರ್ಕಾರಕ್ಕೂ ಪತ್ರಗಳನ್ನು ಬರೆದು ಕೊಂಡಿದ್ದರು. ಬಹುಶಃ ಆ ಹುಡುಗರುಗಳೆಲ್ಲ ಬೊಂಬಾಯಿನಲ್ಲಿ ನಡೆಸಲ್ಪಟ್ಟ S.S.C. ಪರೀಕ್ಷೆಗೆ ಕುಳಿತರೆ ಮುಂದೆ ಅವರಿಗೆ ಬೊಂಬಾಯಿನಲ್ಲಿ ಹೈಯರ್ ಎಜ್ಯುಕೇಷ್ಷ ಬಗ್ಗೆ ಕಾಲೇಜುಗಳಲ್ಲಿ ಸೀಟುಗಳು ದೊರೆಯಲು ಅನುಕೂಲವಾಗುತ್ತದೆ. ಇಲ್ಲವಾದರೆ ಮುಂದೆ ಅವರಿಗೆ ಅಲ್ಲಿ ಸೀಟ್ ದೊರೆಯಲು ಸ್ವಲ್ಪ ತೊಂದರೆಯಾಗಬಹುದೆಂಬ ಉದ್ದೇಶದಿಂದ ಆ ರೀತಿ ಅವರೆಲ್ಲ ಕೇಳಿದ್ದರು. ಅದಕ್ಕಾಗಿ ನಾವು ಅವರ ಬೇಡಿಕೆಗೆ ಒಪ್ಪಬೇಕಾಗಿ ಬಂತು. ಯಾರಿಗೂ ಒಂದು ತೊಂದರೆ ಆಗಲೆ ಎಂಬ ಉದ್ದೇಶ ಅದರಲ್ಲಿ ನಮಗಿಲ್ಲ. ಅಥವಾ ನರ್ಕಾರದವರು ತಮ್ಮ ಒಂದು ಪೈಸ್ವಿಚ್ಛೈನಿಂಧೇನೂ ಹಾಗೆ ಮಾಡಲಲ್ಲ. ಈ ವರ್ಷದ ಮಟ್ಟಿಗೆ ವಿದ್ಯಾರ್ಥಿಗಳಿಗೇನೂ ಒಂದು ತೊಂದರೆಯಾಗದೆ ಇರಲಿ ಎಂಬ ಭಾವನೆಯಿಂದ ಆ ರೀತಿ ಮಾಡರಾಯಿತು. ಅಷ್ಟೇ ಅಲ್ಲದೆ ಈ ಒಂದು ವರ್ಷಕ್ಕೆ ಆ ರೀತಿ ಅವರು ಅಲ್ಲೇ ಪರೀಕ್ಷೆಗೆ ಕುಳಿತುಕೊಳ್ಳಲು ಕೇಂದ್ರನರ್ಕಾರ, ಬೊಂಬಾಯಿ ನರ್ಕಾರಗಳೆಲ್ಲ ಒಪ್ಪಿಕೊಂಡಿದ್ದುದರಿಂದ ನಾವೂ ಅದಕ್ಕೆ ಒಪ್ಪಿಕೊಳ್ಳಬೇಕಾಯಿತು.

8 P.M.

ಈ ಕಟ್ಟಡಗಳ ವಿಚಾರವಾಗಿ ಶ್ರೀ ವೀರಪ್ಪನವರು ಹೇಳಿದ್ದಾರೆ. ಇತರರೂ ಹೇಳಿದ್ದಾರೆ. ಯಾರು ಹೇಳಿದರೂ ಹಿಂದೆ ಪ್ರತಿಯೊಬ್ಬರಿಗೂ ಹೇಳಿದ ಉತ್ತರವನ್ನೇ ಎಲ್ಲರಿಗೂ ಹೇಳಬೇಕಾಗಿದೆ. ಉಪಾಧ್ಯಾಯರ ವಿಷಯವನ್ನೂ ಅವರು ಹೇಳಿದ್ದಾರೆ. ಗರ್ಲ್ಸ್ ಹೈಸ್ಕೂಲಿನಲ್ಲಿ ಇಂಗ್ಲಿಷಿನ ಸೆಕ್ಷನ್ನನ್ನು ಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಅದನ್ನು ವಿಚಾರ ಮಾಡಿ ಅವಕಾಶವಾಗುತ್ತದೆ ಎಂದು ಕಂಡು ಬಂದರೆ ಕೊಡುವ ಯೋಚನೆ ಮಾಡಬಹುದು. ಮತ್ತೆ ಕೋರಾರದಲ್ಲಿಯೂ ಮುಹಮ್ಮದೀಯರ ವಿದ್ಯಾರ್ಥಿನಿಯರಿಗೂ ಕೂಡ ಅಲ್ಲಿರುವ ಸ್ಕೂಲಿನಲ್ಲಿ ಓದುವುದಕ್ಕೆ ಕಷ್ಟವಾಗುತ್ತಿದೆ. ಅಲ್ಲಿರುವ ಯಾವುದೋ ಮಿಷ್ಷ ಸ್ಕೂಲಿನಲ್ಲಿ ಮಾತ್ರ ಇಂಗ್ಲೀಷನ್ನು ಹೇಳಿ ಕೊಡಲು ಅನುಕೂಲವಿದೆ ಎಂದು ಹೇಳಿದರು. ಈ ಸಲಹೆಗಳನ್ನೆಲ್ಲ ನರಿಯಾಗಿ ಪರಿಶೀಲಿಸಿ ಏನೇನು ಬೇಕು ಎನ್ನುವುದನ್ನೆಲ್ಲ ವಿಚಾರ ಮಾಡಬೇಕಾಗಿದೆ.

ಶ್ರೀ ವೀರಪ್ಪನವರು ಈ ಸ್ಕಾಲರ್ ಷಿಪ್ಪು ಕಮಿಟಿಗಳನ್ನು ಮಾಡುವಾಗ ಅಲ್ಲಿರತಕ್ಕ ಅಧಿಕಾರಿಗಳು ನರಿಯಾಗಿ ನಡೆಸುವುದಕ್ಕೆ ತಕ್ಕ ಕ್ರಮವನ್ನು ಮಾಡುತ್ತಿಲ್ಲ ಮತ್ತು ನರಕಾರ ನರಿಯಾಗಿ ಯೋಚಿನದೆ ಏನೇನೋ ತರೆಕೆಳಕಾಯಿತು ಎನ್ನುವಂತೆ ಹೇಳಿದರು.

ಶ್ರೀ ಪೈ. ವೀರಪ್ಪ.—ಹಾಗೆ ಆಪಾದನೆ ಮಾಡಲಲ್ಲ. ಅಲ್ಲಿ ಕಳುಹಿಸುವ ಲಸ್ಟು ನರಿಯಾದ ರೀತಿಯಲ್ಲಿ ಮಾಡದೆ ಈ ರೀತಿ ತೊಂದರೆಯಾಯಿತು ಎಂದು ಹೇಳಿದೆ. ಅಷ್ಟೇ.

ಶ್ರೀ ವಿ. ವೆಂಕಟಪ್ಪ.—ಇದನ್ನೆಲ್ಲ ನಾನೇ ನೋಡುವುದಕ್ಕೆ ಸಾಧ್ಯವಾಗಿಲ್ಲ. ಪಟ್ಟಿ ಪ್ರಿಂಟಾಗಿದ್ದರೆ ಅದರಲ್ಲಿ ಏನಾದರೂ ವ್ಯತ್ಯಾಸ ಇದ್ದರೆ ಒಂದೆರಡನ್ನು ವ್ಯತ್ಯಾಸಮಾಡಿ ಕಳುಹಿಸಬಹುದು. ಇದರಲ್ಲಿ ಯಾರನ್ನಾದರೂ ತಪ್ಪಿಸಬೇಕೆಂಬ ಉದ್ದೇಶವೇನೂ ನರಕಾರದವರಿಗೆ ಇಲ್ಲ ಎಂದು ಹೇಳಲು ಇಚ್ಛಿಸುತ್ತೇನೆ.

ಇನ್ನು ಕೆಲವರು ಸ್ಕೂಲುಗಳಲ್ಲಿ ಹಲಗೆ ಇಲ್ಲ ಮತ್ತಿತರ ಎಸ್ಸಿಮೇಟುಗಳು ಇಲ್ಲ ಎಂದು ಹೇಳಿದರು.

ಶ್ರೀ ಪೈ. ವೀರಪ್ಪ.—'Teachers Training College at Sri Ramadevarakatte' ವಿಚಾರವಾಗಿ ಪ್ರಸ್ತಾಪಿಸಿದ್ದೆ.

ಶ್ರೀ ವಿ. ವೆಂಕಟಪ್ಪ.—ಇದನ್ನು ಡೈರೆಕ್ಟರವರು ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಅವರು ಹೇಳುವ ಪ್ರಕಾರ ಸ್ಥಳವೇನೋ ಅನುಕೂಲವಾಗಿದೆ ಎಂದು ತಿಳಿಯಿತು. ಬೇರೆ ಸ್ಥಳ ಇದಕ್ಕಿಂತ ಉತ್ತಮವಾದುದು ಇಲ್ಲದಿದ್ದರೆ ಇದೇ ಸ್ಥಳದಲ್ಲಿ ಈ ಕಾಲೇಜನ್ನು ತೆರೆಯುವ ಆಲೋಚನೆ ಮಾಡಬೇಕಾಗುತ್ತದೆ.

ಇನ್ನು ಕೆಲವು ಶಾಲೆಗಳಲ್ಲಿ ಉಪಕರಣಗಳಿಲ್ಲ ಎಂದು ಎಲ್ಲರೂ ಹೇಳಿದ್ದಾರೆ. ಶ್ರೀ ದುಗ್ಗಪ್ಪನವರು ಬಡ್ಜೆಟ್ಟನ್ನು ನೋಡಿ ಅದರಲ್ಲಿ ವಿದ್ಯಾರ್ಥಿವೇತನಕ್ಕೆ ಎಷ್ಟು ಹಣ ಒದಗಿಸಿದೆ ಎನ್ನುವುದನ್ನು ನೋಡದಿದ್ದುದರಿಂದ ಮೊದಲನ ಲಸ್ಟನ್ನು ನೋಡಿಕೊಂಡು ಅಂಕಗಳನ್ನು ಹೇಳಿದರು. ಅದು ಹಾಗಲ್ಲ. ಈ ವರ್ಷ

(ಶ್ರೀ ವಿ. ವೆಂಕಟಪ್ಪ)

ಶೇಕಡಾ 68ರಷ್ಟು ಹೆಚ್ಚಿನ ಹಣ ಒದಗಿಸಿದೆ. Backward Class Boys in High, Middle and N.T.M. Schools ಗಾಗಿ Rs. 3,34,470 ಕೊಟ್ಟಿದೆ. Lumpsum for minor Backward Classes ಗಾಗಿ Rs. 1,720 ಕೊಟ್ಟಿದೆ.

Backward Class girls in High, Middle and New Type Middle Schools ಗಾಗಿ Rs. 39,000 Backward Class general scholarship in High and Middle Schools Rs. 51,000, Depressed Class Boys in High, Middle and N.T.M. Schools Rs. 1,17,060 ಕೊಟ್ಟಿದೆ. Depressed Class for girls in High, Middle and N.T.M. Schools Rs. 15,090 ಕೊಡಲಾಗಿದೆ. ಬಳ್ಳಾರಿ ಜಿಲ್ಲೆಗಾಗಿ Rs. 12,102 ಸೌತ್‌ಕ್ಯಾನರಾಗಾಗಿ Rs. 22,950 ಕೊಡಗಿಗೆ Rs. 15,852 ಕೊಳ್ಳೇಗಾಲಕ್ಕೆ Rs. 3,288 ಬೊಂಬಾಯಿ ಕರ್ನಾಟಕದ ಭಾಗಗಳಿಗೆ Rs. 1,28,135 ಹೀಗೆ ಈ ಸ್ಕಾಲರ್‌ಷಿಪ್‌ಗಳನ್ನು ಹಂಚಿಕೆಯಾಗಿದೆ.

ನಿಮ್ಮ ವರ್ಗದವರಿಗೇ ಬೇರೆ ಹಾಸ್ಟೆಲುಗಳನ್ನು ಮಾಡಬೇಕೆನ್ನುವ ಸೂಚನೆ ಮಾಡಿದ್ದಾರೆ. ಈಗ ದೇಶದ ಎಲ್ಲ ಕಡೆಗಳಲ್ಲಿಯೂ General Hostels ಎಂದು ಮಾಡಿ ಅಲ್ಲಿಯೇ ಎಲ್ಲರೂ ಸೇರಿ ವಿದ್ಯಾಭ್ಯಾಸ ಮಾಡಬೇಕೆಂದು ಯೋಚನೆ ಮಾಡಲಾಗಿದೆ. ಈಗ ಈ ಏರ್ಪಾಡು ನರಿಯಾಗುತ್ತಿದೆಯೇ ಇಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಮೈಸೂರಿನಲ್ಲಿ ಹತ್ತು Free Boarding Home ಇದ್ದುದು ಇವತ್ತಿನ ದಿನ ಯಾವ ಸ್ಥಿತಿಗೆ ಬಂದಿದೆ ಎನ್ನುವುದನ್ನು ನೋಡಬಹುದು. ಉತ್ತರ ಕರ್ನಾಟಕದಲ್ಲಿ ಎಂಟು-ಹತ್ತು ಹರಿಜನರ ಹಾಸ್ಟೆಲ್ಲುಗಳೇ ಇಲ್ಲ. ಇನ್ನು General Hostel ನಲ್ಲಿ ಸೇರಿಸಲು ಯಾವ ಪ್ರಯತ್ನ ಮಾಡಿದ್ದೀರಿ ?

ಶ್ರೀ ವಿ. ವೆಂಕಟಪ್ಪ.—ನಾವೇನು ಪ್ರಯತ್ನ ಮಾಡಬೇಕು ? ನಮ್ಮ ಮೈನೂರು ದೇಶದಲ್ಲಿ ಜನರಲ್ ಹಾಸ್ಟೆಲಿನಲ್ಲಿ ಹರಿಜನರನ್ನೂ ಬಿಡುತ್ತಾರೆ. ಹಾಗೆ ಬಿಡದೆ ಹೋಗಿದ್ದರೆ ನರಕಾರ ಏನಾದರೂ ಕ್ರಮ ತೆಗೆದು ಕೊಳ್ಳಬಹುದು.

ಶ್ರೀ ಬಿ. ಬಸವಲಿಂಗಪ್ಪ.—ಉತ್ತರ ಕರ್ನಾಟಕದಲ್ಲಿ, ಹೈದರಾಬಾದು ಕರ್ನಾಟಕದಲ್ಲಿ ಹರಿಜನರಿಗಾಗಿ ಒಂದು ಹಾಸ್ಟಲನ್ನೂ ಸ್ಟಾರ್ಟ್‌ಮಾಡಿಲ್ಲ.

ಅಧ್ಯಕ್ಷರು.—ನೀವು ತಿಳಿದುಕೊಂಡಿರುವಂತೆ ನರಕಾರ ಸ್ಟಾರ್ಟು ಮಾಡಿಲ್ಲ. ಆದರೆ Private Institution ಗಳು ಮಾಡಿವೆ ಮತ್ತು ಅಲ್ಲಿ ಕೆಲಸವಾಡುತ್ತಿವೆ.

ಶ್ರೀ ಜಿ. ಬಿ. ಶಂಕರರಾವ್ (ಹಿರೆಕೆರೂರು).—ಹುಬ್ಬಳ್ಳಿಯಲ್ಲಿ ಹರಿಜನರ ಹಾಸ್ಟೆಲ್ಲೊಂದು ಧಾರವಾಡದಲ್ಲಿ ಒಂದು ಇದೆ.

ಶ್ರೀ ವಿ. ವೆಂಕಟಪ್ಪ.—ಬೇರೆ ಹಾಸ್ಟೆಲುಗಳನ್ನು ಸ್ಟಾರ್ಟುಮಾಡಬೇಕೆಂಬ ಉದ್ದೇಶ ನರಿಹೋಗುವುದಿಲ್ಲ. ಈ ಅಸ್ಪೃಶ್ಯತಾ ನಿವಾರಣೆಯಾಗಬೇಕು ಎಂದು ನೀವೆಲ್ಲ ಹೇಳುತ್ತಿರುವಂತೆ ಆಗಬೇಕಾದರೆ ಬೇರೆ ಬೇರೆ ಹಾಸ್ಟೆಲುಗಳನ್ನು ತೆರೆದರೆ ಈ ಉದ್ದೇಶ ಸಾಧ್ಯವಾಗುವುದಿಲ್ಲ, ಜನರಲ್ ಹಾಸ್ಟಲುಗಳಲ್ಲಿ ಎಲ್ಲರೂ ಸೇರಲಿ, ಈಗ ಮೈಸೂರಿನಲ್ಲಿ ಸುತ್ತೂರು ಹಾಸ್ಟೆಲ್ಲದೆ.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿ ಐದು ಜನರನ್ನು ಮಾತ್ರ ಸೇರಿಸಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಆದರೆ ಹೀಗೆ ಹಾಸ್ಟಲನಲ್ಲಿ ಸೇರಿಸುವುದಿಲ್ಲ ಎಂದು ಕಂಡುಬಂದರೆ ನಾವೇನಾದರೂ ಮಾಡಬಹುದು. ಇಂತಹ ಜನರಲ್ ಹಾಸ್ಟಲುಗಳಲ್ಲಿ ಎಲ್ಲ ಕಮ್ಯುನಿಟಿಯ ಜನರೂ ಒಂದೇ ಕಡೆಯಲ್ಲಿರುವಂತೆ ಆಗಬೇಕು ಎಂತಲೇ ಈ ರೀತಿಯಾದ ಹಾಸ್ಟಲುಗಳನ್ನು ಏರ್ಪಾಡು ಮಾಡಬೇಕೆಂದಿದ್ದೇವೆ.

ಶ್ರೀ ಬಿ. ರಾಚಯ್ಯ.—ಅಸ್ಪೃಶ್ಯತಾ ನಿವಾರಣೆಯ ಉದ್ದೇಶ ಬಹಳ ಚೆನ್ನಾಗಿದೆ. ಆದರೆ ಹರಿಜನರು ಜನರಲ್ ಹಾಸ್ಟೆಲ್ಲಿಗೆ ಹೋಗಲು ಅವರ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಜನರಲ್ಲು ಹಾಸ್ಟಲುಗಳಲ್ಲಿ ಬೋರ್ಡಿಂಗು ಮತ್ತು ಹಾಸ್ಟಲ್ಲುಗಳ ಚಾರ್ಜು ಜಾಸ್ತಿಯಾಗಿದೆ. ಆದರೆ ಬೇರೆ ಕಡೆ ಇರುವ ಹರಿಜನರ ಹಾಸ್ಟಲುಗಳಲ್ಲಿ ಬೋರ್ಡಿಂಗು ಚಾರ್ಜುಗಳು ಬಹಳ ಕಡಮೆ. ಇಷ್ಟು ಚಾರ್ಜುಗಳನ್ನು ಕೊಟ್ಟು ಹಾಸ್ಟಲುಗಳಲ್ಲಿದಿರಲು ನರಕಾರ ನಬ್ಸಿಡ್ಯೆಜು ಮಾಡಿ ಇಷ್ಟು ಎಂದು ಕೊಟ್ಟರೆ ಹರಿಜನರ ಹಾಸ್ಟೆಲ್ಲಿಗೆ ಬದಲಾಗಿ ಈ ಜನರಲ್ ಹಾಸ್ಟೆಲನಲ್ಲರಲು ಅವಕಾಶವಾಗುತ್ತದೆ. ತಾವು ಈ ರೀತಿಯಾದ ಅವಕಾಶಕೊಟ್ಟರೆ ಅನುಕೂಲವಾಗಬಹುದು.

ಶ್ರೀ ವಿ. ವೆಂಕಟಪ್ಪ.—ಇದು ಯೋಚನೆಮಾಡಬೇಕಾದ ವಿಷಯ. ಹೇಗೆ ಹಾಸ್ಟಲುಗಳಲ್ಲಿ ಹೆಚ್ಚಿನ ಖರ್ಚು ಆಗುವ ವಿಚಾರ ಬೇರೆಯಾಯಿತು. ಇದಕ್ಕೆ ನಬ್ಸಿಡ್ಯೆಸ್ ಮಾಡಿ, ಹರಿಜನರ ಹಾಸ್ಟೆಲ್ಲಗೆ ಕೊಡುವ ಬದಲು ಹೀಗೆ ಕೊಟ್ಟರೆ ಬಹುಶಃ ತಪ್ಪಾಗಲಾರದು. ಆದರೂ ಇದನ್ನೆಲ್ಲ ನರಿಯಾಗಿ ಪರಿಶೀಲನೆಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಈ ವರ್ಷ ನಾಲ್ಕೈದು ಹಾಸ್ಟೆಲ್ಲುಗಳನ್ನಾದರೂ ತೆರೆಯುತ್ತೀರಾ ?

ಶ್ರೀ ವಿ. ವೆಂಕಟಪ್ಪ.—ಅದನ್ನು ವಿಚಾರಮಾಡುತ್ತೇನೆ.

ಹೈದರಾಬಾದ್ ಕರ್ನಾಟಕದಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲವೆಂದು ಹೇಳಿದ್ದಾರೆ. ಇದು ಎಲ್ಲರಿಗೂ ತಿಳಿದಿರುವ ಮಾತು. ಹೈದರಾಬಾದ್ ಕರ್ನಾಟಕದಲ್ಲಿ, ಹಳೆಯ ಮೈಸೂರಿನಲ್ಲಿ ಆಗಿರುವಷ್ಟು ವಿದ್ಯಾಭ್ಯಾಸದ ವಿಷಯದಲ್ಲಿ ಪ್ರಗತಿಯಾಗಿದೆ, ಮುಂದುವರಿದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಬಹಳಮಟ್ಟಿಗೆ ಹಿಂದುಳಿದಿದೆ. ಕೆಲವು ಶಾಲೆಗಳಲ್ಲಂತೂ ಹೋಗುವುದಕ್ಕೆ ಜಾಗವಿಲ್ಲದೆ ಕಿಷ್ಕಿಂಧಾಪಟ್ಟಣವಾಗಿದೆ. ಇಷ್ಟು ಅವ್ಯವಸ್ಥೆಯ ಸ್ಥಿತಿಯಲ್ಲಿ ಅಲ್ಲಯ ಶಾಲೆಗಳಿವೆ. ಅದಷ್ಟು ಮಟ್ಟಿಗೆ ಹೆಚ್ಚಿನ ಸಹಾಯಮಾಡಬೇಕೆಂದಿರುವುದಾಗಿ ಆಗಲೇ ಹೇಳಿದೆ. ಈ ಹಿಂದೆ ಕೊಟ್ಟ ಮುನ್ನೂರು ಚಿಲ್ಲರೆ ಸ್ಕೂಲುಗಳ ಪೈಕಿ 16 ಸ್ಕೂಲುಗಳನ್ನು ಹೈದರಾಬಾದ್ ಕರ್ನಾಟಕ ಭಾಗಕ್ಕೆ ಈ ವರ್ಷ ಕೊಟ್ಟಿದ್ದೇವೆ. ಹಾಗೆಯೇ ಇಲಾಖೆಯಿಂದ ಏನೇನು ಅನುಕೂಲಗಳು ಬೇಕೋ ಅವನ್ನೆಲ್ಲ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರೊಬ್ಬರು ತಮ್ಮ ಕಡೆ 12ಮಿಡಲ್ ಸ್ಕೂಲುಗಳು ಮಾತ್ರವಿದೆ ಎಂದು ಹೇಳಿದ್ದಾರೆ. ನಾವು ಇದಕ್ಕೆ ಒಂದುಏರ್ಪಾಡುಮಾಡಿದ್ದೇವೆ. ಪ್ರೈಮರಿ ಶಾಲೆಯಲ್ಲಿ ಸಾಕಾದಷ್ಟು ವಿದ್ಯಾರ್ಥಿಗಳಿದ್ದು, ಮುಂದಿನ ತರಗತಿಗೆ ಬೇಕಾಗುವಷ್ಟು ವಿದ್ಯಾರ್ಥಿಗಳ ಸಂಖ್ಯೆ ಇದ್ದರೆ, ಮುಂದಿನ ತರಗತಿಯನ್ನು ಎಂದರೆ ಐದನೆಯ ತರಗತಿಯನ್ನು ಪ್ರಾರಂಭಮಾಡಿ ಒಬ್ಬ ಉಪಾಧ್ಯಾಯರನ್ನು ಹೆಚ್ಚಿಗೆ ಕೊಡತಕ್ಕದ್ದು ಎಂದು ಏರ್ಪಾಡುಮಾಡಿದ್ದೇವೆ.

Single teachers schools ಇರುವುದರಿಂದ ಬಹಳ ತೊಂದರೆಯಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. single teachers schools ಪೂರ್ಣವಾಗಿ ತೆಗೆದುಹಾಕುವುದಕ್ಕೆ ಸಾಧ್ಯವಿಲ್ಲ. 15-20 ಅಥವ 25 ಜನ ಹುಡುಗರಿದ್ದರೆ ಅಂಥ ಶಾಲೆಗಳಿಗೆ ಇಬ್ಬರು ಉಪಾಧ್ಯಾಯರನ್ನು ಕಳುಹಿಸುವುದ ಕ್ಕಾಗುವುದಿಲ್ಲ. Strength ಹೆಚ್ಚಿದಹಾಗೆಲ್ಲ ಉಪಾ ಧ್ಯಾಯರನ್ನು ಜಾಸ್ತಿಮಾಡುತ್ತೇವೆ. ಆದುದರಿಂದ single teachers ಇರತಕ್ಕ ಶಾಲೆಗಳನ್ನು ತಪ್ಪಿಸು ವುದು ಸುಲಭವಲ್ಲ. ಉಪಾಧ್ಯಾಯರು ಬಾಗಿಲು ಮುಚ್ಚಿಕೊಂಡು ಹೋಗುತ್ತಾರೆ, ಸಾಕಷ್ಟು ಮುತುವ ರ್ಜಿಯಿಂದ ಇನ್ಸ್ಪೆಕ್ಟರುಗಳು ನೋಡಿಕೊಳ್ಳುವುದಿಲ್ಲ ವೆನ್ನುವ ಆಪಾದನೆ ಇದೆ. ಇದರ ಬಗ್ಗೆ ಅಧಿಕಾರಿ ಗಳು ಎಚ್ಚರದಿಂದ ಇರಬೇಕು. ಜನರೂ ನಿಗಾ ಕೊಡಬೇಕು. ನಾನು ನೋಡಲು ಹೋಗಿದ್ದ ಒಂದು ಸ್ಥಳದಲ್ಲಿ ಉಪಾಧ್ಯಾಯರಿರಲಿಲ್ಲ. ಅಲ್ಲಿನ ಜನರು ಉಪಾಧ್ಯಾಯರು ಕಾಯಿಲೆಯಿಂದ ಬರ ಲಿಲ್ಲ, ಹೇಳಿಕಳುಹಿಸಿದ್ದಾರೆ, ಕಾಗದ ಕಳುಹಿಸಿಲ್ಲ ವೆಂದು ಹೇಳಿದರು. ಇಂಥ ಪರಿಸ್ಥಿತಿ ಇದೆ. ಜನರು ಒಬ್ಬನ ಹೊಟ್ಟೆಯ ಮೇಲೆ ಹೊಡೆದ ಹಾಗೆ ಆಗು ತ್ತದೆ ಎಂದು ತಮ್ಮ ಮಕ್ಕಳಿಗೆ ಆಗುವ ತೊಂದರೆ ಯನ್ನು ಗಮನಿಸದೆ ಉಪಾಧ್ಯಾಯರ ಪರವಾಗಿ ಮಾತನಾಡುತ್ತಾರೆ. ಎಷ್ಟೋ ವೇಳೆ ಒಬ್ಬರ ವಿಷಯ ದಲ್ಲಿ ಹೆಚ್ಚು ಕರುಣೆ ಮತ್ತು ಪ್ರೀತಿಯನ್ನು ತೋರಿಸಿದರೆ ಅಂಥ ಕರುಣೆ ಅಥವಾ ಪ್ರೀತಿಯೇ ಕೆಲವು ಸಂದರ್ಭಗಳಲ್ಲಿ ತೊಂದರೆಯನ್ನುಂಟು ಮಾಡುತ್ತದೆ. ಉಪಾಧ್ಯಾಯರ ವಿಷಯದಲ್ಲಿ ಹಳ್ಳಿಯವರು ತೋರಿ ಸುವ ಕರುಣೆಯಿಂದ ಅವರ ಮಕ್ಕಳಿಗೆ ತೊಂದರೆ ಯಾಗುತ್ತದೆ. ಆದುದರಿಂದ ಜನರೂ ಕೂಡ ಸರ್ಕಾರ ದವರ ಜೊತೆಯಲ್ಲಿ ಸಹಕರಿಸಿ ಉಪಾಧ್ಯಾಯರು ಸರಿ ಯಾಗಿ ಕೆಲಸಮಾಡುವ ವಿಷಯದಲ್ಲಿ ಸ್ವಲ್ಪಮಟ್ಟಿಗೆ ನಿಗಾ ತೆಗೆದುಕೊಳ್ಳುವುದು, ಒಳ್ಳೆಯದು. Single Teachers Schools ಎಷ್ಟೋಕಡೆ ಚೆನ್ನಾಗಿ ಕೆಲಸ ಮಾಡುತ್ತಿವೆ. ಎಲ್ಲವೂ ಒಂದೇರೀತಿಯಾಗಿ ನಡೆಯು ತ್ತಿವೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಚೆಕ್ನಿಕಲ್ ವಿದ್ಯಾಭ್ಯಾಸದ ವಿಷಯದಲ್ಲಿ ಈ ವರ್ಷ ಮಾಡಿರತಕ್ಕ ಪ್ರಗತಿ ಇತರರಿಗಿಂತ ಕಡಮೆಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಈವರ್ಷ ಒಂದು ಸ್ಕೂಲನ್ನು ಹೊಸದಾಗಿ ಸ್ಥಾಪನೆಮಾಡದೆ ಇದ್ದರೂ ಎಲ್ಲ ಸ್ಕೂಲುಗಳಲ್ಲಿಯೂ ಬೇರೆ ಬೇರೆ ತರಗತಿಗಳನ್ನು ಪ್ರಾರಂಭಮಾಡಿ, ಇಂಡಿಯಾ ಸರ್ಕಾರದವರ ಸಹಾಯ ಪಡೆದು ಸುಮಾರು 900 ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾ ಸಕ್ಕೆ ಏರ್ಪಾಡು ಮಾಡಿದ್ದೇವೆ. ಈವರ್ಷ 7ಪಾಲಿ ಚೆಕ್ನಿಕ್ ಆಗಬೇಕೆಂದು ಏರ್ಪಾಡಾಗಿದೆ. ಸ್ವಲ್ಪ ಹೆಚ್ಚು ಕಡಮೆ ಎಲ್ಲಭಾಗಗಳಲ್ಲಿಯೂ ಇವು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ. ಆದಷ್ಟು ಮಟ್ಟಿಗೆ ಹುಡುಗರು ಕಾಲೇಜು ವಿದ್ಯಾಭ್ಯಾಸಕ್ಕೆ ಬರು ವುದನ್ನು ತಪ್ಪಿಸಿ ಕ್ರಿಯಾತ್ಮಕ ಶಿಕ್ಷಣವನ್ನು ತೆಗೆದು ಕೊಳ್ಳುವಂತೆ ಮಾಡಬೇಕೆಂದು ಸೂಚನೆ ಇವೆ. ಇದನ್ನು ಸರ್ಕಾರದವರು ಪೂರ್ಣವಾಗಿ ಒಪ್ಪುತ್ತಾರೆ ಮತ್ತು ಅದಕ್ಕೆ ಏನು ಏರ್ಪಾಡುಮಾಡಬೇಕೋ ಅದನ್ನ ಮಾಡುತ್ತಾರೆ. Multi-purpose High Schools ಸಾಕಾದಷ್ಟು ಮಾಡಬೇಕೆಂಬ ಉದ್ದೇಶವಿದೆ. ಅದನ್ನು ಆದಷ್ಟು ಜಾಗ್ರತೆ ಮಾಡುವುದಕ್ಕೆ ಪ್ರಯತ್ನಮಾಡು ತ್ತೇವೆ. ಎಲ್ಲ ಮಿತ್ರರೂ ಕೂಡ ವಿದ್ಯಾಭ್ಯಾಸದ ವಿಷಯ ದಲ್ಲಿ ಸಲಹೆಗಳನ್ನೂ ಕೊಟ್ಟಿರುವುದಲ್ಲದೆ ಎಷ್ಟು ಹಣ ಬೇಕಾದರೂ ಕೊಡುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳತಕ್ಕದ್ದು ಸಂತೋಷದ ವಿಷಯ. ನಿಜವಾಗಿಯೂ ಯಾವುದು ದೇಶದ ಉದ್ಧಾರದ ಕಾರ್ಯದಲ್ಲಿ ಮುಖ್ಯ ವಾದುದೋ, ಆ ಕಾರ್ಯಕ್ಕೆ ಎಲ್ಲ ಜನರ ಸಹಾಯ ಮತ್ತು ಸೌಹಾರ್ದವಿದೆ. ಎಷ್ಟು ಹಣಬೇಕಾದರೂ ಕೊಡುತ್ತೇವೆ ಆದರೆ ಜಾಗ್ರತೆ ಕೆಲಸಕಾರ್ಯ ನಡೆಸ ಬೇಕೆಂದು ಹೇಳಿದ್ದಾರೆ. ಎಷ್ಟುಮಟ್ಟಿಗೆ ಜಾಗ್ರತೆ ನಡೆಸುವುದಕ್ಕೆ ಸಾಧ್ಯವೋ ಅಷ್ಟು ಮಟ್ಟಿಗೆ ಪ್ರಯತ್ನ ಪಡುತ್ತೇವೆಂದು ಸೂಚನೆಯನ್ನು ಕೊಟ್ಟು ಎಲ್ಲ ಸದಸ್ಯ ರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಬೆಂಗಳೂರಿನಲ್ಲಿರುವ ಇಂಜಿನಿಯರಿಂಗ್ ಸ್ಕೂಲುವಿಚಾರ ಏನು ಸ್ವಾಮಿ ?

ಶ್ರೀ ವಿ. ವೆಂಕಟಪ್ಪ.—ಒಂದೇಕಡೆ ನಾಲ್ಕು ಇಂಜಿ ನಿಯರಿಂಗ್ ಶಿಕ್ಷಣ ಶಾಲೆಗಳಿರಕೂಡದು. ಇಂಜಿನಿಯ ರಿಂಗ್ ಸ್ಕೂಲನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು 1951ನೆಯ ಇಸವಿಯಿಂದಲೂ ಚೆಕ್ಕಿಕಲ್ ಕಮಿಟಿಯ ವರು ಒತ್ತಾಯ ಮಾಡುತ್ತಿದ್ದಾರೆ. ಲಕ್ಷ್ಮಣಸ್ವಾಮಿ ಮೊದಲಿಯಾರರ ನೇತೃತ್ವದಲ್ಲಿ ಒಂದು ಸಮಿತಿಯು ಬಂದಾಗ ಅವರು ಮುಖ್ಯಮಂತ್ರಿಗಳ ಮನೆಯಲ್ಲಿ ಸೇರಿ, ಪರಿಶೀಲನೆಮಾಡಿ, ಎಲ್ಲ ಒಂದೇಕಡೆ ಇರತಕ್ಕದ್ದು ಸರಿಯಲ್ಲ, ಅಲ್ಲಿ ಸಾಕಾದಷ್ಟು ಸ್ಥಳವಿಲ್ಲ, ಇಂಜಿನಿಯ ರಿಂಗ್ ಕಾಲೇಜನ್ನು ವಿಸ್ತರಣೆ ಮಾಡುವುದಕ್ಕೆ ಕೇಂದ್ರ ದಿಂದ 12 ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಇಂಜಿನಿಯ ರಿಂಗ್ ಕಾಲೇಜನ್ನು ವಿಸ್ತರಣೆ ಮಾಡಬೇಕಾದರೆ ಇಂಜಿನಿಯರಿಂಗ್ ಸ್ಕೂಲಿಗೆ ಅಲ್ಲಿ ಸ್ಥಳವಿಲ್ಲವಾದ್ದರಿಂದ ಬೇರೆಕಡೆಗೆ ವರ್ಗಾಯಿಸಲು ಏರ್ಪಾಡುಮಾಡ ಬೇಕೆಂದು ಹೇಳಿದುದರ ಮೇಲೆ ಈಸಲ ಇಂಜಿನಿಯ ರಿಂಗ್ ಸ್ಕೂಲಿಗೆ ವಿದ್ಯಾರ್ಥಿಗಳನ್ನು ಸೇರಿಸುವುದನ್ನು ತಪ್ಪಿಸಿದ್ದೇವೆ. ಈ ಬೆಂಗಳೂರಿನಲ್ಲಿ ಉತ್ತರದಲ್ಲೆ ಒಂದು, ಮತ್ತು ದಕ್ಷಿಣದಲ್ಲಿ ಒಂದು ಹೀಗೆ ಎರಡು ಪಾಲಿಚೆಕ್ನಿಕ್ಸ್ ಆಗುವುದರಿಂದ ವಿದ್ಯಾರ್ಥಿಗಳಿಗೆ ಯಾವ ವಿಧವಾದ ತೊಂದರೆಯೂ ಆಗುವುದಿಲ್ಲ. ಇಂಜಿನಿಯ ರಿಂಗ್ ಸ್ಕೂಲನ್ನು ಮುಚ್ಚಬೇಕು ಎಂದು ತೀರ್ಮಾ ನವಾಗಿದೆ. ಆದರೆ ಎರಡನೆ ಮತ್ತು ಮೂರನೆ ಕ್ಲಾಸುಗಳಲ್ಲಿರತಕ್ಕವರಿಗೆ ಅವರ ವ್ಯಾಸಂಗ ಮುಗಿ ಯುವವರೆಗೂ ಇಲ್ಲಿಯೇ ಶಿಕ್ಷಣ ಮುಂದುವರೆಯು ತ್ತದೆ.

Sri G. B. SHANKAR RAO.—I would like to be enlightened onthe policy of the Government in regard to the teaching of drawing in the State. In Bombay Karnataka area, drawing is a compulsory subject in schools. There is no institute to train these teachers in drawing. For that they go to J.J. School of Arts in Bombay. They have to spend Rs. 25 as examination fees. I was told that the same state of affairs continues in Hyderabad Karnatak and Madras Karnatak also. I want to know the policy of the Government on teaching drawing in schools, whether they have any scheme for starting training institution for training drawing teachers and whether they themselves conduct the examinations.

Sri J. B. MALLARADHYA.—In the Technical Institute at Mysore there is a Fine Arts Course for training pupils in drawing. They get a diploma at the end of five years. There is no separate institute for training drawing teachers.

Sri G. B. SHANKAR RAO.—In Bombay, drawing is taught as a compulsory subject in schools. I want to know what arrangement Government will make with regard to students that appear for drawing examination in schools?

ಶ್ರೀ ಎ. ವೆಂಕಟಪ್ಪ.—ಈವಾಗ ನಮ್ಮ ಗಮನಕ್ಕೆ ತಂದಿದ್ದೀರಿ. ಏನುಮಾಡುವುದಕ್ಕೆ ಸಾಧ್ಯವೆಂಬುದನ್ನು ಯೋಚನೆಮಾಡುತ್ತೇವೆ.

ಬೊಂಬಾಯಿ ಕರ್ಣಾಟಕ, ಹೈದರಾಬಾದ್ ಕರ್ಣಾಟಕ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳಲ್ಲಿ ವಿದ್ಯಾಭ್ಯಾಸಕ್ಕೆ ಶುಲ್ಕ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ತೆಗೆದುಹಾಕಬೇಕು ಎಂದು ಸೂಚನೆಗಳು ಬಂದಿವೆ. ಅನೇಕರಿಗೆ ಗೊತ್ತಿರುವ ಹಾಗೆ free primary education ಕಡ್ಡಾಯವಾಗಿ ಕೊಡಬೇಕು ಎಂದು ಅದಕ್ಕೆ ಏನೇನು ಕಾರ್ಯಕ್ರಮ ಬೇಕೋ ಅದನ್ನು ತೆಗೆದುಕೊಂಡಿದ್ದೇವೆ. 1961ನೆಯ ಇಸವಿಯೊಳಗೆ ಎಲ್ಲ ಕಡೆಯೂ ಕಡ್ಡಾಯ ವಿದ್ಯಾಭ್ಯಾಸ ಪದ್ಧತಿ ಜಾರಿಗೆ ಬರಬೇಕು ಎನ್ನುವುದಕ್ಕೆ ಏನು ಏರ್ಪಾಡುಮಾಡಬೇಕೋ ಅದನ್ನು ಮಾಡುತ್ತೇವೆ. ಈ ಬಾಬಿನಿಂದ ಸುಮಾರು 15 ಲಕ್ಷ ರೂಪಾಯಿ ಸರ್ಕಾರಕ್ಕೆ ಹೋಗುತ್ತದೆ. ಇದನ್ನೆಲ್ಲ ಪರಿಶೀಲನೆಮಾಡಿ ಆದಷ್ಟು ಜಾಗ್ರತೆ ದೇಶದ ಎಲ್ಲಕಡೆಯೂ ಒಂದೇ ರೀತಿಯ ವ್ಯವಸ್ಥೆಯಾಗುವಂತೆ ಮಾಡುತ್ತೇವೆ. ಹಳೆಯ ಮೈಸೂರಿನಲ್ಲಿ ಉಚಿತ ವಿದ್ಯಾಭ್ಯಾಸವಿದ್ದು ಬೇರೆಕಡೆ ಶುಲ್ಕ ಕೊಡತಕ್ಕದ್ದು ಸರಿ ಎಂದು ಸರ್ಕಾರದವರು ತಿಳಿದುಕೊಂಡಿಲ್ಲ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಎಷ್ಟರಮಟ್ಟಿಗೆ ಹಣವನ್ನೊದಗಿಸುವುದಕ್ಕೆ ಸಾಧ್ಯ, ಎಷ್ಟು ಹಣವನ್ನು ಹೆಚ್ಚಿಗೆ ಒದಗಿಸಬಹುದು ಎಂದುನೋಡಿ ಬಹುಶಃ ಮುಂದೆ ಶಾಲೆಗಳು ತೆರೆಯುವ ಕಾಲಕ್ಕೆ ಒಂದು ತೀರ್ಮಾನಕ್ಕೆ ಬರುತ್ತೇವೆಂದು ಮಾತ್ರ ಹೇಳಬಲ್ಲೆ.

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಬಳ್ಳಾರಿ ಜಿಲ್ಲೆ ಹಳೆಯ ಮೈಸೂರಿಗೆ ಸೇರಿದ್ದೋ ಅಥವ ಹೊಸ ಭಾಗಗಳಿಗೆ ಸೇರಿದ್ದೋ? ಅಲ್ಲಿಯ ಶಾಲೆಗಳ ಪರಿಸ್ಥಿತಿ ಏನು?

ಶ್ರೀ ವಿ. ವೆಂಕಟಪ್ಪ.—ಈಗ ಏನುಮಾಡಿದ್ದೇವೆ ಎಂದರೆ ಎಲ್ಲೆಲ್ಲಿ ಯಾವ ಯಾವ ರೀತಿಯಲ್ಲಿದೆಯೋ ಅದೇ ರೀತಿ ನಡೆದುಕೊಂಡು ಬರಲಿ ಎಂದು ಹೇಳಲಾಗಿದೆ. ಬಳ್ಳಾರಿಯಲ್ಲಿ ಇರುವ ಪದ್ಧತಿಯನ್ನು ಬದಲಾವಣೆ ಮಾಡಬೇಕು ಎನ್ನುವ ವಿಷಯ ಬಂದಾಗ ಹಿಂದಿನ ಸರ್ಕಾರದವರು ಬದಲಾವಣೆ ಮಾಡಬೇಕಾಗಿಲ್ಲ, ಹಿಂದಿನಿಂದ ಯಾವರೀತಿ ಇತ್ತೋ ಅದೇರೀತಿ ಮುಂದುವರೆಸಬೇಕೆಂದು ಮಾಡಿದ್ದಾರೆ. ಇಪ್ಪೊತ್ತು ಎಲ್ಲ ಕಡೆಯೂ status quo ಇದೆ. ನಾನು ಬಳ್ಳಾರಿಗೆ ಹೋಗಿ ಬಂದಕೂಡಲೆ ಶುಲ್ಕ ವಿಧಿಸುವುದನ್ನು ತೆಗೆದು ಹಾಕಬೇಕು, ಇರುವುದು ಅನ್ಯಾಯವಿಲ್ಲ ಎಂದು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರರಿಗೆ ಬರೆದು ವಿಚಾರ ಮಾಡಬೇಕೆಂದು ಹೇಳಿದ್ದರ ಮೇಲೆ ಅವರು ಎಲ್ಲವನ್ನೂ work out ಮಾಡಿದ್ದಾರೆ. ದೇಶದಲ್ಲೆಲ್ಲ ಒಂದೇ ರೀತಿಯ ಪದ್ಧತಿ ಇರುವುದಕ್ಕೆ ಯಾವ ರೀತಿ ಮಾಡಬೇಕೆಂದು ಯೋಚನೆಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ.

Mr. SPEAKER.—The question is:

"That a sum not exceeding Rs. 10,78,46,200 be granted to the Government to defray the charges which will come in course of payment during the year ending 31st day of March 1959, in respect of 'Education'."

The motion was adopted.

Mr. SPEAKER.—The House now rises and will meet to-morrow at 1 P.M.

The House adjourned at Twenty-two Minutes past Eight of the Clock to meet again at One of the Clock on Wednesday, the 16th April 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ನೋಂದಣಿ ಸಂಖ್ಯೆ Accession No. 4765(3)
ದಿನಾಂಕ Date .....

WD 996—GPB—900—30-9-58.